ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಾರ್ಚ್ 26 ಬುಧವಾರ 2025
ಸಂಪುಟ: 45 | ಸಂಚಿಕೆ: 336 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಹನಿಟ್ರ್ಯಾಪ್ ಪ್ರಕರಣ: ಗೃಹ ಸಚಿವ ಪರಮೇಶ್ವರ್‌ಗೆ ರಾಜಣ್ಣ ಮನವಿ

ಉನ್ನತ ಮಟ್ಟದ ತನಿಖೆಗೆ ಆಗ್ರಹ



ಜಂಟಿ ಪತ್ರಿಕಾಗೋಷ್ಠಿಯಲ್ಲಿ ಸಚಿವರಾದ ಡಾ. ಜಿ.ಪರಮೇಶ್ವರ್, ಕೆ.ಎನ್.ರಾಜಣ್ಣ.

ಬೆಂಗಳೂರು, ಮಾ.25– ರಾಜ್ಯ ರಾಜಕಾರಣ ಮಾತ್ರವಲ್ಲದೆ ರಾಷ್ಟ್ರ ಮಟ್ಟದಲ್ಲೂ ಭಾರಿ ಸದ್ದು ಮಾಡುತ್ತಿರುವ ಹನಿಟ್ರ್ಯಾಪ್ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಮಂಗಳವಾರ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದಾರೆ.

ಇಂದು ಸಂಜೆ ಬೆಂಗಳೂರಿನ ಸದಾಶಿವ ನಗರದಲ್ಲಿರುವ ಗೃಹ ಸಚಿವ ಪರಮೇಶ್ವರ ಅವರ ನಿವಾಸಕ್ಕೆ ಭೇಟಿ ನೀಡಿದ ರಾಜಣ್ಣ, ಉನ್ನತ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಹನಿಟ್ರ್ಯಾಪ್ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ಲಿಖಿತ ಮನವಿ ನೀಡಿದರು.

ಬಳಿಕ ರಾಜಣ್ಣ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಪರಮೇಶ್ವರ್, ಈ ವಿಚಾರದಲ್ಲಿ ನಾನು ದೂರು ಸ್ವೀಕರಿಸಲು ಸಾಧ್ಯವಿಲ್ಲ. ಪೊಲೀಸ್ ಠಾಣೆಯಲ್ಲೇ ದೂರು ಸಲ್ಲಿಸಬೇಕು. ನಾನು ಮನವಿ ಮಾತ್ರ ಸ್ವೀಕರಿಸಿದ್ದೇನೆ. ಈ ಮನವಿ ಆಧಾರದ ಮೇಲೆ ಕಾನೂನು ತಜ್ಞರ ಜೊತೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದರು.

ರಾಜಣ್ಣ ಅವರು ಸದನದಲ್ಲಿ ತಮಗೂ ಹನಿಟ್ರ್ಯಾಪ್ ಮಾಡಲು ಯತ್ನಿಸಲಾಗಿದೆ. ಈ ಬಗ್ಗೆ ಗೃಹ ಸಚಿವರಿಗೆ ಮನವಿ ಕೊಡುತ್ತೇನೆ ಎಂದು ಹೇಳಿದ್ದರು. ಇದು ನಿಜಾ ಆಗಿದ್ದರೆ, ಉನ್ನತ ಮಟ್ಟದ ತನಿಖೆ ಮಾಡುವುದಾಗಿ ಹೇಳಿದ್ದೆ. ಆದರೆ, ರಾಜಣ್ಣ ಅವರಿಗೆ ಪೂರ್ವ ನಿಯೋಜಿತ ಕೆಲಸದ ನಡುವೆ ನನಗೆ ಮನವಿ ಕೊಡಲು ಆಗಲಿಲ್ಲ. ಇಂದು ನನಗೆ ಮನವಿ ಕೊಟ್ಟಿದ್ದಾರೆ. ವಿಧಾನಸಭೆಯಲ್ಲಿ ಪ್ರಸ್ತಾಪಿಸಿದಂತೆ ಮನವಿ ಕೊಟ್ಟಿದ್ದು, ಮುಂದಿನ ಕ್ರಮದ ಬಗ್ಗೆ ಸಿಎಂ ಜೊತೆ ಚರ್ಚೆ ಮಾಡುತ್ತೇವೆ ಎಂದರು. ಬಳಿಕ ಮಾತನಾಡಿದ ರಾಜಣ್ಣ, ಹನಿಟ್ರ್ಯಾಪ್ ಸಂಬಂಧ ಸದನದಲ್ಲಿ ನನ್ನ ಹೆಸರನ್ನು ಪ್ರಸ್ತಾಪಿಸಲಾಗಿತ್ತು. ಆ ಕಾರಣದಿಂದ ನಾನು ದೂರು ಸಲ್ಲಿಸಿದ್ದೇನೆ. ಈ ರೀತಿಯ ಕೆಟ್ಟ ಚಾಳಿ ಸಾರ್ವಜನಿಕ ಜೀವನದಲ್ಲಿ ಮುಂದುವರೆಯಬಾರದು ಎಂದರು. ದೂರು ನೀಡಿದರೆ ತನಿಖೆ ನಡೆಸುವುದಾಗಿ ಗೃಹ ಸಚಿವರು ಭರವಸೆ ನೀಡಿದ್ದರು. ಅದರಂತೆ ಇಂದು ನಾನು ದೂರು ಸಲ್ಲಿಸಿದ್ದೇನೆ ಎಂದರು. ಈ ಮಧ್ಯೆ ಪ್ರವಾಸದಲ್ಲಿದ್ದ ರಾಜಣ್ಣ ಅವರನ್ನು ಸಂಪರ್ಕಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನೀವು ವಿಧಾನಸಭೆಯಲ್ಲಿ ಹೇಳಿದಂತೆ ಗೃಹ ಸಚಿವ ಡಾ.ಪರಮೇಶ್ವರ್ ಅವರಲ್ಲಿ ದೂರು ದಾಖಲಿಸುವಂತೆ ಸಲಹೆ ನೀಡಿದ್ದರು.

ಇದಕ್ಕೂ ಮುನ್ನ ಮುಖ್ಯಮಂತ್ರಿ ಸಲಹೆ ಮೇರೆಗೆ ರಾಜಣ್ಣ, ಗುರುವಾರ ನೀಡಬೇಕಿದ್ದ ದೂರನ್ನು ಇಂದು ಬೆಳಗ್ಗೆ ಗೃಹ ಸಚಿವ ಡಾ.ಪರಮೇಶ್ವರ್ ಅವರನ್ನು ನೆಲಮಂಗಲದ ಬಳಿ ಇರುವ ಅವರ ವೈದ್ಯಕೀಯ ಕಾಲೇಜಿನಲ್ಲಿ ಭೇಟಿ ಮಾಡಿ ಚರ್ಚೆ ನಡೆಸಿ, ಮೊದಲು ದೂರು ನೀಡಿದ್ದರು.

ಸಿಬಿಐ ಇಲ್ಲವೆ ಎಸ್‌ಐಟಿ ತನಿಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಿಂತನೆ



ಬೆಂಗಳೂರು, ಮಾ. 25(ಕೆಎಂಶಿ)– ಹನಿಟ್ರ್ಯಾಪ್ ಪ್ರಕರಣವನ್ನು ಎಸ್‌ಐಟಿ ಮೂಲಕ ತನಿಖೆ ನಡೆಸಲು ಸರ್ಕಾರ ಮುಂದಾಗಿದೆ.

ಪ್ರಕರಣದ ಉನ್ನತ ಮಟ್ಟದ ತನಿಖೆ ನಡೆಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ ನಂತರ ಹನಿಟ್ರ್ಯಾಪ್ ಹಿಂದಿರುವ ವ್ಯಕ್ತಿಗಳ ಪತ್ತೆಗೆ ಮುಂದಾಗಿದ್ದಾರೆ. ಗುರುವಾರ ಸಚಿವ ಸಂಪುಟ ಸಭೆ ನಡೆಯಲಿದ್ದು, ಅಂದು ಪ್ರಕರಣವನ್ನು ಸಿಬಿಐ ಇಲ್ಲವೆ ಎಸ್‌ಐಟಿ ಮೂಲಕ ತನಿಖೆ ನಡೆಸಬೇಕೇ ಎಂಬ ಕುರಿತು ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಎರಡು ಬಾರಿ ಒಬ್ಬ ಹುಡುಗ, ಒಮ್ಮೆಗೆ ಪ್ರತ್ಯೇಕ ಹುಡುಗಿಯರು ಹನಿಟ್ರ್ಯಾಪ್‌ಗೆ ಯತ್ನಿಸಿದ್ದರು

- 'ಹನಿ' ರಹಸ್ಯ ಬಿಚ್ಚಿಟ್ಟ ಸಚಿವ ರಾಜಣ್ಣ
- ಹುಡುಗಿಯರು ನೀಲಿ ಜೀನ್ಸ್ ಪ್ಯಾಂಟ್, ಟಾಪ್ ಧರಿಸಿದ್ದರು
- ಎರಡನೇ ಬಾರಿ ಬಂದಿದ್ದ ಮಹಿಳೆ ತಾನು ಹೈಕೋರ್ಟ್ ಲಾಯರ್ ಎಂದಿದ್ದಳು

ಬೆಂಗಳೂರು: ರಾಜಣ್ಣ ತುರ್ತು ಪತ್ರಿಕಾಗೋಷ್ಠಿಯಲ್ಲಿ ತಮ್ಮ ಮೇಲೆ ಹನಿಟ್ರ್ಯಾಪ್‌ಗೆ ಯತ್ನಿಸಿದ ವಿವರವನ್ನು ಬಹಿರಂಗಪಡಿಸಿದ್ದಾರೆ.

ಘಟನೆ ಕುರಿತು ವಿವರ ನೀಡಿದ ಅವರು, ಎರಡು ಬಾರಿ ಒಬ್ಬ ಹುಡುಗ, ಇಬ್ಬರು ಹುಡುಗಿಯರನ್ನು ಪ್ರತ್ಯೇಕವಾಗಿ ಕರೆತಂದು ನನ್ನ ಹನಿಟ್ರ್ಯಾಪ್‌ಗೆ ಯತ್ನಿಸಿದ.

ಎರಡು ಬಾರಿ ಬಂದಿದ್ದ ಹುಡುಗಿಯರು ನೀಲಿ ಜೀನ್ಸ್ ಪ್ಯಾಂಟ್ ಹಾಗೂ ಟಾಪ್ ಧರಿಸಿದ್ದರು, ಅವರ ಭೇಟಿ ಸಂದರ್ಭದಲ್ಲೆಲ್ಲಾ, ನಿಮ್ಮ ಬಳಿ ಖಾಸಗಿಯಾಗಿ ಕೆಲವು ವಿಷಯಗಳನ್ನು ಹಂಚಿಕೊಳ್ಳಬೇಕಿದೆ. ನಮಗೆ ಬಹಳ ಸಮಯ ನೀಡಿ ಎಂದು ಮನವಿ ಮಾಡಿದ್ದರು. ಎರಡನೇ ಬಾರಿಗೆ ಬಂದಿದ್ದ ಮಹಿಳೆ ತಾನು ಹೈಕೋರ್ಟ್ ಲಾಯರ್ ಎಂದು ಪರಿಚಯ ಮಾಡಿಕೊಂಡಿದ್ದರು. ಅವರುಗಳ ನಡವಳಿಕೆ ಬಗ್ಗೆ ನನಗೆ ಭಾರಿ ಅನುಮಾನ ಕಾಡಿತು, ನಾನು ಅವರಿಗೆ ಹೆಚ್ಚಿನ ಸಮಯ ನೀಡಲಿಲ್ಲ ಎಂದರು.

ನನ್ನ ಮನೆಯಲ್ಲಿ ಸಿಸಿಟಿವಿ ಕ್ಯಾಮರಾ ಇಲ್ಲದ ಕಾರಣ ಅವರುಗಳು ಭೇಟಿ ನೀಡಿದ ದೃಶ್ಯಗಳು ಲಭ್ಯವಿಲ್ಲ. ಆದರೆ, ಆ ಹುಡುಗ ಮತ್ತು ಹುಡುಗಿಯರನ್ನು ಗುರುತು ಹಿಡಿಯಬಲ್ಲೆ.

ಮನೆಗೆ ಬಂದವರ ವಿವರ ತಿಳಿಯಲು ಪ್ರಯತ್ನಿಸಿದೆ. ಆದರೆ, ಯಾವುದೇ ಮಾಹಿತಿ ಸಿಕ್ಕಿಲ್ಲ. ಅವರ ಫೋಟೋ ತೋರಿಸಿದರೆ ಗುರುತು ಹಿಡಿಯಬಲ್ಲೆ ಎಂದರು. ನಾನು ವಿಧಾನ ಸಭೆಯಲ್ಲಿ ನೀಡಿರುವ ಹೇಳಿಕೆಗೆ ಇಂದಿಗೂ ಬದ್ಧನಾಗಿದ್ದೇನೆ. ಆಡಳಿತ ಪಕ್ಷ ಮಾತ್ರವಲ್ಲ, ಪ್ರತಿಪಕ್ಷದವರು ಮತ್ತು ದೆಹಲಿ ನಾಯಕರೂ ಹನಿಟ್ರ್ಯಾಪ್ ಬಲೆಗೆ ಬಿದ್ದಿದ್ದಾರೆ. ■ 6ನೇ ಪುಟಕ್ಕೆ

ಕ್ಷಯರೋಗ ನಿರ್ಮೂಲನೆಗೆ ಬಿಸಿಜಿ ಲಸಿಕೆ ಕಾರ್ಯಕ್ರಮ

ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್ ಚಾಲನೆ



ಕ್ಷಯ ರೋಗ ನಿರ್ಮೂಲನೆಗೆ ಬಿಸಿಜಿ ಲಸಿಕಾ ಕಾರ್ಯಕ್ರಮಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಂಗಳವಾರ ಚಾಲನೆ ನೀಡಿದರು.

ಯಾರು ಬಿಸಿಜಿ ಲಸಿಕೆ ಪಡೆಯಬಹುದು

- ಕಳೆದ 05 ವರ್ಷಗಳಲ್ಲಿ ಕ್ಷಯರೋಗಕ್ಕೆ ಒಳಗಾಗಿ ಚಿಕಿತ್ಸೆ ಪಡೆದವರು.
- ಸಕ್ರಿಯ ಕ್ಷಯರೋಗಿಗಳ ನಿಕಟ ಸಂಪರ್ಕಿತರು.
- ದೇಹ ಗಾತ್ರದ ಸೂಚ್ಯಂಕ 18 ಕ್ಕಿಂತ ಕಡಿಮೆ ಇರುವವರು.
- ಸ್ವಯಂ ವರದಿ ಮಾಡುವ ಮಧುಮೇಹಿಗಳು.
- ಸ್ವಯಂ ವರದಿ ಮಾಡುವ ಧೂಮಪಾನಿಗಳು.
- 60 ವರ್ಷ ಮೇಲ್ಪಟ್ಟವರು ಒಂದು ಬಾರಿ ಮಾತ್ರ ಬಿಸಿಜಿ ಲಸಿಕೆ ಪಡೆಯಬಹುದು.

ಬೆಂಗಳೂರು, ಮಾ.25– ಕರ್ನಾಟಕವನ್ನು ಕ್ಷಯರೋಗ ಮುಕ್ತ ರಾಜ್ಯವನ್ನಾಗಿ ರೂಪಿಸುವತ್ತ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ಆರೋಗ್ಯ ಇಲಾಖೆ, ಮಂಗಳವಾರ ಬಿಸಿಜಿ ಲಸಿಕೆ ಹಾಕುವ ಬೃಹತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ವಿಶ್ವ ಕ್ಷಯರೋಗ ದಿನವಾದ ಇಂದು ಬಿಸಿಜಿ ಲಸಿಕಾ ಕಾರ್ಯಕ್ರಮಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಆರೋಗ್ಯ ಸಚಿವರು, ರಾಜ್ಯದ 16 ಜಿಲ್ಲೆಗಳಲ್ಲಿ ಬಿಸಿಜಿ ಲಸಿಕೆ ಹಾಕುವ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗಿದ್ದು, ಕ್ಷಯರೋಗ ಬರದಂತೆ ತಡೆಯುವಲ್ಲಿ ಈ ಕಾರ್ಯಕ್ರಮ ಮಹತ್ವದ ಪಾತ್ರ ವಹಿಸಲಿದೆ ಎಂದರು. ಈಗಾಗಲೇ ರಾಜ್ಯದಲ್ಲಿ 1060 ಗ್ರಾಮ ಪಂಚಾಯತಿಗಳನ್ನು ಕ್ಷಯರೋಗ ಮುಕ್ತ ಪಂಚಾಯತಿಗಳನ್ನಾಗಿ ರೂಪಿಸಲಾಗಿದೆ. ಅಲ್ಲದೇ ಕ್ಷಯ ನಿರ್ಮೂಲನಾ ಕಾರ್ಯಕ್ರಮದ ಅಡಿಯಲ್ಲಿ ಕ್ಷಯರೋಗಿಗಳಿಗೆ 98721 ಪೌಷ್ಠಿಕ ಆಹಾರದ ಕಿಟ್‌ಗಳನ್ನ ವಿತರಿಸಲಾಗಿದೆ. ಸಾರ್ವಜನಿಕರು ಕ್ಷಯರೋಗ ಬರದಂತೆ ಮುನ್ನೆಚ್ಚರಿಕೆ ವಹಿಸುವ ನಿಟ್ಟಿನಲ್ಲಿ ಬಿಸಿಜಿ ಲಸಿಕಾ ಕಾರ್ಯಕ್ರಮದ ಲಾಭ ಪಡೆಯಬೇಕು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಬಿಸಿಜಿ ಲಸಿಕೆ ಸುರಕ್ಷಿತ ಲಸಿಕೆಯಾಗಿದ್ದು, ■ 6ನೇ ಪುಟಕ್ಕೆ

ಮೈಸೂರಿನ ವಿವಿಧೆಡೆ ರಸ್ತೆ ಅಪಘಾತ

ಹೆಲ್ಮೆಟ್ ಧರಿಸದ ಯುವಕ ದುರ್ಮರಣ; ಪಾಲಿಕೆ ಪ್ರಮಾದದಿಂದ ಯುವತಿಗೆ ಗಂಭೀರ ಗಾಯ

ಮೈಸೂರು, ಮಾ.25(ಬಿಎಲ್‌ಯು)– ಹೆಲ್ಮೆಟ್ ರಹಿತ ಬೈಕ್ ಚಾಲನೆಗೆ ಯುವಕನೊಬ್ಬ ಪ್ರಾಣವನ್ನೇ ಬೆಲೆ ತೆತ್ತಿದ್ದಾನೆ. ಮತ್ತೊಂದೆಡೆ ನಗರಪಾಲಿಕೆ ಪ್ರಮಾದ ಹಾಗೂ ಬೈಕ್ ಸವಾರನ ನಿರ್ಲಕ್ಷ್ಯದಿಂದ ಪ್ರತ್ಯೇಕ ಅಪಘಾತಗಳಲ್ಲಿ ನಾಲ್ವರು ಗಾಯಗೊಂಡಿದ್ದಾರೆ.

ಘಟನೆ 1: ಮೈಸೂರಿನ ಗೋಕುಲಂ ನಿವಾಸಿ, ಜಿಮ್ ಟ್ರೈನರ್ ಕಾರ್ತಿಕ್(27), ಹೆಲ್ಮೆಟ್ ಧರಿಸದೆ ಜೀವ ಕಳೆದುಕೊಂಡಿದ್ದಾನೆ. ಹುಣಸೂರು ಮುಖ್ಯರಸ್ತೆಯಲ್ಲಿ ಕಲಾಮಂದಿರದ ಕಡೆಯಿಂದ ಬೈಕ್‌ನಲ್ಲಿ ವೇಗವಾಗಿ ಬಂದ

ಬೈಕ್ ಡಿಕ್ಕಿ ಹೊಡೆದು ಸಾರಿಗೆ ಸಂಸ್ಥೆ ಉದ್ಯೋಗಿಗೆ ಪೆಟ್ಟು

ಈತ, ವಾಲ್ಮೀಕಿ ರಸ್ತೆ ಕಡೆಗೆ ತಿರುವು ಪಡೆಯುವಾಗ ಹಿಂದಿನಿಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸಮೇತ ಕಾರ್ತಿಕ್ ಸುಮಾರು 10 ಅಡಿ ಉಜ್ಜಿಕೊಂಡು ಪಲ್ಟಿ ಹೊಡೆದಿದ್ದಾನೆ. ಈ ವೇಳೆ ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಆಂಬುಲೆನ್ಸ್ ಬರುವಷ್ಟರಲ್ಲೇ ಆತ ಸಾವನ್ನಪ್ಪಿದ. ■ 6ನೇ ಪುಟಕ್ಕೆ



ವಿಶ್ವಮಾನವ ಜೋಡಿ ರಸ್ತೆ ಅದ್ವಾನ

ಸರಣಿ ಅಪಘಾತ; ತಾಯಿ–ಮಗಳು ಸಾವು

- ಆತ್ಮಹತ್ಯೆ ಮಾಡಿಕೊಂಡ ಮಗಳ ಪುಣ್ಯತಿಥಿ ಮುಗಿಸಿ ಮಸಣ ಸೇರಿದ ತಾಯಿ, ಸಹೋದರಿ!
- ಕೊಳ್ಳೇಗಾಲ ಬಳಿ ಘೋರ ದುರಂತ; ಟಾಟಾ ಏಸ್ ಪ್ಯಾಸೆಂಜರ್ ವಾಹನ, ಬೈಕ್‌ಗೆ ಬಸ್ ಡಿಕ್ಕಿ





ಕೊಳ್ಳೇಗಾಲ, ಮಾ.25– ಪ್ಯಾಸೆಂಜರ್ ಟಾಟಾ ಏಸ್ ವಾಹನಕ್ಕೆ ಸರ್ಕಾರಿ ಸಾರಿಗೆ ಬಸ್ ಡಿಕ್ಕಿ ಹೊಡೆದು, ತಾಯಿ, ಮಗಳು ಸಾವನ್ನಪ್ಪಿ, 11 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ದುರಂತ ತಾಲೂಕಿನ ಸಿದ್ದಯ್ಯನಪುರ ಗ್ರಾಮದ ಬಳಿ ನಡೆದಿದೆ.

ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಸಿದ್ದಯ್ಯನಪುರ ಗ್ರಾಮದ ಸಮೀಪ ಸರ್ಕಾರಿ ಸಾರಿಗೆ ಬಸ್ (ಕೆಎ45 ಎಫ್–0032), ಟಾಟಾ ಏಸ್ ಪ್ಯಾಸೆಂಜರ್ ವಾಹನ (ಕೆಎ 41–7524) ಹಾಗೂ ಹೀರೋ ಪ್ಯಾಷನ್ ಪ್ರೊ ಬೈಕ್(ಕೆಎ10 ಕ್ಯೂ–5404)ಗೆ ಡಿಕ್ಕಿ ಹೊಡೆದಿದೆ

ಪುಣ್ಯಕ್ಷೇತ್ರ ಕುರುಬನಕಟ್ಟೆಯಿಂದ ಬಾಣೂರು ಕಡೆಗೆ ಹೊರಟಿದ್ದ ಟಾಟಾ ಏಸ್‌ಗೆ ಬಸ್ ಡಿಕ್ಕಿ ಹೊಡೆದ ರಭಸಕ್ಕೆ ಬಾಣೂರಿನ ರಾಜಮ್ಮ, (ಹಾಲಿ ವಾಸ ಬೆಂಗಳೂರು–52) ಸ್ಥಳದಲ್ಲೇ ಮೃತಪಟ್ಟಿದ್ದು, ಅವರ ಪುತ್ರಿ ಶೃತಿ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಗಾಯಗೊಂಡಿರುವ ಸಣ್ಣಮ್ಮ (45), ಮಹದೇವು(63), ಸರ್ಕಾರಿ ಬಸ್ ಚಾಲಕ ರಾಜಶೇಖರ್ ಅವರುಗಳು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದಂತೆ ಗಂಭೀರ ಸ್ವರೂಪದ ಗಾಯಗಳಾಗಿರುವ ರತ್ನಮ್ಮ (50), ಮಲ್ಲಣ್ಣ (57), ಹರ್ಷಿತಾ (16), ಲಿಂಗರಾಜು (55), ಸುಧಾ(47), ರಮೇಶ (50), ಮಾದೇಶ (58), ಲಿಂಗರಾಜು (56), ಟಾಟಾ ಮ್ಯಾಜಿಕ್ ಡ್ರೈವರ್ ಗೌತಮ್ (24), ಬೈಕ್ ಸವಾರ ಪ್ರಕಾಶ್ (43) ಅವರುಗಳನ್ನು ಚಾ.ನಗರ ಸಿಮ್ಸ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದೆ. ಕಳೆದ 11 ದಿನಗಳ ಹಿಂದೆ ಕೊಳ್ಳೇಗಾಲದ ಮಂಜುನಾಥನಗರ ದಲ್ಲಿ ವಾಸವಿದ್ದ ಆಶಾ ಆತ್ಮ ಹತ್ಯೆಗೆ ಶರಣಾಗಿದ್ದರು. ಅವರ ತಿಥಿ ಕಾರ್ಯವನ್ನು ಇಂದು ಕುರುಬನಕಟ್ಟೆಯಲ್ಲಿ ಏರ್ಪಡಿಸಲಾಗಿದ್ದು, ಆಶಾ ತಾಯಿ ರಾಜಮ್ಮ, ಸಹೋದರಿ ಶೃತಿ ಇದರಲ್ಲಿ ಪಾಲ್ಗೊಂಡು ಬಳಿಕ ತಮ್ಮ ಸಂಬಂಧಿಕರ ಜೊತೆ ಸ್ವಗ್ರಾಮ ಬಾಣೂರಿಗೆ ಟಾಟಾ ಏಸ್‌ನಲ್ಲಿ ತೆರಳುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಆಶಾ ತಾಯಿ ಮತ್ತು ಸಹೋದರಿ ದುರಂತ ಸಾವಿಗೀಡಾಗಿದ್ದನ್ನು ಕಂಡು ಸಂಬಂಧಿಕರ ರೋಧನೆ ಮುಗಿಲು ಮುಟ್ಟು ವಂತಿತ್ತು. 11 ದಿನಗಳ ಹಿಂದೆ ಓರ್ವ ಪುತ್ರಿ, ಇಂದು ತಾಯಿ ಮತ್ತು ಮತ್ತೋರ್ವ ಪುತ್ರಿ ಹೀಗೆ 11 ದಿನದಲ್ಲಿ ಕುಟುಂಬದ ಮೂವರು ವಿಧಿಯಾಟಕ್ಕೆ ಬಲಿಯಾದದ್ದು ಘೋರ ವಿಧಿಯಾಟವೇ ಸರಿ.

ತಾಂತ್ರಿಕ ದೋಷದಿಂದ ತೆರೆದುಕೊಂಡ ಗೇಟ್ ಕೆಆರ್‌ಎಸ್‌ನಿಂದ ಮೂರು ದಿನ ನದಿ ಪಾಲಾದ ಸಾವಿರಾರು ಕ್ಯೂಸೆಕ್ ನೀರು


- ಮಂಡ್ಯ ರೈತ ಸಮುದಾಯಕ್ಕೆ ಸಂಶಯ
- ತಮಿಳ್ನಾಡಿಗೆ ಕದ್ದುಮುಚ್ಚಿ ನೀರು ಹರಿಸಿರುವ ಶಂಕೆ



ಶ್ರೀರಂಗಪಟ್ಟಣ, ಮಾ.25– ತಾಂತ್ರಿಕ ದೋಷದಿಂದ ಜಿಲ್ಲೆಯ ಕೆಆರ್‌ಎಸ್ ಡ್ಯಾಂನ ಗೇಟ್ ನಂ–5 ತೆರೆದುಕೊಂಡು ಸರಿಸುಮಾರು ಮೂರರಿಂದ ಐದು ಸಾವಿರ ಕ್ಯೂಸೆಕ್ ನೀರು ನಿರಂತರವಾಗಿ ನದಿಗೆ ಹರಿದು ಪೋಲಾಗಿದೆ.

ಆದರೆ ರೈತರು ಮಾತ್ರ ಬೇಕಂತಲೇ ರಾತ್ರೋ ರಾತ್ರಿ ಕದ್ದು ಮುಚ್ಚಿ ತಮಿಳುನಾಡಿಗೆ ನೀರು ಬಿಟ್ಟಿದ್ದು, ಇದೀಗ ಗೇಟ್‌ನ ತಾಂತ್ರಿಕ ದೋಷವೆಂದು ಹೇಳುತ್ತಿದ್ದಾರೆ ಎಂದು ನೀರಾವರಿ ಇಲಾಖೆಯ ಅಧಿಕಾರಿಗಳ ವಿರುದ್ಧ ■ 6ನೇ ಪುಟಕ್ಕೆ

ಸೋಮಶೇಖರ್, ಶಿವರಾಮ ಹೆಬ್ಬಾರ್‌ಗೆ ಬಿಜೆಪಿ ನೋಟಿಸ್



ಸೋಮಶೇಖರ್



ಹೆಬ್ಬಾರ್

ನವದೆಹಲಿ, ಮಾ.25– ಪಕ್ಷದ ಆಂತರಿಕ ವಿಷಯಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ ಚರ್ಚಿಸುವ ಮೂಲಕ ಪಕ್ಷದ ಶಿಸ್ತು ಉಲ್ಲಂಘನೆ ಹಿನ್ನೆಲೆ ಯಲ್ಲಿ ಎಂದು ಆರೋಪಿಸಿರುವ ಭಾರತೀಯ ಜನತಾ ಪಕ್ಷದ ಕೇಂದ್ರ ಶಿಸ್ತು ಸಮಿತಿ, ಶಾಸಕರಾದ ಶಿವರಾಮ ಹೆಬ್ಬಾರ್ ಮತ್ತು ಎಸ್.ಟಿ. ಸೋಮಶೇಖರ್ ಅವರಿಗೆ ಕಾರಣ ಕೇಳಿ ಮಂಗಳವಾರ ನೋಟಿಸ್ ಜಾರಿ ಮಾಡಿದೆ. ಬಿಜೆಪಿ ಕೇಂದ್ರ ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್, ನೋಟಿಸ್ ಜಾರಿ ಮಾಡಿದ್ದು, 'ಪಕ್ಷದ ನಿಯಮ ಉಲ್ಲಂಘಿಸಿರುವ ನಿಮ್ಮ ವಿರುದ್ಧ ಏಕೆ ಶಿಸ್ತು ಕ್ರಮ ಜರುಗಿಸಬಾರದು ಎಂಬುದನ್ನು ನೋಟಿಸ್ ತಲುಪಿದ 72 ಗಂಟೆಯೊಳಗೆ ಉತ್ತರಿಸಬೇಕು. ಕಾಲಮಿತಿಯೊಳಗೆ ಉತ್ತರಿಸದಿದ್ದಲ್ಲಿ, ಹೇಳಲು ಏನೂ ಇಲ್ಲವೆಂದು ಭಾವಿಸಿ ಶಿಸ್ತು ಕ್ರಮ ಜರುಗಿಸಲಾಗುವುದು' ಎಂದಿದ್ದಾರೆ.

ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ 15568 ಕೋಟಿ ಅವ್ಯವಹಾರ

- ಮಾಜಿ ಡಿಸಿಎಂ ಡಾ.ಅಶ್ವತ್ಥನಾರಾಯಣ ಗಂಭೀರ ಆರೋಪ
- ಸ್ಮಾರ್ಟ್ ಮೀಟರ್ ಕಡ್ಡಾಯವಲ್ಲ, ಅಧಿಕ ಬೆಲೆ ನಿಗದಿ
- ಇಡೀ ಪ್ರಕ್ರಿಯೆಯಲ್ಲಿ ಲೋಪವಾಗಿರುವುದು ಬಯಲು





ಬೆಂಗಳೂರು, ಮಾ. 25(ಕೆಎಂಶಿ)– ಬೆಸ್ಕಾಂ ಮತ್ತು ಇತರ ಎಸ್ಕಾಂಗಳ ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಸುಮಾರು 15,568 ಕೋಟಿ ರೂ.ಗಳ ಬೃಹತ್ ಪ್ರಮಾಣದ ಅವ್ಯವಹಾರ ನಡೆದಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅವ್ಯವಹಾರದ ಗಾತ್ರ ಇನ್ನೂ ದೊಡ್ಡದೇ ಇದೆ, ಎಸ್ಕಾಂಗಳು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇ ಆರ್‌ಸಿ) ನಿಯಮಗಳಿಗೆ ಬದ್ಧವಾಗಿರಬೇಕು. ನಿಯಮಗಳಲ್ಲಿ ಸ್ಮಾರ್ಟ್ ಮೀಟರ್ ಕಡ್ಡಾಯ ಎಂಬುದಾಗಿ ಎಲ್ಲೂ ಉಲ್ಲೇಖ ಇಲ್ಲ. ತಾತ್ಕಾಲಿಕ ಸಂಪರ್ಕಕ್ಕೆ ಮಾತ್ರ ಸ್ಮಾರ್ಟ್ ಮೀಟರ್ ಕಡ್ಡಾಯ ಮಾಡಬಹುದೇ ಹೊರತು ಖಾಯಂ ಗ್ರಾಹಕರು, ಹೊಸ ಗ್ರಾಹಕರಿಗೆ ಸ್ಮಾರ್ಟ್ ಮೀಟರ್ ಕಡ್ಡಾಯ ಮಾಡುವಂತಿಲ್ಲ. ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ ನಿಯಮಾವಳಿ ಪ್ರಕಾರ ಸಹ ಸ್ಮಾರ್ಟ್ ಮೀಟರ್ ಕಡ್ಡಾಯವಲ್ಲ. ಕೆಟಿಪಿಪಿ ಕಾಯ್ದೆಯಡಿ ಬಿಡ್ ಕೆಪ್ಯಾಸಿಟಿ ಟೆಂಡರ್‌ನಲ್ಲಿ ತಿಳಿಸಿಲ್ಲ. ಅದು 6,800 ಕೋಟಿ ರೂ. ಇರಬೇಕಿತ್ತು, ಬಿಡ್ಡಿಂಗ್ ಸಾಮರ್ಥ್ಯ ಇಲ್ಲದಿರುವುದೇ ಮೊದಲ ಹಗರಣವಾಗಿದೆ. ಕೆಟಿಪಿಪಿ ಕಾಯ್ದೆ ಪ್ರಕಾರ ವ್ಯವಹಾರ 1,920 ಕೋಟಿ ರೂ. ಇರಬೇಕಾಗಿತ್ತು. ಟೆಂಡರ್‌ನಲ್ಲಿ ಬರೀ 107 ಕೋಟಿ ರೂ. ಎಂದು ನಮೂದಿಸಲಾಗಿದೆ, ಬ್ಲ್ಯಾಕ್‌ಲಿಸ್ಟ್‌ನಲ್ಲಿರುವ ಕಂಪೆನಿಗಳಿಗೆ ಗುತ್ತಿಗೆ ಕೊಡುವುದಕ್ಕೂ ನಿಯಮಗಳಲ್ಲಿ ಅವಕಾಶ ಇಲ್ಲ.

ಯೋಜನೆಯ ಅಂದಾಜು ವೆಚ್ಚ 571 ಕೋಟಿ ರೂ. ಎಂಬುದಾಗಿ ತಿಳಿಸಿ ನಂತರ ತಿದ್ದುಪಡಿ ಮಾಡಲಾಗಿದೆ. ಟೆಂಡರ್‌ನ ಒಟ್ಟು ಮೊತ್ತ ತಿಳಿಸದೇ ಟೆಂಡರ್ ಕರೆಯ ಲಾಗಿದೆ. ಕೆಟಿಪಿಪಿ ಕಾಯ್ದೆಯೂ ಇಲ್ಲ. ಕೇಂದ್ರ ಸರ್ಕಾರದ ನಿಯಮಾವಳಿಗಳನ್ನೂ ಜಾರಿ ಮಾಡಿಲ್ಲ. ಸ್ಮಾರ್ಟ್ ಮೀಟರ್ ತಯಾರಿಸದ, ಅಳವಡಿಸದ, ಡಿಜಿಟಲ್ ಮೀಟರ್ ಅಳವಡಿಸಿದ ವ್ಯಕ್ತಿಯನ್ನೇ ಪರಿಗಣಿಸಲಾಗಿದೆ. ಪ್ರಿಬಿಡ್‌ನಲ್ಲಿ ರಾಜಶ್ರೀ ಏಕೆ ಬಂದಿಲ್ಲ ಎಂದು ಪ್ರಶ್ನಿಸಿದರು.

ಮೈಸೂರಿನಲ್ಲಿ ಸ್ಮಾರ್ಟ್ ಮೀಟರ್ ಗರಿಷ್ಠ ತಯಾರಾಗುತ್ತದೆ. ಅರ್ಹರನ್ನು ಹೊರಗಿಟ್ಟು ಬರೀ ಫೋನ್ ತಯಾರಕರನ್ನು ಆಯ್ಕೆ ಮಾಡ ಲಾಗಿದೆ. ಕೇಂದ್ರದ ನಿಯಮಗಳ ಪ್ರಕಾರ ಒಂದು ಲಕ್ಷ ಸ್ಮಾರ್ಟ್ ಮೀಟರ್ ಅಳವಡಿಸಿದ ಅನುಭವ ಇರಬೇಕು. ಆದರೆ, ಉತ್ಪಾದನೆಯನ್ನೇ ಮಾಡದ 10 ಲಕ್ಷ ಸಾಮಾನ್ಯ ಮೀಟರ್ ಅಳವಡಿಕೆಯನ್ನೇ ಮಾನದಂಡ ಮಾಡಿಕೊಳ್ಳಲಾಗಿದೆ. ಮೊದಲು ಟ್ರಾನ್ಸ್‌ಫಾರ್ಮರ್, ಫೀಡರ್ ಗಳಿಗೆ ಇದನ್ನು ಅಳವಡಿಸಿ ಸಾಗಾಟದಲ್ಲಿ ಆಗುವ ನಷ್ಟ ತಿಳಿಯಬೇಕು. ನಂತರ ರಾಜ್ಯದ ಗ್ರಾಹಕರಿಗೆ ಅಳವಡಿಸಬೇಕು. ಕೇಂದ್ರದ ಆರ್‌ಡಿಎಸ್‌ಎಸ್ ಅಡಿ ಲಭ್ಯವಿರುವ 3 ಸಾವಿರ ಕೋಟಿ ರೂ. ಬಳಸಿಲ್ಲ ಎಂದರು.

ಕಾಂಗ್ರೆಸ್ ಆಳ್ವಿಕೆಯ ಹಿಮಾಚಲ ಪ್ರದೇಶ, ತೆಲಂಗಾಣ, ಕೇರಳದಲ್ಲಿ ಕಡಿಮೆ ಮೊತ್ತಕ್ಕೆ ಸ್ಮಾರ್ಟ್ ಮೀಟರ್ ಅಳವಡಿಸಲಾಗಿದೆ. ಕರ್ನಾಟಕದಲ್ಲಿ 1 ಮೀಟರ್‌ಗೆ 17 ಸಾವಿರ ರೂ. ನಿಗದಿಪಡಿಸಲಾಗಿದೆ, ಬೇರೆ ರಾಜ್ಯದಲ್ಲಿ ಪ್ರತಿ ಮೀಟರ್‌ಗೆ 7,740 ರೂ. ನಿಗದಿಯಾಗಿದೆ, ಬೆಸ್ಕಾಂ ಹಾಗೂ ಮತ್ತಿತರ ಎಸ್ಕಾಂಗೆ ಹೋಲಿಸಿದರೆ ಇದು 9,260 ರೂ. ಹೆಚ್ಚು ಮೊತ್ತವಾಗಿದೆ ಎಂದರು.

ಬಿಹಾರದಲ್ಲೂ ಇದೇ ಮಾದರಿಯ ಹಗರಣ ನಡೆದಿದ್ದು, ಐಎಎಸ್ ಅಧಿಕಾರಿ, ಸಚಿವರು ಬಂಧಿತರಾಗಿದ್ದಾರೆ. ಸ್ಮಾರ್ಟ್ ಮೀಟರ್, ಸಾಫ್ಟ್‌ವೇರ್, ಔಟ್‌ಲೆಟ್, ಸಿಬ್ಬಂದಿ ಸಂಬಳವನ್ನು ವೆಚ್ಚವಾಗಿ ತೋರಿಸಲಾಗಿದೆ, ಕೆಟಿಪಿಪಿ ಕಾಯ್ದೆ ಯನ್ನು ಎಲ್ಲ ಹಂತದಲ್ಲೂ ಉಲ್ಲಂಘಿಸಲಾಗಿದೆ. ಇದೊಂದು ಹಗಲುದರೋಡೆ, ಸರ್ಕಾರ ಉತ್ತರ ಕೊಡಬೇಕು. ಕಾನೂನು ಇಲ್ಲದೆಯೇ ಸ್ಮಾರ್ಟ್ ಮೀಟರ್ ಕಡ್ಡಾಯ ಮಾಡಲು ಹೊರಟಿದ್ದಾರೆ. ಅಲ್ಲದೆ, ಬ್ಲ್ಯಾಕ್‌ಲಿಸ್ಟ್ ಆದವರಿಗೆ ಗುತ್ತಿಗೆ ನೀಡ ಲಾಗಿದೆ. ನಾವು ಸತ್ಯ ಹೇಳಿದ್ದೇವೆಯೇ ಹೊರತು ಇದು ರಾಜಕೀಯ ಪ್ರೇರಿತ ಆರೋಪವಲ್ಲ, ಸರ್ಕಾರ ಕ್ರಮ ಕೈಗೊಳ್ಳದಿದ್ದಲ್ಲಿ ಬಿಸಿ ಮುಟ್ಟಿಸುವುದಾಗಿ ಎಚ್ಚರಿಸಿದರು.

ಇಲಾಖಾ ಅಧಿಕಾರಿಗಳು, ಬೆಸ್ಕಾಂ, ಕೆಪಿಟಿಸಿಎಲ್ ಪ್ರಧಾನ ವ್ಯವಸ್ಥಾಪಕರು, ಸ್ಮಾರ್ಟ್ ಮೀಟರ್ ವಿಚಾರದಲ್ಲಿ ಏನೂ ತಪ್ಪಾಗಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ ಭ್ರಷ್ಟಾಚಾರ ನಡೆದಿರುವ ಕುರಿತು ದಾಖಲೆ ಸಮೇತ ತಿಳಿಸಲಾಗುವುದು. ಸದನದಲ್ಲೂ ವಿಷಯ ಪ್ರಸ್ತಾಪವಾಗಿದೆ, ಆದರೆ ಸಚಿವರು ಸ್ಪಷ್ಟ ಉತ್ತರ ನೀಡಿಲ್ಲ ಎಂದರು.

ವಿದ್ವಾನ್ ಮುತ್ತುಸ್ವಾಮಿ ದೀಕ್ಷಿತರ ಜನ್ಮ ದಿನಾಚರಣೆ ಡಾ.ಸುಕನ್ಯಾ ಪ್ರಭಾಕರ್‌ಗೆ ಅಭಿನಂದನೆ



ವಿದ್ವಾನ್ ಮುತ್ತುಸ್ವಾಮಿ ದೀಕ್ಷಿತರ ಜನ್ಮದಿನಾಚರಣೆ ಸಮಾರಂಭದಲ್ಲಿ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.25(ಎಸ್‌ಪಿಎನ್)– ಭಾರತೀಯ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡುತ್ತಿರುವ ಇಂದಿನ ಯುವ ಸಮೂಹಕ್ಕೆ ಮುತ್ತುಸ್ವಾಮಿ ದೀಕ್ಷಿತರ ಸಾಧನೆ ಆದರ್ಶಮಯ ಎಂದು ಸುಶ್ರಾವ್ಯ ಗಾನಕಲಾ ಮಂದಿರದ ಅಧ್ಯಕ್ಷೆ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅಭಿಪ್ರಾಯಪಟ್ಟರು.

ಮೈಸೂರು ಗೋಕುಲಂ ಬಡಾವಣೆಯ ಶ್ರೀಕೃಷ್ಣಗಾನ ಸಭಾಂಗಣದಲ್ಲಿ ಸಂಗೀತ ಪ್ರೇಮಿಗಳ ಸಭಾ ವತಿಯಿಂದ ಏರ್ಪಡಿಸಿದ್ದ ವಿದ್ವಾನ್ ಮುತ್ತುಸ್ವಾಮಿ ದೀಕ್ಷಿತರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು, ಮಾತನಾಡಿದರು.

ವಿದ್ವಾನ್ ಮುತ್ತುಸ್ವಾಮಿ ದೀಕ್ಷಿತರು 1776ರ ಮಾ.24ರಂದು ತಿರುವಾರೂರಿನಲ್ಲಿ ಜನಿಸಿದರು. ಅವರು ವೇದ, ಕಾವ್ಯ, ಶಾಸ್ತ್ರೀಯ ಸಂಗೀತ ಮತ್ತು ಖಗೋಳ ಶಾಸ್ತ್ರ ಸೇರಿದಂತೆ ಇತರೆ ವಿಷಯಗಳಲ್ಲೂ ಪರಿಣತಿ ಹೊಂದಿದ್ದರು. ಅಲ್ಲದೆ ದೀಕ್ಷಿತರ ಶಿಷ್ಯವೃಂದದಲ್ಲಿ ತಂಜಾವೂರಿನ ಸಹೋದರರಾದ ಪೊನ್ನಯ್ಯ ಪಿಳ್ಳೈ, ವಡಿವೇಲು, ಚಿನ್ನಯ್ಯ ಮತ್ತು ಶಿವಾನಂದಂ, ಮೃದಂಗ ತಂಬಿಯಪ್ಪ, ವೀಣಾವಾದಕ ಅವಡಯಾರ್ ಕೋಯಿಲ್‌ನ ವೆಂಕಟ ರಾಮ ಅಯ್ಯರ್ ಸೇರಿದಂತೆ ಇತರರು ಪ್ರಸಿದ್ಧಿ ಹೊಂದಿದ್ದರು.

ವಿದ್ವಾನ್ ಮುತ್ತುಸ್ವಾಮಿ ದೀಕ್ಷಿತರು, ದಕ್ಷಿಣ ಭಾರತದ ಕವಿ, ಗಾಯಕ ಹಾಗೂ ವೀಣಾವಾದಕರಾಗಿದ್ದರು. ಕರ್ನಾಟಕ ಸಂಗೀತ ಕ್ಷೇತ್ರದ ತ್ರಿಮೂರ್ತಿಗಳಲ್ಲಿ ಮುತ್ತುಸ್ವಾಮಿ ದೀಕ್ಷಿತರೂ ಒಬ್ಬರು. ಇವರ 500ಕ್ಕೂ ಹೆಚ್ಚು ಸಂಗೀತ ಸಂಯೋಜನೆಗಳು ಪ್ರಸಿದ್ಧಿ ಪಡೆದಿವೆ. ಕಲ್ಯಾಣಿ ರಾಗದ ಮುದ್ರಾ ಅಥವಾ ಸಂಯೋಜಕರ ಸಹಿಯ ಪದ್ಯದಲ್ಲಿ 'ಗುರುಗುಹ ರೂಪ ಮುದ್ದುಕುಮಾರ ಜನನೀಂ' ಉಲ್ಲೇಖವಿದೆ ಎಂದು ತಿಳಿಸಿದರು. ಈ ವೇಳೆ ಸಂಗೀತ ಪ್ರೇಮಿಗಳ ಸಭಾದ ಶ್ರೀಧರ್ ಹೆಮ್ಮಿಗೆ, ಶ್ರೀ ಕೃಷ್ಣಗಾನ ಸಭಾದ ಅಧ್ಯಕ್ಷ ಬಿ.ಎಸ್.ಶ್ರೀಧರರಾಜಅರಸ್ ಇದ್ದರು.

ಇಂಜಿನಿಯರಿಂಗ್‌ನಲ್ಲಿ ಪ್ರಥಮ ರ‍್ಯಾಂಕ್



ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಕಾಲೇಜಿನ ಬಿ.ನಮ್ರತಾ ಬಿಇ ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರಥಮ ರ‍್ಯಾಂಕ್ ಪಡೆದಿದ್ದಾರೆ. ಈಕೆ ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂ.ಡಿ.ವೆಂಕಟೇಶ್, ಬಿ.ಉಷಾ ದಂಪತಿ ಪುತ್ರಿ.

ವಿಟಿಯು ಪ್ರಾದೇಶಿಕ ಕೇಂದ್ರದಲ್ಲಿ ಮಾ.27, 28ರಂದು ಸಾಂಸ್ಕೃತಿಕ ಮೇಳ

ಮೈಸೂರು,ಮಾ.25(ಎಂಟಿವೈ)– ಮೈಸೂರಿನ ಸಾತಗಳ್ಳಿ ಸಮೀಪವಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ದ ಪ್ರಾದೇಶಿಕ ಕೇಂದ್ರದ ಆವರಣದಲ್ಲಿ ಮಾ.27,28ರಂದು 'ಯುಕ್ತಿ 2ಕೆ25' ಪ್ರಾದೇಶಿಕ ಮಟ್ಟದ ಸಾಂಸ್ಕೃತಿಕ ಮೇಳ ಆಯೋಜಿಸಲಾಗಿದೆ ಎಂದು ವಿಟಿಯು ಪ್ರಾದೇಶಿಕ ನಿರ್ದೇಶಕರಾದ ಡಾ.ಹೇಮಾ ಪಾಟೀಲ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯುಕ್ತಿ 2ಕೆ25' ಪ್ರಾದೇಶಿಕ ಮಟ್ಟದ ಸಾಂಸ್ಕೃತಿಕ ಮೇಳದಲ್ಲಿ ಪ್ರಾದೇಶಿಕ ಕೇಂದ್ರದ ವ್ಯಾಪ್ತಿಯ 60 ಕಾಲೇಜುಗಳ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಮೇಳದಲ್ಲಿ ಮನರಂಜನೆ, ಕಲೆ, ಸಂಗೀತ ಮತ್ತು ನೃತ್ಯ, ಟೆಕ್ನೋಮ್ಯಾ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿದ್ದು, ವೈಯಕ್ತಿಕ ಸ್ಪರ್ಧಿಗೆ 150 ರೂ., ಗುಂಪು ಸ್ಪರ್ಧಿಗಳಿಗೆ 600 ರೂ. ನೋಂದಣಿ ಶುಲ್ಕವನ್ನು ನಿಗದಿಪಡಿಸಲಾಗಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಮಾ.27 ರಂದು 10ಕ್ಕೆ ಸಾಂಸ್ಕೃತಿಕ ಮೇಳವನ್ನು ವಿಟಿಯು ಕುಲಪತಿ ಡಾ.ವಿದ್ಯಾಶಂಕರ್ ಉದ್ಘಾಟಿಸಲಿದ್ದಾರೆ. ಈ ವೇಳೆ ಕೆಲವು ಚಲನಚಿತ್ರ ನಟರು ಪಾಲ್ಗೊಳ್ಳಲಿದ್ದಾರೆ. ಅಂದು ಸಂಜೆ 5.30ರಿಂದ ಗಾಯಕರಾದ ರಾಜೇಶ್ ಕೃಷ್ಣನ್ ಮತ್ತು ಶಮಿತಾ ಮಲ್ನಾಡ್ ರವರಿಂದ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾ.28ರಂದು ಸಂಜೆ 5ಕ್ಕೆ ಸಮಾರೋಪ ಸಮಾರಂಭ ಜರುಗಲಿದ್ದು, ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಾಂಸ್ಕೃತಿಕ ಮೇಳದ ಆಯೋಜಕರಾದ ಡಾ.ಪ್ರಸನ್ನಕುಮಾರ್, ಡಾ.ಕೀರ್ತಿಗೌಡ, ಪಿ.ಪ್ರಶಾಂತ್ ಇದ್ದರು.

ಸಂತೋಷಕ್ಕೆ ಹಾಡು ಸಂತೋಷಕ್ಕೆ; ನಾಳೆ ಚಲನಚಿತ್ರ ಗೀತೆ ಗಾಯನ

ಮೈಸೂರು, ಮಾ.25(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣದಲ್ಲಿ ಮಾ.27ರಂದು ಸಂಜೆ 4.30ರಿಂದ ರಾತ್ರಿ 9.30ರವರೆಗೆ ನಟ ದಿ.ಶಂಕರ್‌ನಾಗ್ ಸ್ಮರಣಾರ್ಥ 'ಸಂತೋಷಕ್ಕೆ ಹಾಡು ಸಂತೋಷಕ್ಕೆ' ಶೀರ್ಷಿಕೆಯಡಿ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜನ ಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನ ಚೈತನ್ಯ ಫೌಂಡೇಷನ್ ಕಾರ್ಯಕ್ರಮ ಆಯೋಜಿಸಲಾಗಿದ್ದು, ಕನ್ನಡ, ಹಿಂದಿ, ತೆಲುಗು, ತಮಿಳು, ಮಲಯಾಳಂ ಚಲನಚಿತ್ರಗಳ ಸುಮಾರು 40 ಜನಪ್ರಿಯ ಗೀತೆಗಳನ್ನು ಪ್ರಸ್ತುತಪಡಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಜಿಲ್ಲಾಧ್ಯಕ್ಷ ಡಾ.ನಾಗರಾಜು ವಿ.ಭೈರಿ ಅವರಿಗೆ 'ಚೈತನ್ಯ ರತ್ನ' ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ 'ಮಾಧ್ಯಮ ಚೈತನ್ಯ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಗಾಯಕರುಗಳಾದ ಎಸ್.ಅಮರ್, ಜಾಯ್ಸ್ ವೈಶಾಕ್, ನಾಗೇಂದ್ರ, ಶೇಷಾದ್ರಿ ಉಪಸ್ಥಿತರಿದ್ದರು.

ಲೇಖಕಿ ಎಂ.ಎಸ್.ವೇದಾರೊಂದಿಗೆ ಇಂದು ಸಂವಾದ

ಮೈಸೂರು, ಮಾ.25–ಲೇಖಿಕಾ ಸಾಹಿತ್ಯ ವೇದಿಕೆಯು ಮಹಿಳಾ ಸಾಹಿತ್ಯದ ಹಿರಿಯ ಚೇತನಗಳು ಮಾಲಿಕೆಯಡಿ ಲೇಖಕಿ ಡಾ.ಎಂ.ಎಸ್.ವೇದಾ ಅವರೊಂದಿಗೆ ಸಂವಾದ ಮತ್ತು ಗೌರವಾರ್ಪಣೆ ಕಾರ್ಯಕ್ರಮವನ್ನು ಮಾ.26ರಂದು ಬೆಳಿಗ್ಗೆ 11 ಗಂಟೆಗೆ ಕುವೆಂಪುನಗರದ ಪಡುವಣ ರಸ್ತೆಯ ನಾಲ್ಕನೇ ಅಡ್ಡರಸ್ತೆಯ ಅಲಂಪು ಮನೆಯಲ್ಲಿ ಏರ್ಪಡಿಸಿದೆ. ಲೇಖಕಿಯರಾದ ಡಾ.ಸುಧಾ ರಮೇಶ್, ಉಷಾ ನರಸಿಂಹನ್, ಸುಚಿತ್ರಾ ಹೆಗಡೆ, ಬಿ.ಕೆ.ಮೀನಾಕ್ಷಿ, ಸುಜಾತಾ ರವೀಶ್, ಬಿ.ಜಿ.ಗಾಯತ್ರಿ ಮತ್ತು ಲೇಖಿಕಾ ಸಾಹಿತ್ಯ ವೇದಿಕೆ ಪದಾಧಿಕಾರಿಗಳು ಭಾಗವಹಿಸುತ್ತಾರೆ. ವೇದಿಕೆಯ ಸಂಚಾಲಕಿ ಶೈಲಜಾ ಸುರೇಶ್ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ನಿಧನ



ಚಲುವರಾಜೇ ಅರಸ್

ಮೈಸೂರು, ಮಾ.25– ಮೈಸೂರಿನ ಆರ್.ಟಿ.ನಗರದ ನಿವಾಸಿ, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ಚಲುವರಾಜೇ ಅರಸ್ (69) ಅವರು ಮಂಗಳವಾರ ನಿಧನರಾದರು. ಇವರು ಪತ್ನಿ ಮತ್ತು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಮೈಸೂರಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಪ್ರಾಪ್ತರ ಭಿಕ್ಷಾಟನೆಯಲ್ಲಿ ಮೈಸೂರಿಗೇ ಅಗ್ರಸ್ಥಾನ

ಮೈಸೂರು, ಮಾ.25(ಎಸ್‌ಪಿಎನ್)– ಹಲವು ವರ್ಷಗಳಿಂದ ಭಿಕ್ಷಾಟನೆ ನಿರ್ಮೂಲನೆ ಕಾಯ್ದೆ ಕರ್ನಾಟಕದಲ್ಲಿ ಜಾರಿಯಲ್ಲಿದ್ದರೂ ಕಳೆದ ಮೂರು ವರ್ಷಗಳಿಂದ 1347 ಮಂದಿ ಬಾಲಕ–ಬಾಲಕಿಯರು ಭಿಕ್ಷಾಟನೆಯಲ್ಲಿ ತೊಡಗಿದ್ದು, ಈ ಸ್ಥಾನದಲ್ಲಿ ಸಾಂಸ್ಕೃತಿಕ ನಗರಿ ಮೈಸೂರಲ್ಲಿ 66 ಪ್ರಕರಣ ದಾಖಲಾಗಿ ಮೊದಲ ಸ್ಥಾನ ಪಡೆದುಕೊಂಡಿದೆ.

ಕಳೆದ 3 ವರ್ಷಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿದ್ದ ಅಪ್ರಾಪ್ತ ಮಕ್ಕಳ ಜಿಲ್ಲಾವಾರು ಅಂಕಿ–ಅಂಶಗಳನ್ನು ಒಡನಾಡಿ ಸಂಸ್ಥೆಯ ಶೃತಿ, ಆರ್‌ಟಿಐ ಮೂಲಕ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಮತ್ತು ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಸಿ ಅಂಕಿ–ಅಂಶ ಪಡೆದಿದ್ದಾರೆ.

ಮೈಸೂರು ಜಿಲ್ಲೆ 2023ರಲ್ಲಿ ಬಾಲಕರು 38, ಬಾಲಕಿಯರು 28 ಸೇರಿ ಒಟ್ಟು 66 ಮಂದಿ, 2022ರಲ್ಲಿ 43 ಮಂದಿ, 2021ರಲ್ಲಿ 36 ಮಂದಿ ಭಿಕ್ಷಾಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಸನ 2023ರಲ್ಲಿ 15 ಮಂದಿ, 2022ರಲ್ಲಿ 10 ಮಂದಿ, 2021ರಲ್ಲಿ 30 ಮಂದಿ, ಮಂಡ್ಯ 2023ರಲ್ಲಿ 9 ಮಂದಿ, 2022ರಲ್ಲಿ 22 ಮಂದಿ, 2021ರಲ್ಲಿ ಒಬ್ಬರು ಭಿಕ್ಷಾಟನೆಯಲ್ಲಿ ತೊಡಗಿಸಿಕೊಂಡಿರುವುದು ಪತ್ತೆಯಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕೊಡಗು



ಸಂಗ್ರಹ ಚಿತ್ರ

> "ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆ ನಿಷೇಧಿಸುವಂತೆ ರಾಜ್ಯ ಸರ್ಕಾರಕ್ಕೆ ಹಲವು ಪತ್ರ ಬರೆದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇನ್ನಾದರೂ ರಾಜ್ಯ ಸರ್ಕಾರ ಎಚ್ಚೆತ್ತು ಭಿಕ್ಷಾಟನೆ ನಿರ್ಮೂಲನೆಗೊಳಿಸಲು ಕೈಜೋಡಿಸಬೇಕು.
> –ಪ್ರಸನ್ನ, ರಾಜ್ಯ ಕಾರ್ಯದರ್ಶಿ, ಜನ ಸಂಗ್ರಾಮ ಪರಿಷತ್

ಶೂನ್ಯ ಸ್ಥಾನದಲ್ಲಿದೆ. ಚಾಮರಾಜನಗರ 2021ರಲ್ಲಿ ಇಬ್ಬರು, 2022ರಲ್ಲಿ ಮೂರು, 2021ರಲ್ಲಿ 3 ಮಂದಿ

> "ಸಾರ್ವಜನಿಕ ಸ್ಥಳಗಳಾದ ಸಿಗ್ನಲ್ ಲೈಟ್, ಹೈವೇ, ಪ್ರಮುಖ ಜನಸಂದಣಿ ಪ್ರದೇಶಗಳಲ್ಲಿ ತಾಯಿ–ಮಗುವಿನೊಂದಿಗೆ ಭಿಕ್ಷಾಟನೆಯಲ್ಲಿ ತೊಡಗಿದ್ದರೆ, ಅಂತಹವರಿಗೆ ಭಿಕ್ಷಾಟನೆ ನಿರ್ಮೂಲನೆ ಕಾಯ್ದೆಯಲ್ಲಿ ಶಿಕ್ಷಿಸಲು ಸಾಧ್ಯವಿಲ್ಲ. ಜೆಜೆ ಆಕ್ಟ್ ಹಾಗೂ ಭಿಕ್ಷಾಟನೆ ನಿರ್ಮೂಲನೆ ಕಾಯ್ದೆ ಜಾರಿಗೊಳಿಸುವ ಸಂದರ್ಭದಲ್ಲಿ ಸಾಕಷ್ಟು ಗೊಂದಲವಿದೆ. ಇದರ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಭಿಕ್ಷಾಟನೆ ನಿರ್ಮೂಲನೆ ಕಾಯ್ದೆ ಜಾರಿಗೊಳಿಸುವಲ್ಲಿ ಅಧಿಕಾರಿಗಳ ಲೋಪ ಎದ್ದು ಕಾಣುತ್ತಿದೆ.
> – ಪರಶು, ನಿರ್ದೇಶಕರು, ಒಡನಾಡಿ ಸಂಸ್ಥೆ

ಸಿಕ್ಕಿದ್ದಾರೆ. ಅಂತೆಯೇ ರಾಜ್ಯಾದ್ಯಂತ 2022ರಲ್ಲಿ 453 ಮಂದಿ, 2021ರಲ್ಲಿ 288 ಮಂದಿ ಸಿಕ್ಕಿದ್ದಾರೆ.

ಭಿಕ್ಷಾಟನೆ ನಿರ್ಮೂಲನೆಗೆ ಶೇ.3ರಷ್ಟು ಸೆಸ್: ಸ್ಥಳೀಯ ಮಟ್ಟದಲ್ಲಿ ಹಲವು ತೆರಿಗೆಗಳ ಜೊತೆಗೆ ಭಿಕ್ಷಾಟನೆ ನಿರ್ಮೂಲನೆಗೂ ಶೇ.3ರಷ್ಟು ತೆರಿಗೆ ವಿಧಿಸಿ ವಸೂಲಿ ಮಾಡಲಾಗುತ್ತದೆ. ಈ ಅನುದಾನ ಭಿಕ್ಷಾಟನೆ ನಿರ್ಮೂಲನೆಗೆ ಉಪಯೋಗವಾಗುತ್ತಿದೆಯೇ ಎಂಬುದು ಇಂದಿಗೂ ಯಕ್ಷ ಪ್ರಶ್ನೆ. ಇದರ ಬಗ್ಗೆ ಅಧಿಕಾರಿಗಳಾಗಲಿ, ಸರ್ಕಾರವಾಗಲೀ ಮಾಧ್ಯಮಗಳ ಮೂಲಕ ಜನರಿಗೆ ತಿಳಿಸುತ್ತಿಲ್ಲ ಎಂದು ಒಡನಾಡಿ ಸಂಸ್ಥೆಯ ನಿರ್ದೇಶಕ ಪರಶು 'ಮೈಸೂರು ಮಿತ್ರ'ನ ಬಳಿ ಬೇಸರ ವ್ಯಕ್ತಪಡಿಸಿದರು.

ಭಿಕ್ಷಾಟನೆ ಅಪರಾಧ: ಮಕ್ಕಳಿಂದ ಭಿಕ್ಷಾಟನೆ ಮಾಡಿಸುವುದು ಅದೊಂದು ದೊಡ್ಡ ಅಪರಾಧ. ಭಿಕ್ಷೆ ನೀಡುವ ಮೂಲಕ ಭಿಕ್ಷಾಟನೆಯನ್ನು ಪ್ರೋತ್ಸಾಹಿಸಬೇಡಿ ಎಂಬ ಸರ್ಕಾರಿ ಶೀರ್ಷಿಕೆಯಿದೆ. ಭಿಕ್ಷಾಟನೆ ಒಂದು ಲಾಭದಾಯಕ ಉದ್ಯೋಗ ಮಾಡಿಕೊಂಡಿರುವ ಕೆಲ ಭಿಕ್ಷುಕರೂ ಇದ್ದಾರೆ. ಭಿಕ್ಷಾಟನೆ ನಿರ್ಮೂಲನೆ ಕಾಯ್ದೆ 1975ರಿಂದಲೂ ಜಾರಿಯಲ್ಲಿದೆ.

ಗೌರವಕ್ಕೆ ಪಾತ್ರವಾಗಿತ್ತು: ಒಂದು ಕಾಲಕ್ಕೆ ಭಾರತದಲ್ಲಿ ಭಿಕ್ಷುಕ ವೃತ್ತಿ ಸಮಾಜದ ಗೌರವಕ್ಕೆ ಪಾತ್ರವಾಗಿತ್ತು. ಗುರುಕುಲದಲ್ಲಿದ್ದ ವಿದ್ಯಾರ್ಥಿಗಳು ಭಿಕ್ಷಾನ್ನವನ್ನು ಸಂಗ್ರಹಿಸಿ, ಗುರುಗಳಿಗೆ ಒಪ್ಪಿಸಿ ಗುರುಕುಲದಲ್ಲಿರುವವರೆಲ್ಲರೂ ಹಂಚಿಕೊಂಡು ಉಣ್ಣುವುದು ಪ್ರಾಚೀನ ವಿದ್ಯಾಭ್ಯಾಸಕ್ಕೆ ಹೊಂದಿಕೊಂಡ ಪದ್ಧತಿ. ಈಗಲೂ ಉಪನಯನ ಸಂಸ್ಕಾರದಲ್ಲಿ ವಟುವು 'ಭವತಿ ಭಿಕ್ಷಾಂದೇಹಿ' ನಂಟರಿಷ್ಟರಿಂದ ಭಿಕ್ಷೆ ಪಡೆದು ಗುರುಗಳಿಗೆ/ಪುರೋಹಿತರಿಗೆ ಒಪ್ಪಿಸುವ ಸಂಪ್ರದಾಯವಿದೆ. ಇಂದಿಗೂ ಕೆಲವು ಕಡೆ ಧಾರ್ಮಿಕ ಪದ್ಧತಿಯಡಿ ಭಿಕ್ಷೆ ಎತ್ತುವ ಪದ್ಧತಿ ಇತ್ತು. ಇದೀಗ ಇದರ ವ್ಯಾಖ್ಯಾನ ಸಂಪೂರ್ಣ ಬದಲಾಗಿದೆ.

ಕೃಷಿ ಸರ್ವೋದಯ ಫೌಂಡೇಷನ್‌ನಲ್ಲಿ ಕೆಸಿಇಟಿ, ನೀಟ್ ಕ್ರ್ಯಾಶ್ ಕೋರ್ಸ್ ಉದ್ಘಾಟನೆ

ಮೈಸೂರು, ಮಾ. 25– ಕೃಷಿಕ ಸರ್ವೋದಯ ಫೌಂಡೇಷನ್(ಕೆಎಸ್‌ಎಫ್) ಮೈಸೂರು ಶಾಖೆ ವತಿಯಿಂದ ಕೆಸಿಇಟಿ/ನೀಟ್ 2025 ಕ್ರ್ಯಾಶ್ ಕೋರ್ಸ್ ಉದ್ಘಾಟನೆ ಮತ್ತು ಶಿಷ್ಯ ವೇತನ ವಿತರಣಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಮಂಟೆಲಿಂಗು ಮಾತನಾಡಿ, ವಿದ್ಯಾರ್ಥಿ ದಿಸೆಯಲ್ಲಿ ಶಿಸ್ತುಬದ್ಧವಾಗಿದ್ದರೆ ವೃತ್ತಿ ಜೀವನದ ಹಾದಿ ಸುಗಮವಾಗಿರುತ್ತದೆ. ಶಿಸ್ತು ಪರಿಪಾಲನೆ ಕಷ್ಟಕರವೆನಿಸಿದರೂ ಅದು ಯಶಸ್ಸಿನ ಕೀಲಿಕೈ ಎನ್ನುವುದನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಹುಣಸೂರು ಪಿಯು ಕಾಲೇಜಿನ ಪ್ರಾಂಶುಪಾಲ ಎ.ಆರ್.ರಾಮೇಗೌಡ ಮಾತನಾಡಿ, ವಿದ್ಯಾರ್ಥಿಗಳು ಅಧ್ಯಯನದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಶ್ರದ್ಧೆಯಿಂದ ಕಲಿತು ಉತ್ತಮ ಅಂಕಗಳನ್ನು ಗಳಿಸಬೇಕು. ಕೆಸಿಇಟಿ/ನೀಟ್ ಕ್ರ್ಯಾಶ್ ಕೋರ್ಸ್ ಅನ್ನು ಸೇವಾ ಉದ್ದೇಶ ದೊಂದಿಗೆ ನಡೆಸುತ್ತಿದ್ದು, ಅಭ್ಯರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕೆಎಸ್‌ಎಫ್ ಮೈಸೂರು ಶಾಖೆ ಅಧ್ಯಕ್ಷರಾದ ವಿಶ್ರಾಂತ ಕುಲಪತಿ ಡಾ.ಎಸ್.ಎಸ್. ರಾಮೇಗೌಡ ಮಾತನಾಡಿ, ಈ ವರ್ಷ ಪ್ರತಿಭಾವಂತ ಮತ್ತು ಅಗತ್ಯವಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ ರೂಪದಲ್ಲಿ 80 ಲಕ್ಷಕ್ಕೂ ಹೆಚ್ಚು ಹಣವನ್ನು ಕೆಎಸ್‌ಎಫ್ ಖರ್ಚು ಮಾಡುತ್ತಿದೆ. ಈ ಮೊತ್ತವನ್ನು ಸಂಪೂರ್ಣವಾಗಿ ಶಿಕ್ಷಣದ ಉದ್ದೇಶಕ್ಕೇ ಬಳಸಬೇಕು. ಕೋರ್ಸ್ ಪಡೆದ ವಿದ್ಯಾರ್ಥಿಗಳು, ಅತ್ಯುತ್ತಮ ಸಾಧನೆ ಮಾಡಬೇಕು ಎಂದು ಆಶಿಸಿದರು.

ಕಾರ್ಯದರ್ಶಿ ಹೆಚ್.ಕಿಶೋರಚಂದ್ರ ಮಾತನಾಡಿ, ರಾಜ್ಯಾದ್ಯಂತ ಮೆಡಿಕಲ್, ಇಂಜಿನಿಯರಿಂಗ್ ಸೇರಿದಂತೆ ಇತರೆ ಪದವಿ ಹಾಗೂ ಪಿಯುಸಿಯ ಸುಮಾರು 441 ಅರ್ಹ ವಿದ್ಯಾರ್ಥಿಗಳಿಗೆ 73.10 ಲಕ್ಷ ರೂ. ಶಿಷ್ಯ ವೇತನ ನೀಡಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾರ್ಯನಿರ್ವಾಹಕ ಸಮಿತಿಯ ಡಾ.ಕೆ.ಚಿದಾನಂದಗೌಡ, ಬಿ.ಕೆ. ಶಿವಣ್ಣ, ಕೆ.ಎಂ.ಚಂದ್ರೇಗೌಡ, ವೈ.ಕೆ.ಕೆಂಚೇ ಗೌಡ, ಎಸ್.ವಿ.ಗೌಡಪ್ಪ, ಜಯರಾಮ, ಡಾ.ಬಿ. ಶಂಕರ್ ಮತ್ತಿತರರು ಉಪಸ್ಥಿತರಿದ್ದರು.



ಕೃಷಿಕ ಸರ್ವೋದಯ ಫೌಂಡೇಷನ್ ಮೈಸೂರು ಶಾಖೆ ವತಿಯಿಂದ ಕೆಸಿಇಟಿ/ ನೀಟ್ 2025 ಕ್ರ್ಯಾಶ್ ಕೋರ್ಸ್ ಉದ್ಘಾಟನೆ ಮತ್ತು ಶಿಷ್ಯ ವೇತನ ವಿತರಣಾ ಕಾರ್ಯಕ್ರಮ ನಡೆಯಿತು.

ಯಶಸ್ವಿನಿ ಸದಸ್ಯತ್ವ ನವೀಕರಣಕ್ಕೆ ಅವಕಾಶ

ಮೈಸೂರು, ಮಾ.25– ಮೈಸೂರಿನ ಜಯಲಕ್ಷ್ಮೀಪುರಂನ ಕೊಡಗು ಸಹಕಾರ ಸಂಘದ ಸದಸ್ಯರು, ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಸದಸ್ಯತ್ವ ನವೀಕರಣ ಹಾಗೂ ಹೊಸ ನೋಂದಣಿ ಮಾಡಿಸಲು ಮಾ.31ರವರೆಗೆ ಅವಕಾಶವಿದ್ದು, ಹೆಚ್ಚಿನ ಮಾಹಿತಿಗೆ ಸಂಘದ ಕಚೇರಿ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಲಿಂಗ ತಾರತಮ್ಯ, ಮಾನವ ಸಾಗಾಣಿಕೆ, ಲೈಂಗಿಕ ಶೋಷಣೆ ವಿರುದ್ಧ ಜನ ಜಾಗೃತಿಗೆ ಮಾ.29ಕ್ಕೆ ಯೋಗ ಕಾರ್ಯಕ್ರಮ

ಮೈಸೂರು,ಮಾ.25(ಎಂಟಿವೈ)– ಲಿಂಗ ತಾರತಮ್ಯ, ಮಾನವ ಸಾಗಾಣಿಕೆ ಹಾಗೂ ಲೈಂಗಿಕ ಶೋಷಣೆಯ ವಿರುದ್ಧ ಜನ ಜಾಗೃತಿ ಮೂಡಿಸಲು ಮಾ.29ರಂದು ಬೆಳಗ್ಗೆ 7 ಗಂಟೆಗೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಲ್ಲಿ 17ನೇ ವರ್ಷದ 'ಯೋಗ ಸ್ವಾಪ್ಸ್ ಟ್ರಾಫಿಕ್' ಅಂತಾರಾಷ್ಟ್ರೀಯ ಯೋಗ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ಒಡನಾಡಿ ಸಂಸ್ಥೆಯ ಸಂಸ್ಥಾಪಕರಾದ ಸ್ಟ್ಯಾನ್ಲಿ–ಪರಶು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾನವ ಕಳ್ಳ ಸಾಗಾಣಿಕೆ ತಡೆಗಟ್ಟುವ ನಿಟ್ಟಿನಲ್ಲಿ ಒಡನಾಡಿ ಸಂಸ್ಥೆ ಕಳೆದ 17 ವರ್ಷದಿಂದ ಯೋಗವನ್ನು ಮುಂದಿಟ್ಟುಕೊಂಡು ವಿವಿಧ ದೇಶಗಳಲ್ಲಿ ಏಕಕಾಲಕ್ಕೆ ಸಾಮೂಹಿಕ ಯೋಗ ಪ್ರದರ್ಶನದೊಂದಿಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಈ ಬಾರಿ 'ಸಮಾನತೆಗಾಗಿ ಒಡನಾಡಿ' ಶೀರ್ಷಿಕೆಯಡಿ ವಿಶ್ವದ 40 ದೇಶಗಳ 168 ನಗರಗಳಲ್ಲಿ ಅಲ್ಲಿನ ಕಾಲಮಾನಕ್ಕೆ ಅನುಗುಣವಾಗಿ 'ಯೋಗ ಸ್ವಾಪ್ಸ್ ಟ್ರಾಫಿಕ್' ಕಾರ್ಯಕ್ರಮ ನಡೆಯಲಿದೆ. ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಮಾ.29ರಂದು ಬೆಳಗ್ಗೆ 7 ಗಂಟೆಗೆ ಆರಂಭವಾಗುವ ಈ ಯೋಗ ಕಾರ್ಯಕ್ರಮ ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಯೋಗಪಟುಗಳು ಪಾಲ್ಗೊಂಡು ಯೋಗ, ಜಗತ್ತಿನ ಒಳಿತಿಗಾಗಿ ಸೂರ್ಯ ನಮಸ್ಕಾರ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಲಂಡನ್ ಮೂಲದ ಪ್ರಜೆಗಳು ಭಾಗವಹಿಸಲಿದ್ದಾರೆ ಎಂದರು. ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಡಿಸಿಪಿ ಎಸ್.ಜಾಹ್ನವಿ, ಒಡನಾಡಿ ಅಡ್ವೆಂಚರ್ ಆಶ್ರಮದ ಧರ್ಮದರ್ಶಿ ಗ್ಯಾರಿ ಸ್ಟೀವನ್, ಮೈಸೂರು ಯೋಗ ಒಕ್ಕೂಟದ ಡಾ.ಬಿ.ಸಿ.ಮೂರ್ತಿ, ದೇವರಾಜು ಸೇರಿದಂತೆ ದೇಶ–ವಿದೇಶಗಳ ಸ್ವಯಂಸೇವಕರು, ಸ್ಥಳೀಯ ನಾಗರಿಕರು, ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಯೋಗ ಶಾಲೆಗಳ ಪ್ರತಿನಿಧಿಗಳು ಹಾಗೂ ಒಡನಾಡಿಯ ಮಹಿಳೆಯರು ಮತ್ತು ಮಕ್ಕಳು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಟಿ–ಶರ್ಟ್ ಖರೀದಿಸಿ ಬೆಂಬಲಿಸಿ: ನಮ್ಮ ಈ ಹೋರಾಟಕ್ಕೆ ಆರ್ಥಿಕ ಸಂಪನ್ಮೂಲ ಅವಶ್ಯಕತೆ ಇರುವುದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಟಿ–ಶರ್ಟ್ ಖರೀದಿಸಿ ಬೆಂಬಲಿಸುವಂತೆ ಸ್ಟ್ಯಾನ್ಲಿ ಮನವಿ ಮಾಡಿದರು. ಗೋಷ್ಠಿಯಲ್ಲಿ ಮೈಸೂರು ಯೋಗ ಒಕ್ಕೂಟದ ಡಾ.ಬಿ.ಸಿ.ಮೂರ್ತಿ, ಒಡನಾಡಿ ಸಂಸ್ಥೆಯ ಪ್ರದೀಪ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.03.2025 ಬುಧವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9 ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಒಬೆಸಿಟಿ (ತೂಕ ಇಳಿಸುವಿಕೆ) ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಮಹಾರತ್ನ ಟ್ರಸ್ಟ್ :** ಬೆಳಗ್ಗೆ 10ಕ್ಕೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರಿಗಾಗಿ ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆ, ಉದ್ಘಾಟನೆ : ಸಮಾಜ ಚಿಂತಕ ಪ್ರೊ. ಪಿ. ಶಿವಣ್ಣ, ಮುಖ್ಯ ಅತಿಥಿಗಳು : ಮಹಾರತ್ನ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಮೈಸೂರು ಎಂ. ಮಹಾಲಿಂಗು; ಸಂಜೆ 4ಕ್ಕೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಲೇಖಕಿ ಶ್ರೀಮತಿ ಬಿ.ಆರ್. ನಾಗರತ್ನ, ಅಧ್ಯಕ್ಷತೆ : ಮಹಾರತ್ನ ಟ್ರಸ್ಟ್ ಗೌರವ ಅಧ್ಯಕ್ಷ ಸಿ.ವಿ. ಪಾರ್ಥಸಾರಥಿ, ಮುಖ್ಯ ಅತಿಥಿಗಳು : ಡಾ. ಎಲ್.ವಿ. ವನಿತಾ, ಲೇಖಕಿ ಶ್ರೀಮತಿ ಸಿ.ಕೆ. ಆಶಾ, ಸುಗಮ ಸಂಗೀತ ಗಾಯಕ ಮೈಸೂರು ಎಂ. ಮಹಾಲಿಂಗು, ಟ್ರಸ್ಟ್ ಕಾರ್ಯದರ್ಶಿ ಶ್ರೀಮತಿ ರೂಪ, ಖಜಾಂಚಿ ಶ್ರೀಮತಿ ಎಂ. ನಾಗರತ್ನ, ಸ್ಥಳ: ಬಸವ ಸಮಿತಿ, ಕೊಡವ ಸಮಾಜದ ಪಕ್ಕ, ವಿಜಯನಗರ 1ನೇ ಹಂತ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ತರಂಗ, ಅಂತರ ಕಾಲೇಜು ಸ್ಪರ್ಧೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ್, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ. ಬಿ. ಚಂದ್ರಶೇಖರ್, ಮುಖ್ಯ ಅತಿಥಿಗಳು : ಕೈಗಾರಿಕೋದ್ಯಮಿ ರಂಗರಾವ್ ಕೃಷ್ಣ, ಹಿನ್ನೆಲೆ ಗಾಯಕಿ ಶ್ರೀಮತಿ ಶಶಿಕಲಾ ಸುನೀಲ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿವಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ಒಂದು ದಿನದ ಪ್ರಾಂಶುಪಾಲರುಗಳ ಸಭೆ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಅಧ್ಯಕ್ಷತೆ : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ಎಸ್.ಎಸ್. ಮಾಲಿನಿ, ಸ್ಥಳ: ಎಂಎಂಟಿಟಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಬೆಳಗ್ಗೆ 10.30ಕ್ಕೆ ಜಾನಪದ : ಬಹುಮುಖಿ ನೆಲೆಗಳು ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕೃತಿ ಲೋಕಾರ್ಪಣೆ : ಜಾನಪದ ವಿದ್ವಾಂಸ ಪ್ರೊ. ಕೃಷ್ಣಮೂರ್ತಿ ಹನೂರು, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಮುಖ್ಯ ಅತಿಥಿಗಳು : ಸಮಾಜ ಸೇವಕ ಅಹಿಂದ ಜವರಪ್ಪ; ಸಂಜೆ 4 ರಿಂದ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಜಾನಪದ ವಿದ್ವಾಂಸ ಪ್ರೊ. ಪಿ.ಕೆ. ರಾಜಶೇಖರ್, ಮುಖ್ಯ ಅತಿಥಿಗಳು : ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಅಧ್ಯಕ್ಷತೆ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಉಪಸ್ಥಿತರು : ಪ್ರೊ. ಎಚ್.ಆರ್. ಚೇತನ, ಕರ್ನಾಟಕ ಜಾನಪದ ಸಂಶೋಧಕರ ಒಕ್ಕೂಟದ ಅಧ್ಯಕ್ಷ ಕಲ್ಲಹಳ್ಳಿ ಕುಮಾರ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ.

■ **ಯುವರಾಜ ಕಾಲೇಜು:** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು: ವಿಶ್ರಾಂತ ಪ್ರಾಧ್ಯಾಪಕ ಡಾ.ಹೆಚ್.ಎಂ.ಕಲಾಶ್ರೀ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಎಸ್.ಮಹದೇವಮೂರ್ತಿ, ಉಪಸ್ಥಿತರು: ಆಡಳಿತಾಧಿಕಾರಿ ಪ್ರೊ.ಅಜಯ್‌ಕುಮಾರ್, ನಾಗೇಶ್ ಬಾಬು, ಪ್ರೊ.ವೆಂಕಟೇಶ, ಡಾ.ಸೋಮಶೇಖರ್, ಪ್ರೊ.ಜೆ.ಎಸ್.ಆಶಾದೇವಿ, ಸ್ಥಳ: ಗ್ರಂಥಾಲಯ, ಯುವರಾಜ ಕಾಲೇಜು, ಬೆಳಗ್ಗೆ 11ಕ್ಕೆ

■ **ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘ :** ವಿಶ್ವ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ವಿದ್ಯಾವರ್ಧಕ ಕಾಲೇಜು ನಿವೃತ್ತ ಆಡಳಿತಾಧಿಕಾರಿ ಶ್ರೀಮತಿ ಡಾ. ಟಿ.ಸಿ. ಪೂರ್ಣಿಮಾ, ಅಭಿನಂದಿತರು : ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಡಾ. ಸುಮಿತ್ರ, ಸಮಾಜ ಸೇವಕಿ ಶ್ರೀಮತಿ ಮೀನಾಕುಮಾರಿ, ಯೋಗ ಪಟು ಕು. ಎನ್. ಹಾಸಿನಿ, ಸ್ಥಳ: ಸಂಘದ ಆವರಣ, ಹೊಸ ನ್ಯಾಯಾಲಯದ ಎದುರು, ಕೆ.ಜಿ. ಕೊಪ್ಪಲು, ಬೆಳಗ್ಗೆ 11ಕ್ಕೆ.

■ **ನಾಟ್ಯ ಪ್ರದರ್ಶಕ ಕಲೆಗಳು ಮತ್ತು ಸಂಶೋಧನಾ ಕೇಂದ್ರ :** ವಿಶ್ವ ಮಹಿಳಾ ದಿನಾಚರಣೆ, ಮೈಮ್ ಟೀಮ್ ತಂಡದಿಂದ ನಂಗ್ಯಾಕೋ ಡೌಟು ಹಾಸ್ಯ ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 5ಕ್ಕೆ.

■ **ಶ್ರೀ ಬ್ರಹ್ಮರ್ಷಿ ಅಗಸ್ತ್ಯ ಲೋಪಾಮುದ್ರಾ ಜ್ಞಾನಪೀಠ, ಅಯೋಧ್ಯಾ ಪಬ್ಲಿಕೇಷನ್ಸ್, ಬೆಂಗಳೂರು:** ಡಾ.ಸುಧಾ ಎಂ.ಎನ್., ಓ.ಶ್ಯಾಮಭಟ್ ಅವರು ರಚಿಸಿರುವ ಅಗಸ್ತ್ಯ ದರ್ಶನ ಪುಸ್ತಕ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಮಾತಾ ಅಮೃತಾನಂದಮಯಿ ಮಠದ ಶ್ರೀ ಬ್ರಹ್ಮಚಾರಿ ಪ್ರಸಾದಾಮೃತ ಚೈತನ್ಯ, ಮುಖ್ಯ ಅತಿಥಿಗಳು: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ಅಧ್ಯಕ್ಷತೆ: ಬೆಂಗಳೂರು ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ, ಸ್ಥಳ: ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಸಂಜೆ 6.15ಕ್ಕೆ

ದೇವಲಾಪುರದಲ್ಲಿಂದು, ಮೈಸೂರು ತಾಲೂಕು

■ **ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ:** ಧಾರ್ಮಿಕ ಸಭೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಗಂಗ ಸ್ವಾಮೀಜಿ, ಅಧ್ಯಕ್ಷತೆ: ದೇವನೂರು ಶ್ರೀ ಗುರುಮಲ್ಲೇಶ್ವರ ತ್ರಿವಿಧ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮೀಜಿ, ಉಪಸ್ಥಿತರು: ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀ ಸಿದ್ಧಮಲ್ಲ ಸ್ವಾಮೀಜಿ, ಡಾ.ಶ್ರೀ ಶರತ್‌ಚಂದ್ರ ಸ್ವಾಮೀಜಿ, ಶ್ರೀ ದೇಗುಲ ಮಠದ ಶ್ರೀ ಚನ್ನಬಸವಸ್ವಾಮೀಜಿ, ಶ್ರೀ ಗುರುಕಂಬಳೀಶ್ವರ ಮಠದ ಶ್ರೀ ಚನ್ನಬಸವಸ್ವಾಮೀಜಿ, ಶ್ರೀ ಸಾಲೂರು ಬೃಹನ್ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಬಸವ ಮಂಥಳಿ ಅನಾವರಣ: ವಿ.ಸೋಮಣ್ಣ ಪ್ರತಿಷ್ಠಾನ ಅಧ್ಯಕ್ಷೆ ಶ್ರೀಮತಿ ಶೈಲಜಾ ಸೋಮಣ್ಣ, ಶ್ರೀ ಗುರುಮಲ್ಲೇಶ್ವರ ಪ್ರಾರ್ಥನಾ ಮಂದಿರ ಉದ್ಘಾಟನೆ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಿ.ಎಸ್. ಸದಾಶಿವಮೂರ್ತಿ ಅವರಿಂದ ಉಪನ್ಯಾಸ, ಸ್ಥಳ: ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ, ದೇವಲಾಪುರ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು– ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ನಿರೂಪಣೆ–ಉಮೇಶ್. ಎಸ್. ಎಸ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಟಿ.ಎಸ್. ಸ್ನೇಹಾ, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ –ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮಂಡ್ಯ ಜಿಲ್ಲೆ ಚಿನಕುರಳಿಯ ಎಸ್.ಟಿ.ಜಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ನಿಶಾಂತ್. ಎ. ನಾಯ್ಡು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಮೇವು ಮೆಲುಕು–ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಸುಸ್ಥಿರ ಹೈನುಗಾರಿಕೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿ ಗುಮ್ಮನಹಳ್ಳಿ ಗ್ರಾಮದ ಕೃಷಿಕ ದಂಪತಿ ಕಾಂತರಾಜು ಮತ್ತು ಜ್ಯೋತಿ. ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ನಕ್ಷತ್ರ ಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಖ್ಯಾತ ಸಂಗೀತ ನಿರ್ದೇಶಕ ಮನೋಮೂರ್ತಿಯವರ ಜೊತೆ ಸಂವಾದ ಇವರೊಂದಿಗೆ ಭಾಗವಹಿಸುತ್ತಾರೆ–ಪ್ರಭುಸ್ವಾಮಿ ಮಳಿಮಠ್ ಹಾಗೂ ಶ್ರೀಮಾನ್. ಎಸ್., 8.00 ಸಂಸತ್ ಸಮೀಕ್ಷಾ, 9.30 ಕ್ರೀಡಾಲೋಕ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

BEFORE THE COURT OF THE HON'BLE IV ADDITIONAL SENIOR CIVIL JUDGE

At Mysuru
[Original Jurisdiction]

In the Matter of Probate and Succesion Certificate In P&S. C.No.5 of 2025

BETWEEN
1. Shri. Udaya Simha. A., Son of Late. Shri. Anantha Krishna, Aged about 60 years, Residing at No. 55, III Cross, Vinayaka Layout, Bhoopasandra, II Stage, R. M. V. Extension, Bangalore North-560 094.
2. Dr. Shri. Sanjay Ananthakrishna, Son of Late. Shri. Anantha Krishna, Aged about 60 years, No. 05, 5th Cross Road, M.L.A. Layout, Next to Signature Apartments, M.L.A Layout, Bhoopasandra, Bangalore North-560094.

Petitioners

And

None. Respondents

COURT NOTICE

Whereas the above-named petitioners have lodged the above petition for grant of Succession Certificate with respect Securities in the form subsisting balance amount in Post Bank Accounts of Krishnamurthy Puram Branch, Mysore detailed in schedule to this Court Notice as provided under Section 372 of the Indian Succession Act with respect to schedule properties as Heirs in Succession of Late Smt. Girija. A. wife of Late Shri. Anantha Krishna, being then resident of D.1496, 7th Cross, Krishnamurthy Puram, Mysore 570 004.

Any person has lawful vested interest in the schedule properties may lodge Caveat as contemplated under Section 284 of the Indian Succession Act and may oppose issuance of such Succession Certificate on the next date of hearing of this case in the forenoon at 11 'O' Clock on 03-05-2025 either in person or through authorized agent or through Advocate failing which the matter will be proceeded with. Given Under the Seal and Signature of this Court on this 19 March 2025.

SCHEDULE PROPERTY [Schedule Of Securities]

Sl. No	Nature of Holdings	Monetary Value in.
1	Subsisting Balance amount in Post Office Account of Krishnamurthy Puram Branch No. 31363-2177519293	99,000/=
2	Subsisting Balance amount in Post Office Account of Krishnamurthy Puram Branch No. 31697-2177523627	2,01,000/=
3	Subsisting Balance amount in Post Office Account of Krishnamurthy Puram Branch No. 367036-2177497365	25,035/=
4	Subsisting Balance amount in Post Office Account of Krishnamurthy Puram Branch No. 366757-2177497126	1894/=
5	Subsisting Balance amount in Post Office Account of Krishnamurthy Puram Branch No. 95163-2177514526	2,00,000/=
5 Accounts	TOTAL	5,26,929/=

Deshak Law Associates
Chambers: II Floor, S.B.I Building
Sahukar Channaiah Road,
Saraswathipuram, Mysuru 570009
Mob: 99450 01234, E-mail: deshakcourts@gmail.com

By Order of the Court
Sd/- Chief Ministerial officer
Court of Senior Civil Judge
and CJM., Mysuru

Facebook:https://www/facebook.com/Mcdccbank Phone :2520836, 2436460, 2421047
Email: mcdccb@rediffmail.com Website:https://www.mcdccbank.com

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ

ನೆಹರು ವೃತ್ತ, ಅಶೋಕ ರಸ್ತೆ, ಮೈಸೂರು –570001

ಪತ್ರಿಕಾ ಪ್ರಕಟಣೆ

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ನೆಹರು ವೃತ್ತ, ಅಶೋಕ ರಸ್ತೆ, ಮೈಸೂರು. ಇದರ ಸದಸ್ಯ ಸಹಕಾರ ಸಂಘಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೇ, ಬ್ಯಾಂಕಿನ 2025 ರಿಂದ 2030 ನೇ ಸಾಲಿನ ಮುಂದಿನ ಐದು ವರ್ಷಗಳ ಅವಧಿಗೆ ಚುನಾವಣಾ ನಡೆಸಲು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಫೆಡರಲ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರು ದಿನಾಂಕ:15.06.2025 ಕ್ಕೆ ಚುನಾವಣಾ ದಿನಾಂಕವನ್ನು ನಿಗಧಿಪಡಿಸಿರುತ್ತಾರೆ.


- ಬ್ಯಾಂಕಿನ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ–1959 ಮತ್ತು ನಿಯಮಗಳು 1960 ರ ನಿಯಮ 13(D)(2-A)(ii) ರಂತೆ ಅನರ್ಹ ಸಂಘಗಳಿಗೆ ಅನರ್ಹತೆಗೆ ಸಂಬಂಧಿಸಿದಂತೆ ಕಾರಣಗಳನ್ನು ನಮೂದಿಸಿ ನೊಂದಾಯಿತ ಅಂಚೆಯ ಮೂಲಕ ಈಗಾಗಲೇ ನೋಟಿಸ್‌ಗಳನ್ನು ನೀಡಿದ್ದು, ದಿನಾಂಕ:28.03.2025 ರ ಸಮಯ ಸಂಜೆ 5.00 ಗಂಟೆಯೊಳಗೆ ಅನರ್ಹ ಸಹಕಾರ ಸಂಘಗಳು ಆಕ್ಷೇಪಣೆಯನ್ನು ಬ್ಯಾಂಕಿಗೆ ಸಲ್ಲಿಸುವುದು.

ಮುಂದುವರೆದು, ಕರಡು ಮತದಾರರ ಪಟ್ಟಿಯಂತೆ ಡೆಲಿಗೇಟ್ ಫಾರಂಗಳನ್ನು ಈಗಾಗಲೇ ಸದಸ್ಯ ಸಂಘಗಳಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದು, ಡೆಲಿಗೇಟ್ ಫಾರಂಗಳನ್ನು ನಿಯಮಾನುಸಾರ ಕ್ರಮಗಳನ್ನು ಅನುಸರಿಸಿ ಭರ್ತಿ ಮಾಡಿ ದಿನಾಂಕ:05.04.2025 ರಿಂದ 20.04.2025 ರ ಸಮಯ ಸಂಜೆ 5.00 ಗಂಟೆಯೊಳಗೆ ಬ್ಯಾಂಕಿಗೆ ಸಲ್ಲಿಸತಕ್ಕದ್ದು.

- ಬ್ಯಾಂಕಿನ ಚುನಾವಣೆಗೆ ಸಂಬಂಧಿಸಿದಂತೆ ಕರಡು ಅರ್ಹ ಮತ್ತು ಕರಡು ಅನರ್ಹ ಸಹಕಾರ ಸಂಘಗಳ ಪಟ್ಟಿಯನ್ನು ಜಿಲ್ಲಾಧಿಕಾರಿಗಳು, ಮೈಸೂರು ಹಾಗೂ ಫೆಡರಲ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು, ಮೈಸೂರು ಇವರ ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ಬ್ಯಾಂಕಿನ ಸೂಚನಾ ಫಲಕದಲ್ಲಿ ಈಗಗಾಲೇ ಪ್ರಕಟಿಸಲಾಗಿರುತ್ತದೆ.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ



ಶ್ರೀ ರಂಗಪ್ಪನವರ ಧರ್ಮಪತ್ನಿಯವರಾದ
ಶ್ರೀಮತಿ ಕಾಮಾಕ್ಷಮ್ಮನವರು
ದಿ:17–03–2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ
ದಿ: 27–03–2025ರ ಗುರುವಾರ ಬೆ.10:30 ಗಂಟೆಗೆ
ಉತ್ತರ ಕ್ರಿಯಾದಿ ಕಾರ್ಯವನ್ನು ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀಮತಿ ಕಾಮಾಕ್ಷಮ್ಮ
ನಿಧನ: 17–03–2025

ದುಃಖತಪ್ತರು: ರಂಗಪ್ಪನವರ ಕುಟುಂಬವರ್ಗ, ಮಹದೇವಪುರ ಮೈಸೂರು

15ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 15 ವರ್ಷವಾಯಿತು ಸದಾ ನಿಮ್ಮ ನೆನಪಿನಲ್ಲಿರುವ

ಪಿ.ಮಹದೇವ
ಪ್ರಥಮ ವರ್ಜೆ ಗುತ್ತಿಗೆದಾರರು, ಹಡಜನ

ದುಃಖತಪ್ತರು: ಪತ್ನಿ, ಮಕ್ಕಳು ಮತ್ತು ಕುಟುಂಬವರ್ಗದವರು



ಹಸಿರು ನಮ್ಮ ಉಸಿರು

Before Honourable Prl Senior Civil judge and CJM At Mysore
F.D. P NO 35 / 2023

Petitoiner: Sri V.B Dhanaraj, S/o Late S.V. Bacha Mudaliar, Aged about 71 years Residing at No 2425, 1st Cross, Hosabandikere K.R Mohalla Mysuru - 570004

Respondent: Sri V.B Umapathi, S/o Late S.V Bacha Mudaliar Aged about 63 years, Residing at No 2040, Madhachar Road K.R Mohalla Mysore.

PUBLIC NOTICE

The petitioner had filed the above petition seeking for his 2/3 share and respondent's 1/3 share as per Judgment and Decree of O.S No 253 /1990 on the file of Prl Senior Civil Judge and C.J.M AT Mysore. The petitioner has passed away, on 27.08.2023, and if any person who as Legal Representatives of Deceased petitioner i.e. V. B Dhanaraj, can either in person or through Advocate can appear before the Honourable Court and participate in the proceedings on 16/4/25. Day, at 11 AM, if not would proceed with the above matter as per law.

SCHEDULE : House property Bearing D. No 2042, situated at Madhavachar Road, K.R Mohalla Mysuru, measuring East to West 19ft. and North to South 59ft with RCC and Madras Tar race building inclusive of dwelling house and one shop which is bounded on the East by: House of Abdul Gaffar, West by: House of Mahadevappa, North by: Madhavachar Road, South by: Conservancy.

Given to Me under the Seal of This Court On this Date 24/3/25

By the order of the Court
Sd/- Chief Ministerial Officer
Prl Senior Civil judge and CJM At Mysore

Sd/- Advocates, H.V.Sreenath, S. Harsha, Ayesha Begum, Aravinda M.D, No 1499, 1st Floor, Kabir Road Mandi Mohalla, Mysore-01

ನಕ್ಕರೆ ಅದೇ ಸ್ವರ್ಗ

ತಿಮ್ಮ : ಅಲ್ವೋ ಕಾಲಿಗೆ ಹಾವು ಕಚ್ಚಿ ಇನ್ನೂ ಐದು ನಿಮಿಷ ಆಗಲಿಲ್ಲ. ಅಷ್ಟರೊಳಗೆ ಹೆಂಗ್ ಸತ್ತ?

ಗುಂಡ : ತಲೆಗೆ ವಿಷ ಏರತ್ತೇನೋ ಅಂತ, ಕುತ್ತಿಗೆಗೆ ಜೋರಾಗಿ ಹಗ್ಗ ಬಿಗಿದಿದ್ವಿ...!

ಮೈಸೂರು ಮಿತ್ರ

ಬುಧವಾರ, 26 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

'ಎಲ್ಲರನ್ನೂ ಸಹಾನುಭೂತಿ, ವಿನಯದಿಂದ ನೋಡಿರಿ... ಅವರು ಒಳ್ಳೆಯವರು ಎಂದಲ್ಲ, ನೀವು ಒಳ್ಳೆಯವರೆಂಬ ಕಾರಣಕ್ಕೆ...'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಿಂತೆ ಮಾಡಿದರೆ ಸಂತೆ ಸಾಗೀತೆ?

ನಿಮ್ಮ ಪತ್ರಗಳು

ಜ್ಞಾನಪೀಠ ಪ್ರಶಸ್ತಿ : ಕನ್ನಡ ಭಾಷೆ ಕಡೆಗಣನೆ

ಮಾನ್ಯರೆ,

59ನೇ ಜ್ಞಾನಪೀಠ ಪ್ರಶಸ್ತಿಯು ಈ ಬಾರಿ ಛತ್ತೀಸ್‌ಗಢದ ಹಿಂದಿ ಸಣ್ಣ ಕಥೆಗಾರ, ಸಾಹಿತಿ ವಿನೋದ್ ಕುಮಾರ್ ಅವರಿಗೆ ದೊರೆತಿದೆ. (ಪತ್ರಿಕಾ ವರದಿ. 23.3.25) ಇದು ಹಿಂದಿ ಭಾಷೆಗೆ ದೊರೆತ 12ನೇ ಪ್ರಶಸ್ತಿಯಾಗಿದೆ.

ಹಲವು ವರ್ಷಗಳ ಹಿಂದೆ ಭಾರತೀಯ ಭಾಷೆಗಳಲ್ಲೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದು ಬೀಗಿದ್ದ ಕನ್ನಡವು 2010ರಲ್ಲಿ ಕಂಬಾರರ ನಂತರ 15 ವರ್ಷ ಕಳೆದರೂ ಪ್ರಶಸ್ತಿಯ ಬರದಿಂದ ಬಳಲುತ್ತಿದೆ. ಕುವೆಂಪು, ಬೇಂದ್ರೆ, ಗೋಕಾಕ್, ಅನಂತಮೂರ್ತಿ, ಮಾಸ್ತಿ, ಕಾರ್ನಾಡ್, ಚೆಂಪಾ, ಜಿಎಸ್‌ಎಸ್., ಪಾಟೀಲ ಪುಟ್ಟಪ್ಪ ಹಾಗೂ ಇನ್ನು ಹಲವಾರು ಕವಿ, ಕವಯಿತ್ರಿಗಳಿಂದ ಕಂಗೊಳಿಸುತ್ತಿದ್ದ ಕನ್ನಡ ಸಾರಸ್ವತ ಲೋಕ, ದೇಶದ ಸಾಹಿತ್ಯ ಕ್ಷೇತ್ರದಲ್ಲೇ ಹೆಸರು ವಾಸಿಯಾಗಿತ್ತು. ಈಗಲೂ ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಬೈರಪ್ಪ, ಬಂಡಾಯ ಸಾಹಿತ್ಯದಿಂದ ದೊಡ್ಡ ಹೆಸರು ಮಾಡಿದ ಬರಗೂರು ರಾಮಚಂದ್ರಪ್ಪ ಮುಂತಾದ ಸಾಹಿತ್ಯ ದಿಗ್ಗಜರಿದ್ದರೂ ಕನ್ನಡಕ್ಕೆ ಜ್ಞಾನಪೀಠ ಲಭಿಸದಿರುವುದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಬಹು ದೊಡ್ಡ ನಷ್ಟವಾಗಿದೆ.

ಜ್ಞಾನಪೀಠ ಪ್ರಶಸ್ತಿಯನ್ನು ಜ್ಞಾನಪೀಠ ಸಾಂಸ್ಕೃತಿಕ ಸಂಘ ಎಂಬ ಖಾಸಗಿ ಸಂಸ್ಥೆ, ಭಾರತೀಯ 22 ಭಾಷೆಗಳು ಹಾಗೂ ಇಂಗ್ಲೀಷ್ ಸಾಹಿತ್ಯಕ್ಕೆ ಕೂಡ ಕೊಡುತ್ತಿದೆ. ಆದರೂ ಕನ್ನಡದ ಸಾಹಿತ್ಯ ಕ್ಷೇತ್ರವನ್ನು ಗಮನಿಸದೆ ಇರುವುದು ಕಂಡು ಬರುತ್ತಿದೆ. ಆದ್ದರಿಂದ ಇನ್ನಾದರೂ ಗಮನಿಸುವಂತೆ ಸಂಬಂಧಿಸಿಧವರು ಕ್ರಮ ವಹಿಸುವ ಅವಶ್ಯಕತೆ ಇದೆ. **–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

ಇ–ಖಾತೆ ಬಗ್ಗೆ ಪಾಲಿಕೆ ಅಧಿಕಾರಿಗಳು ಸ್ಪಷ್ಟನೆ ನೀಡಲಿ

ಮಾನ್ಯರೆ,

ಮೈಸೂರಿನ ಜನರು, ತಾವು ಹೊಂದಿರುವ, ಸ್ವಂತ ನಿವೇಶನ ಮತ್ತು ಮನೆಗೆ ಇ–ಖಾತಾವನ್ನು ಇದೇ ಮಾರ್ಚ್ 31ರೊಳಗೆ ಮಾಡಿಸಿಕೊಳ್ಳಬೇಕು. ಇಲ್ಲದಿದ್ದರೆ, ಮುಂದೆ ತೊಂದರೆ ಆಗಬಹುದು ಎಂದು ಕೆಲವರ ಅಪಪ್ರಚಾರದಿಂದ ಮೈಸೂರಿನ ಎಲ್ಲಾ ವಲಯ ಕಚೇರಿಯ ಮುಂದೆ ಸಾರ್ವಜನಿಕರು ಇ–ಖಾತೆ ಮಾಡಿಸಿಕೊಳ್ಳಬೇಕು ಎಂದು ಪರದಾಡುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಮಧ್ಯವರ್ತಿಗಳು ಮತ್ತು ಕೆಲವು ವಲಯ ಕಚೇರಿಯ ಅಧಿಕಾರಿಗಳ ದುಡ್ಡು ಮಾಡುವ ದಂಧೆಯಾಗುತ್ತಿದೆ.

ಇಷ್ಟು ವರ್ಷಗಳಿಂದಲೂ ಇಲ್ಲಿದ್ದು ಈಗ ದಿಢೀರನೇ ಇ– ಖಾತೆಯ ಪ್ರಸ್ತಾಪ ಏಕೆ ಮುನ್ನೆಲೆಗೆ ಬಂತು? ನನಗೆ ಪರಿಚಯ ಇರುವ ನಗರ ಪಾಲಿಕೆಯ ಹಿರಿಯ ಅಧಿಕಾರಿಯನ್ನು ಈ ಬಗ್ಗೆ ವಿಚಾರಿಸಿದಾಗ ಸಾರ್ವಜನಿಕರು ತಮ್ಮ ಆಸ್ತಿಗೆ ಯಾವಾಗ ಬೇಕಾದರೂ ಇ– ಖಾತೆ ಮಾಡಿಸಿಕೊಳ್ಳಬಹುದು. ಅದಕ್ಕೆ ಯಾವುದೇ ಕೊನೆಯ ದಿನಾಂಕ ಎಂಬುದಿಲ್ಲ. ಆದರೆ ಆಸ್ತಿಯನ್ನು ಮಾರಾಟ ಮಾಡುವವರು ಮಾತ್ರ ಕಡ್ಡಾಯವಾಗಿ ಇ– ಖಾತೆ ಪಡೆದರೆ ಸಾಕು ಎನ್ನುತ್ತಾರೆ. ಈ ಮೊದಲೇ ನಿಮ್ಮ ಆಸ್ತಿಗಳಿಗೆ ಖಾತೆ ಇದ್ದರೆ ಅದೇ ಸಾಕು ಎನ್ನುತ್ತಾರೆ. ಇ–ಖಾತೆ ಎನ್ನುವುದು ಕಂಪ್ಯೂಟರ್‌ನಲ್ಲಿ ದಾಖಲೆ ಮಾಡಲಾಗುವ ಒಂದು ರೀತಿಯ ದಾಖಲೆಯಷ್ಟೇ ಎನ್ನುತ್ತಾರೆ. ಇದಕ್ಕಾಗಿ ಸಾರ್ವಜನಿಕರು ತಲೆ ಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ ಎನ್ನುತ್ತಾರೆ. ಆದರೂ ಈ ಬಗ್ಗೆ ನಗರ ಪಾಲಿಕೆಯ ಅಧಿಕಾರಿಗಳು ಸ್ಪಷ್ಟನೆ ನೀಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಇದು ನಿಮಗೆ ಬೇಕಿತ್ತಾ?

ಮಾನ್ಯರೆ,

ಕರ್ನಾಟಕ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಅರಮನೆ ಮೈದಾನದಲ್ಲಿ ಇತ್ತೀಚೆಗೆ ನಡೆದ ಯೂತ್ ಕಾಂಗ್ರೆಸ್ ಸಮಾವೇಶದಲ್ಲಿ ಉದ್ವೇಗಕ್ಕೆ ಒಳಗಾಗಿ ಮಂಡ್ಯ ಜನರ ಛತ್ರಿ ಆಟ ನನಗೆ ಗೊತ್ತಿಲ್ಲವೇ? ಎಂದು ಹೇಳಿರುವುದು ಮಂಡ್ಯ ಜಿಲ್ಲೆಯ ಜನರ ಆಕ್ರೋಶಕ್ಕೆ ಕಾರಣವಾಗಿದೆ ಮತ್ತು ಜಿಲ್ಲೆಯ ಪ್ರತಿಯೊಬ್ಬರಿಗೂ ಬೇಸರವಾಗಿರುವುದಂತು ನಿಶ್ಚಿತ. ಇನ್ನೂ ಕಾಲ ಮಿಂಚಿಲ್ಲ ಜನರ ಭಾವನೆಗಳಿಗೆ ವಿರುದ್ಧವಾದ ಹೇಳಿಕೆಗಳನ್ನು ಆಕಸ್ಮಿಕವಾಗಿ ನೀಡಿದಾಗ ಕ್ಷಮೆ ಕೇಳುವುದರಲ್ಲಿ ತಪ್ಪೇನಿದೆ? ಕ್ಷಮೆ ಕೇಳಿ ವಿವಾದವನ್ನು ಅಂತ್ಯಗೊಳಿಸುವುದು ಸೂಕ್ತ. ಅಮೆರಿಕ ದೇಶದ ಮಾಜಿ ಅಧ್ಯಕ್ಷರಾದ ಫ್ರಾಂಕ್ಲಿನ್ ರೂಸ್ವೆಲ್ಟ್ ಅವರು ಹೇಳುತ್ತಿದ್ದ ಮಾತುಗಳನ್ನು, ನಮ್ಮ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾದ ಎಸ್.ಎಂ.ಕೃಷ್ಣ ಅವರು ಒಂದು ಸಂದರ್ಶನದಲ್ಲಿ ನಾಯಕನಾದವನ ಮಾತು ಮೃದುವಾಗಿರಬೇಕು. ಹಾಗೆ ಕಂಕುಳಲ್ಲಿ ದೊಣ್ಣೆ ಇರಬೇಕು, ಎದುರಾಳಿಯ ಮಾತು ಎಲ್ಲೇ ಮೀರಿದರೆ ಕಂಕುಳಲ್ಲಿ ಇರುವ ದೊಣ್ಣೆಯನ್ನು ಉಪಯೋಗಿಸಬೇಕು ಎಂದು ಹೇಳಿದ್ದರು. ಅದೇ ರೀತಿ ಅವರು ನಡೆದುಕೊಂಡರು. ಮುಂದಿನ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಬೇಕು ಎಂಬ ಮಹದಾಸೆ ಹೊಂದಿರುವ ಶಿವಕುಮಾರ್ ಅವರು ಇನ್ನೂ ಮುಂದಾದರೂ ಯಾವುದೇ ರೀತಿಯ ಜನರ ಭಾವನೆಗಳಿಗೆ ನೋವಾಗುವ ರೀತಿ ಹೇಳಿಕೆಗಳನ್ನು ನೀಡದೇ ಇರುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಧರ್ಮಾಧಾರಿತ ಮೀಸಲಾತಿ ತರವಲ್ಲ

ಮಾನ್ಯರೆ,

ಸಿದ್ದರಾಮಯ್ಯನವರ ನೇತೃತ್ವದ ಕರ್ನಾಟಕ ಸರ್ಕಾರವು ಧರ್ಮಾಧಾರಿತ ಮೀಸಲಾತಿಯನ್ನು ಸರ್ಕಾರದ ಗುತ್ತಿಗೆ ಕಾಮಗಾರಿಗಳಲ್ಲಿ ಶೇ.4 ರಷ್ಟು ಮೀಸಲಾತಿಯನ್ನು ತಂದು ಅದರ ಬಗ್ಗೆ ವಿಧೇಯಕವನ್ನು ಮಂಡಿಸಿರುವ ನಿರ್ಧಾರವು ಅಸಂವಿಧಾನಿಕವಾಗಿದೆ ಎಂಬ ಅನಿಸಿಕೆಗಳು ಎಲ್ಲೆಡೆ ವ್ಯಕ್ತವಾಗುತ್ತಿರುವುದು ಸರಿಯಷ್ಟೆ. ಅದು ನಿಜವೂ ಹೌದು. ಆ ಮೀಸಲಾತಿಯ ಪಟ್ಟಿಯಲ್ಲಿ ಮುಸ್ಲೀಮರಷ್ಟೇ ಅಲ್ಲ ಜೈನರೂ, ಸಿಖ್‌ರೂ ಸೇರಿ ಇತರ ಜನಾಂಗದವರೂ ಇದ್ದಾರೆ ಎಂದು ಇಡೀ ಪ್ರಕರಣವನ್ನು ತಿಪ್ಪೆ ಸಾರಿಸಲಾಗುತ್ತಿದೆ.

ಕೇವಲ ಮುಸ್ಲಿಂ ಜನಾಂಗದವರಲ್ಲಿ ಮಾತ್ರ ಬಡವರಿದ್ದಾರೆಯೇ? ಒಂದು ವೇಳೆ ಹಾಗೇನಾದರೂ ಇದ್ದರೆ ಅದಕ್ಕೆ ಕಾರಣ ಏನು ಎಂದು ಸರ್ಕಾರ ಪರಿಶೀಲಿಸಿ ಅದರ ಸಂಬಂಧ ಕ್ರಮ ಜರುಗಿಸಲಿ.

ಇನ್ನೂ ಹೆಚ್ಚಿನ ಚೋದ್ಯ ವಿಷಯವೆಂದರೆ ಧರ್ಮಾಧಾರಿತ ಮೀಸಲಾತಿಗೆ ನಮ್ಮ ಸಂವಿಧಾನದಲ್ಲಿ ಅವಕಾಶ ಇಲ್ಲ ಎಂಬುದು! ಕೇವಲ ಆ ಜನಾಂಗದವರ ಓಲೈಕೆಗಾಗಿ ಹಾಗೂ ಅವರ ಮತಗಳ ಮೇಲೆ ಕಣ್ಣಿಟ್ಟು ಚುನಾವಣೆಗಳಲ್ಲಿ ಗೆಲ್ಲಲು ಇಂತಹ ಹೇಯ ಕೃತ್ಯ ಮಾಡುತ್ತಿರುವ ಕಾಂಗ್ರೆಸ್ ಪಕ್ಷವು ಏನನ್ನು ಸಾಧಿಸಲು ಹೊರಟಿದೆ ಎಂದು ಅರ್ಥವಾಗುತ್ತಿಲ್ಲ. ನಮ್ಮ ಸಂವಿಧಾನದ ಪ್ರಕಾರ ಕೇವಲ ಹಿಂದೂಗಳಿಗೆ ಮಾತ್ರ ಮೀಸಲಾತಿಗೆ ಅವಕಾಶವಿದೆ ಎಂದು ಆ ಪಕ್ಷದ ಪ್ರಭೃತಿಗಳಿಗೆ ತಿಳಿದಿಲ್ಲವೇ? ಅಕಸ್ಮಾತ್ ಈ ಕರಡು ಕಾನೂನು ವಿಧಾನಸೌಧದಲ್ಲಿ ಮಂಜೂರಾತಿ ದೊರಕಿಸಿಕೊಂಡರೆ ಅದು ಸಂವಿಧಾನ ವಿರೋಧಿ ನಡೆಯಾಗುತ್ತದೆ ಎಂಬುದು ತಿಳಿದಿರಲಿ. **–ಬೇಲೂರು ದ.ಶಂ. ಪ್ರಕಾಶ್, ಮೈಸೂರು.**

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಅಗಸ್ತ್ಯ ದರ್ಶನ


ವೇದ ಕಾಲದಲ್ಲಿದ್ದ ಮಹರ್ಷಿಗಳಲ್ಲಿ ಅಗಸ್ತ್ಯರು ಪ್ರಮುಖರು. ಋಗ್ವೇದದ ಒಂದನೆಯ ಮಂಡಲದ ಹಲವು ಮಂತ್ರಗಳ ದ್ರಷ್ಟಾರರು ಅವರೇ. ಅನಂತರ ವಾಲ್ಮೀಕಿ ರಾಮಾಯಣದಲ್ಲಿ ಅಗಸ್ತ್ಯರ ಆಶ್ರಮದ ವರ್ಣನೆಯನ್ನೂ ಅವರ ಮಹಿಮೆಯನ್ನು ಸಾರುವ ಕಥೆಗಳನ್ನೂ ನೋಡಬಹುದು. ಅಗಸ್ತ್ಯರ ಪತ್ನಿ ಲೋಪಾ ಮುದ್ರೆಯೂ ಅತ್ಯಂತ ಗೌರವಕ್ಕೆ ಪಾತ್ರಳಾಗಿದ್ದ ಮಹಿಳೆ. ಭಾರತ ದೇಶದ ನಾನಾ ಸ್ಥಳಗಳಲ್ಲಿ ಅಗಸ್ತ್ಯರಿಗೆ ಸಂಬಂಧಿಸಿದ ಐತಿಹ್ಯಗಳಿವೆ. ಅಗಸ್ತ್ಯರಿಂದ ಸ್ಥಾಪಿತವಾದ ಅಥವಾ ನಿರ್ಮಿತವಾದ ದೇವಾಲಯಗಳು ಭಾರತದ ಅನೇಕ ರಾಜ್ಯಗಳಲ್ಲಿವೆ. ಭಾರತದ ಆಚೆ ಇರುವ ದ್ವೀಪ ಸಮೂಹ ರಾಷ್ಟ್ರಗಳಾದ ಮಲೇಷಿಯಾ, ಇಂಡೋನೇಷಿಯಾ ಮುಂತಾದ ದೇಶಗಳಲ್ಲೂ ಅಗಸ್ತ್ಯರ ಪ್ರಭಾವದ ಕುರುಹುಗಳಿವೆ. ತಮಿಳು ಭಾಷೆಯ ವ್ಯಾಕರಣದ ಮೇಲೆ ಮತ್ತು ಸಾಹಿತ್ಯದಲ್ಲಿ ಅಗಸ್ತ್ಯ ಮುನಿಗಳ ಉಲ್ಲೇಖಗಳಿವೆ. ಹೀಗೆ ಪ್ರಾಚೀನ ಭಾರತದಲ್ಲಿ ಅತ್ಯಂತ ಮಾನ್ಯತೆಯನ್ನು ಪಡೆದಿದ್ದ ಅಗಸ್ತ್ಯರ ಹೆಸರನ್ನು ದಕ್ಷಿಣಾಕಾಶದಲ್ಲಿ ಹೊಳೆಯುವ ನಕ್ಷತ್ರಕ್ಕೆ ಕೊಡಲಾಗಿದೆ. ಇಂತಹ ಮಹಾನುಭಾವರ ಸಾಂಸ್ಕೃತಿಕ ಮಹತ್ತ್ವವನ್ನು ಜಗತ್ತಿಗೆ ತಿಳಿಸಲು ಡಾ. ಸುಧಾ ಎಂ.ಎಸ್. ಮತ್ತು ಓ. ಶ್ಯಾಮ ಭಟ್ ಅವರು ರಚಿಸಿರುವ ಸಂಶೋಧನಾ ಕೃತಿ ಅಗಸ್ತ್ಯ ದರ್ಶನ. ಈ ಕೃತಿಯು ಇಂಗ್ಲೀಷಿನಲ್ಲಿ Agastya : The Unifier ಎಂಬ ಶೀರ್ಷಿಕೆಯಲ್ಲಿ ಇವರಿಬ್ಬರಿಂದ ರಚಿತವಾಗಿರುವುದೊಂದು ವಿಶೇಷ. 'ಅಗಸ್ತ್ಯ ದರ್ಶನ'ದಲ್ಲಿ ಮೂವತ್ತಾರು ಅಧ್ಯಾಯಗಳಿದ್ದು ಅಗಸ್ತ್ಯ ಮುನಿಗಳ ವ್ಯಕ್ತಿತ್ವದ ನಾನಾ ಮುಖಗಳನ್ನು ಗ್ರಂಥಕಾರರು ಪರಿಚಯಿಸಿದ್ದಾರೆ.

ಮೊದಲನೆಯದಾಗಿ ಅಗಸ್ತ್ಯ ಎಂಬ ಶಬ್ದದ ಅರ್ಥ. ಅಗ ಎಂಬ ಸಂಸ್ಕೃತ ಶಬ್ದ ಅರ್ಥಬೆಟ್ಟ, ಬೆಟ್ಟವನ್ನು ತಡೆದವನು ಅಗಸ್ತ್ಯ. ವಿಂಧ್ಯ ಪರ್ವತವು ಹಿಮಾಲಯದೊಡನೆ ಸ್ಪರ್ಧೆ ಹೂಡುವ ಹಾಗೆ ಬೆಳೆಯುತ್ತಿತ್ತು. ಅದು ಅಪಾರವಾಗಿ ಬೆಳೆದರೆ ತಮ್ಮ ಸಂಚಾರಕ್ಕೆ ಅಡ್ಡಿಯಾಗುವುದೆಂದು ದೇವತೆಗಳು ಅದರ ಬೆಳವಣಿಗೆಯನ್ನು ನಿಲ್ಲಿಸುವಂತೆ ಅಗಸ್ತ್ಯ ಮಹರ್ಷಿಗಳನ್ನು ಕೇಳಿಕೊಂಡರಂತೆ. ಅಗಸ್ತ್ಯರು ವಿಂಧ್ಯದ ಬಳಿಗೆ ಬಂದಾಗ ಅವರಿಗೆ ಗೌರವವನ್ನು ಸೂಚಿಸಲು ಅದು ಬಗ್ಗಿತು. ಅವರು ಹೇಳಿದರು. 'ಹೇ ವಿಂಧ್ಯ, ನಾನು ನಿನ್ನನ್ನು ದಾಟಿ ದಕ್ಷಿಣಕ್ಕೆ ಹೋಗುತ್ತಿದ್ದೇನೆ. ನಾನು ಹಿಂದಕ್ಕೆ ಬರುವವರೆಗೂ ಬೆಳೆಯಬೇಡ'. ವಿಂಧ್ಯ ಪರ್ವತವು ಒಪ್ಪಿಕೊಂಡಿತು. ಅವರು ದಕ್ಷಿಣಕ್ಕೆ ಬಂದರು. ಮತ್ತೆ ಉತ್ತರಕ್ಕೆ ಹಿಂದಿರುಗಲೇ ಇಲ್ಲ. ವಿಂಧ್ಯ ಪರ್ವತದ ಬೆಳವಣಿಗೆ ನಿಂತಿತು. ಮುನಿಗಳ ಅಗಸ್ತ್ಯ ಎಂಬ ಹೆಸರು ಸಾರ್ಥಕವಾಯಿತು.

ಗ್ರಂಥಕಾರರಾದ ಡಾ. ಸುಧಾ ಮತ್ತು ಓ. ಶ್ಯಾಮ ಭಟ್ ಅವರು ನೂರಾರು ಪುಸ್ತಕಗಳನ್ನು ಓದಿ ಹಲವಾರು ಸ್ಥಳಗಳನ್ನು ಸಂದರ್ಶಿಸಿ ವಿಚಾರ ವಿಮರ್ಶೆಗಳನ್ನು ಮಾಡಿ ಈ ಗ್ರಂಥವನ್ನು ರಚಿಸಿದ್ದಾರೆ. ಅಗಸ್ತ್ಯ ಕೃತವಾದ ನಾಡೀಶಾಸ್ತ್ರ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿ ವ್ಯಕ್ತಿಯ ಭೂತ–ಭವಿಷ್ಯಗಳನ್ನು ತಿಳಿಸುವುದಂತೆ. ಅಗಸ್ತ್ಯರು ಸಮರ ಕಲೆಯಲ್ಲೂ ಪ್ರವೀಣರಾಗಿದ್ದು ಕಲರಿಪಟ್ಟು ಎಂಬ ವಿದ್ಯೆ ಅವರಿಂದಲೇ ಕಲಿಸಲ್ಪಟ್ಟಿತು ಎಂದು ಪ್ರಸ್ತುತ ಗ್ರಂಥದಲ್ಲಿ ಹೇಳಲಾಗಿದೆ. ಅಗಸ್ತ್ಯ ಸಂಹಿತಾ ಎಂಬ ಪ್ರಾಚೀನ ಗ್ರಂಥದಲ್ಲಿ ನೀರನ್ನು ಆಮ್ಲಜನಕ (ಆಕ್ಸಿಜನ್) ಮತ್ತು ಜಲಜನಕ (ಹೈಡ್ರೋಜನ್) ಎಂದು ವಿಭಜಿಸಬಹುದು ಎಂದು ಹೇಳಲಾಗಿದೆ ಎಂದು ಗ್ರಂಥಕಾರರು ಹೇಳಿದ್ದಾರೆ. ಇದು ಈಚಿನ ವಿಜ್ಞಾನಿಗಳ ಅನ್ವೇಷಣೆಯೆಂದು ಸಾಮಾನ್ಯ ನಂಬಿಕೆ.

ಅನೇನ ಜಲಭಂಗೋಸ್ತಿ ಪ್ರಾಣೋದಾನೇಷು ವಾಯುಷು। ಎಂಬ ವಾಕ್ಯದಲ್ಲಿ ಪ್ರಾಣ ಎಂದರೆ ಆಕ್ಸಿಜನ್, ಉದಾನ ಎಂದರೆ ಹೈಡ್ರೋಜನ್ ಎಂದು ಗ್ರಂಥಕಾರರ ವಿವರಣೆ. ಸಾವಿರಾರು ವರ್ಷಗಳ ಹಿಂದೆ ವಿಜ್ಞಾನ ಅಷ್ಟು ಪ್ರಗತಿಯನ್ನು ಭಾರತದಲ್ಲಿ ಹೊಂದಿತ್ತೆ? ಇದನ್ನು ಈಗ ವಿಜ್ಞಾನಿಗಳು ಒಪ್ಪುವರೆ? ಎಂಬ ಪ್ರಶ್ನೆ ಹುಟ್ಟುತ್ತದೆ. ಅಮರಕೋಶದಲ್ಲಿ ಅಗಸ್ತ್ಯರನ್ನು ಕುಂಭಸಂಭವ, ಮೈತ್ರಾವರುಣಿ ಎಂದು ಕರೆದಿದ್ದಾರೆ. **(ಅಗಸ್ತ್ಯಃ ಕುಂಭಸಂಭವಃ। ಮೈತ್ರಾವರುಣಿಃ).** ಕುಂಭಸಂಭವ ಎಂಬ ಶಬ್ದವಿರುವುದರಿಂದ ಮತ್ತು ಈ ಬಗೆಗೆ ಕಥೆಯೂ ರಾಮಾಯಣಾದಿ ಗ್ರಂಥಗಳಲ್ಲಿರುವುದರಿಂದ "ಅಗಸ್ತ್ಯರು ಮತ್ತು ವಸಿಷ್ಠರು ದ್ರವಾಂಶವಿರುವ ಮಡಕೆಯಿಂದ ಜನಿಸಿದ ಮೊದಲ ಅವಳಿ ಟೆಸ್ಟ್ ಟ್ಯೂಬ್ ಮಕ್ಕಳು" ಎಂದೂ ಗ್ರಂಥಕಾರರು ಹೇಳಿದ್ದಾರೆ.

(ಪು. 50). ಇಂತಹ ಹಲವು ಕಥೆಗಳು ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಇರುವುದು ಸತ್ಯ. ಆದರೆ ಮೂರು ನಾಲ್ಕು ಸಾವಿರ ವರ್ಷಗಳ ಹಿಂದೆ ವೈದ್ಯ ವಿಜ್ಞಾನದಲ್ಲಿ ಅಷ್ಟು ಪ್ರಗತಿಯಾಗಿತ್ತೆಂದು ನಂಬಲು ಸಾಧ್ಯವೆ? ವಿದ್ವಾಂಸರೂ ವಿಜ್ಞಾನಿಗಳೂ ಈ ಬಗೆಗೆ ಬೆಳಕನ್ನು ಚೆಲ್ಲಬೇಕು.



ಅಗಸ್ತ್ಯರಿಗೆ ಸಂಬಂಧಪಟ್ಟ ದೇವಾಲಯಗಳು ಕಾವೇರಿ ನದಿಯ ತೀರದಲ್ಲಿ ನೂರಾರು ಇವೆ ಎಂಬುದನ್ನು ಈ ಗ್ರಂಥದಲ್ಲಿ ಸಚಿತ್ರವಾಗಿ ಪ್ರತಿಪಾದಿಸಲಾಗಿದೆ. ಹೊರನಾಡಿನ ಅನ್ನಪೂರ್ಣೇಶ್ವರೀ ದೇವಾಲಯವು ಅಗಸ್ತ್ಯ ಮುನಿಗಳಿಂದ 8ನೇ ಶತಮಾನದಲ್ಲಿ ಸಂಸ್ಥಾಪಿಸಲ್ಪಟ್ಟಿದೆ ಎಂದು ಗ್ರಂಥಕಾರರು ಹೇಳಿದ್ದಾರೆ. (ಪು. 83) ಋಗ್ವೇದದ ಕಾಲದಲ್ಲಿದ್ದ ಅಗಸ್ತ್ಯರು, ರಾಮಾಯಣ ಕಾಲದಲ್ಲಿ ಶ್ರೀರಾಮನಿಗೆ ಆದಿತ್ಯ ಹೃದಯವನ್ನು ಉಪದೇಶಿಸಿದ ಅಗಸ್ತ್ಯರು, ಕ್ರಿ.ಶ. ಎಂಟನೆಯ ಶತಮಾನದಲ್ಲಿ ಹೊರನಾಡಿನಲ್ಲಿ ದೇವಾಲಯವನ್ನು ಕಟ್ಟಿಸಿದ ಅಗಸ್ತ್ಯರು ಒಬ್ಬರೇ ಆಗಿರುವುದು ಸಾಧ್ಯವೆ?

ಮನುಷ್ಯರ ಆಯುಸ್ಸು ನೂರು ವರ್ಷ. ವೇದಗಳಲ್ಲೂ 'ಶತಂ ಜೀವ ಶರದೋ ವರ್ಧಮಾನಃ' ಎಂಬ ಆಶೀರ್ವಾದವನ್ನೇ ಕೇಳುತ್ತೇವೆ. ಶ್ರೀಮದ್ ರಾಮಾನುಜಾಚಾರ್ಯರು, ಶ್ರೀ ವಾದಿರಾಜ ಸ್ವಾಮಿಗಳು ನೂರಿಪ್ಪತ್ತು ವರ್ಷ ಬದುಕಿದ್ದರೆಂದು ಕೇಳಿದ್ದೇವೆ. ಅಗಸ್ತ್ಯರು ಸಾವಿರಾರು ವರ್ಷ ಬದುಕಿದ್ದರು ಎನ್ನುವುದಾದರೆ ಅವರು ಅತಿಮಾನವರು ಎಂದು ಒಪ್ಪಿಕೊಳ್ಳಬೇಕು. ರುದ್ರಪ್ರಯಾಗ, ಉತ್ತರಾಖಂಡ, ವಾರಣಾಸಿ, ರಾಮ್‌ಟೇಕ್ ಮುಂತಾದ ಸ್ಥಳಗಳಲ್ಲೂ ಅಗಸ್ತ್ಯರ ದೇವಾಲಯಗಳು ಅಥವಾ ಆಶ್ರಮಗಳಿವೆ ಎಂಬ ಮಾಹಿತಿಯನ್ನೂ ಲೇಖಕರು ಕೊಟ್ಟಿದ್ದಾರೆ.

ತಮಿಳು ಭಾಷೆಗೆ ಅಗಸ್ತ್ಯರ ಕೊಡುಗೆ

ತಮಿಳು ಸಂಪ್ರದಾಯದಲ್ಲಿ ಅಗಸ್ತ್ಯರನ್ನು ತಮಿಳು ಭಾಷೆಯ ಸಾಹಿತ್ಯದ ಪಿತಾಮಹರೆಂದೂ, ಮೊದಲ ತಮಿಳು ವ್ಯಾಕರಣದ ಸಂಕಲನಕಾರ ಎಂದೂ ಪರಿಗಣಿಸಲಾಗಿದೆ. 4400 ವರ್ಷಗಳ ಕಾಲ ನಡೆದ ಮೊದಲನೇ ಸಂಗಮಂ ಅವಧಿಯನ್ನು ಅಗಸ್ತ್ಯರು ಪ್ರವರ್ತಿಸಿದರು. ಎರಡನೇ ಸಂಗಮಂ ಅವಧಿಯಲ್ಲಿಯೂ ಅವರ ಕಾಲ 3700 ವರ್ಷಗಳು ಎನ್ನಲಾಗಿದೆ. ಸಂಸ್ಕೃತ ಮತ್ತು ತಮಿಳು ಭಾಷೆಗಳೆರಡನ್ನು ಪ್ರೀತಿಸಿ, ಲೋಕಕ್ಕಾಗಿ ಪರಿಪೂರ್ಣಗೊಳಿಸಿ, ಏಕೀಕರಣಗೊಳಿಸಿ, ಜ್ಞಾನವನ್ನು ಸಾಮರಸ್ಯ ಕಲಿಕೆಯ ಸಂಕೇತವನ್ನೂ ಜಗತ್ತಿಗೆ ಸಾರಿದ ಮೊದಲ ಗುರು ಎಂದು ವರ್ಣಿಸಿದ್ದಾರೆ ಎಂಬುದು ಲೇಖಕರ ಹೇಳಿಕೆ. ವೈಜ್ಞಾನಿಕವಾಗಿ ನೋಡಿದಾಗ ಈ ದೀರ್ಘ ಕಾಲಗಳನ್ನು ಹೇಳಿರುವುದು ಅತಿಶಯೋಕ್ತಿ ಎನಿಸುತ್ತದೆ. ತೋಳ್ಕಾಪ್ಪಿಯಂ ಎಂಬ ತಮಿಳು ವ್ಯಾಕರಣವನ್ನು ರಚಿಸಿದ ತೊಳ್‌ಕಾಪ್ಪಿಯರ್ ಅಗಸ್ತ್ಯರ ಶಿಷ್ಯ ಎಂಬ ಮಾತನ್ನು ನಂಬಬಹುದು.

ಅಗಸ್ತ್ಯರು ಪರಿಸರ ವಿಜ್ಞಾನಿಯಾಗಿದ್ದರು. ನರ್ಮದಾ ನದಿಯ ಪ್ರವಾಹಕ್ಕೆ ಕಾರಣವಾಗದಂತೆ ಅದರ ದಿಕ್ಕನ್ನು ಬದಲಾಯಿಸಿ ಸರಿಯಾದ ಆಯಾಮದಲ್ಲಿ ಹರಿಯುವಂತೆ ಮಾಡಿದರು ಎಂಬ ಮಾಹಿತಿಯನ್ನು ಲೇಖಕರು ಒದಗಿಸಿದ್ದಾರೆ. (ಪು. 141). ಇದು ಸ್ಕಾಂದ ಪುರಾಣದಲ್ಲಿ ಉಕ್ತವಾಗಿರುವ ಸಂಗತಿ. ಅಗಸ್ತ್ಯರ ವ್ಯಕ್ತಿತ್ವದ ಇನ್ನೊಂದು ಮುಖ. ಪ್ರಸ್ತುತ ಪುಸ್ತಕದಲ್ಲಿ ಗಂಗಾ, ಸರಸ್ವತಿ, ಪ್ರವರಾ, ಗೋದಾವರೀ, ವೈಗೈ (ವೇಗವತೀ), ಸ್ವರ್ಣಮುಖೀ, ತಾಮ್ರಪರ್ಣೀ, ಶಾಲ್ಮಲಾ, ಎಂಬ ನದಿಗಳನ್ನು ವರ್ಣಿಸಿ ಅವುಗಳೊಡನೆ ಅಗಸ್ತ್ಯರ ಸಂಬಂಧವನ್ನು ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ. ಆರ್ಯ–ದ್ರಾವಿಡ ಎಂಬ ಪೊಳ್ಳು ಚಿಂತನೆಗಳು ಎಂಬ ಅಧ್ಯಾಯದಲ್ಲಿ ಸಿಂಧೂ ಕಣಿವೆಯ ಲಿಪಿಯನ್ನು ಕುರಿತ ಚಿಂತನೆಗಳನ್ನು ಲೇಖಕರು ಬೆಳಕಿಗೆ ತಂದಿದ್ದಾರೆ.

ಆದಿತ್ಯ ಹೃದಯ ವಾಲ್ಮೀಕಿ ರಾಮಾಯಣದ ಯುದ್ಧಕಾಂಡದಲ್ಲಿ ಆದಿತ್ಯ ಹೃದಯವೆಂಬ ಸರ್ಗವಿದೆ. ಯುದ್ಧದಲ್ಲಿ ಬಳಲಿದ್ದ ರಾಮನು ರಾವಣನೊಡನೆ ಹೇಗೆ ಯುದ್ಧವನ್ನು ಮಾಡುವೆನೆಂದು ಚಿಂತಾಕ್ರಾಂತನಾಗಿದ್ದಾಗ ಸ್ವಯಂ ಅಲ್ಲಿಗೆ ಬಂದ ಅಗಸ್ತ್ಯ ಮಹರ್ಷಿಗಳು ರಾಮನಿಗೆ ಆದಿತ್ಯ ಹೃದಯ ಸ್ತೋತ್ರವನ್ನು ಉಪದೇಶಿಸಿ, ಸೂರ್ಯನಿಂದ ಶಕ್ತಿಯನ್ನು ಪಡೆದುಕೊಳ್ಳುವ ಮಾರ್ಗವನ್ನು ತಿಳಿಸುತ್ತಾರೆ. ಹಾಗೆ ಮಾಡಿ ರಾಮನು ವಿಜಯವನ್ನು ಪಡೆದನೆನ್ನುವುದು ಇತಿಹಾಸ. ಅಗಸ್ತ್ಯರು ಉಪದೇಶಿಸಿದ ಆದಿತ್ಯ ಹೃದಯವನ್ನು ಇಂದೂ ಅನೇಕರು ಪಾರಾಯಣ ಮಾಡುತ್ತಾರೆ.

ಮಲಯಾಳಂ ಭಾಷೆಯಲ್ಲಿರುವ ಅಗಸ್ತ್ಯ ಸಿದ್ಧಿ, ವೈದ್ಯರತ್ನಹಾರ ಇತ್ಯಾದಿ ಗ್ರಂಥಗಳನ್ನು ರಚಿಸಿದವರೂ ಅಗಸ್ತ್ಯ ಮುನಿಗಳೇ ಎಂಬ ಮಾಹಿತಿಯೂ ಪ್ರಸ್ತುತ ಪುಸ್ತಕದಲ್ಲಿದೆ. ಭಾರತ ದೇಶದ ಸಂಸ್ಕೃತಿಗೆ ಅಗಸ್ತ್ಯರ ಕೊಡುಗೆ ಹೀಗೆ ಅಪಾರವೂ ಅನಂತವೂ ಅಪ್ರತಿಮವೂ ಆಗಿದೆ ಎಂಬುದನ್ನು ಲೇಖಕರು ತಿಳಿಸಿದ್ದಾರೆ.

ರಾಮನ ಜನ್ಮಭೂಮಿಯು ಎಲ್ಲಿದೆ ಎಂಬುದನ್ನು ಗುರುತಿಸಲು ಸ್ಕಾಂದ ಪುರಾಣದ ಶ್ಲೋಕಗಳು ಸಹಾಯಕವಾಗುತ್ತವೆ. ವಸಿಷ್ಠ–ಅಗಸ್ತ್ಯರ ಸಂವಾದದಲ್ಲಿ ಈ ಶ್ಲೋಕಗಳಿವೆ ಎಂದು ಮಾಹಿತಿಯನ್ನು ಕೊಟ್ಟಿರುವುದಲ್ಲದೆ ಆ ಶ್ಲೋಕಗಳನ್ನು ಕನ್ನಡ ಭಾವಾರ್ಥ ಸಹಿತವಾಗಿ ಲೇಖಕರು ಕೊಟ್ಟಿದ್ದಾರೆ. (ಪು. 175–176). ನ್ಯೂಜಿಲ್ಯಾಂಡ್, ಮಾವೋರಿ, ಚೀನಾ ದೇಶಗಳಲ್ಲೂ ಅಗಸ್ತ್ಯರ ಪ್ರಭಾವ ಕಂಡು ಬಂದಿದೆ ಎಂದು ಈ ಪುಸ್ತಕದ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಲೇಖಕರು ಹೇಳಿದ್ದಾರೆ.

ಈ ರೀತಿಯಲ್ಲಿ ಅಗಸ್ತ್ಯ ಮಹರ್ಷಿಯ ಜೀವನದ ನಾನಾ ಮುಖಗಳನ್ನು ಚಿತ್ರಿಸುವ ಅಗಸ್ತ್ಯ ದರ್ಶನ ಜಿಜ್ಞಾಸುಗಳ ಕುತೂಹಲವನ್ನು ಕೆರಳಿಸುತ್ತದೆ. ಇಲ್ಲಿ ಹೇಳಲಾಗಿರುವ ಕೆಲವು ವಿಷಯಗಳನ್ನು ನಾವು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಆದರೆ ತಿಳಿದುಕೊಳ್ಳಬೇಕಾದ ವಿಚಾರಗಳು ಅನೇಕವು ಇಲ್ಲಿವೆ ಎಂಬುದರಲ್ಲಿ ಸಂಶಯವಿಲ್ಲ. ಉತ್ತರ–ದಕ್ಷಿಣ ಭಾರತಗಳನ್ನು ಒಟ್ಟಾಗಿ ಕೂಡಿಸಿದ ಕೀರ್ತಿ ಅಗಸ್ತ್ಯರದು. ವಿಷ್ಣುವಿನ ಅವತಾರವೆನಿಸಿದ ಶ್ರೀರಾಮನಿಗೂ ಧೈರ್ಯವನ್ನು ತುಂಬಿ ಮಾರ್ಗದರ್ಶನವನ್ನು ಮಾಡಿದ ಮಹಾಮುನಿ ಅಗಸ್ತ್ಯರಿಗೂ ಅವರ ಬಗೆಗೆ ಸಕಲಾಂಶಗಳನ್ನು ತಿಳಿಸುವ ಪ್ರಯತ್ನವನ್ನು ಮಾಡಿರುವ ಡಾ.ಸುಧಾ ಎಂ.ಎಸ್. ಮತ್ತು ಓ. ಶ್ಯಾಮ ಭಟ್ ಅವರಿಗೂ ನಮ್ಮ ನಮನಗಳು.

ಮೈಸೂರಿನ ರಾಜೀವ್‌ನಗರದಲ್ಲಿ 'ನಮ್ಮ ಕ್ಲಿನಿಕ್' ಉದ್ಘಾಟನೆ



ಮೈಸೂರಿನ ರಾಜೀವ್‌ನಗರ ಎರಡನೇ ಹಂತದಲ್ಲಿ 'ನಮ್ಮ ಕ್ಲಿನಿಕ್' ಉದ್ಘಾಟನೆಯನ್ನು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಮಂಗಳವಾರ ನೆರವೇರಿಸಿದರು. ಈ ವೇಳೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಡಾ.ಸಿರಾಜ್ ಅಹಮ್ಮದ್, ಡಾ.ನಿಶಾಂತ್, ಡಾ.ಮಹಮ್ಮದ್ ಸಾಹೇಬ್, ಕೆಡಿಪಿ ಸದಸ್ಯ ಮಹಮ್ಮದ್ ರಾಫೀಕ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಮುನೀಂದ್ರಮ್ಮ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಗಾಜಾ ಮೇಲೆ ಇಸ್ರೇಲ್ ದಾಳಿ: 23 ಮಂದಿ ಸಾವು

ಗಾಜಾ, ಮಾ.25– ಗಾಜಾ ಪಟ್ಟಿಯಲ್ಲಿ ಇಸ್ರೇಲ್ ನಡೆಸಿದ ದಾಳಿಯಿಂದ ಕನಿಷ್ಠ 23 ಜನರು ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ತೀನಿಯನ್ ವೈದ್ಯರು ತಿಳಿಸಿದ್ದಾರೆ.

ದಕ್ಷಿಣ ನಗರವಾದ ಖಾನ್ ಯೂನಿಸ್ ಬಳಿಯ ತಮ್ಮ ಟೆಂಟ್ ಮೇಲೆ ನಡೆದ ದಾಳಿಯಲ್ಲಿ ಮೂವರು ಮಕ್ಕಳು ಮತ್ತು ಅವರ ಪೋಷಕರು ಮೃತಪಟ್ಟಿದ್ದಾರೆ ಎಂದು ನಾಸರ್ ಆಸ್ಪತ್ರೆ ತಿಳಿಸಿದೆ. ಕಳೆದ ವಾರ ಇಸ್ರೇಲ್ ಗಾಜಾ ಮೇಲೆ ಕದನ ವಿರಾಮ ಮುರಿದು 17 ತಿಂಗಳ ಯುದ್ಧವನ್ನು ನಿಲ್ಲಿಸಿ ಭಾರೀ ಬಾಂಬ್ ದಾಳಿಯನ್ನು ಪುನರಾರಂಭಿಸಿದ್ದು, ಸತ್ತವರು ಮತ್ತು ಗಾಯಗೊಂಡವರ ಸಂಖ್ಯೆ ಹೆಚ್ಚಾಗಿದೆ.

ಮಧ್ಯ ಗಾಜಾದಲ್ಲಿ, ಅಲ್–ಅಕ್ಸಾ ಹುತಾತ್ಮರ ಆಸ್ಪತ್ರೆಯಲ್ಲಿ ಮೂರು ಪ್ರತ್ಯೇಕ ದಾಳಿಗಳಲ್ಲಿ ಕೊಲ್ಲಲ್ಪಟ್ಟ ಆರು ಮಂದಿಯ ಶವಗಳಿದ್ದವು. ಅವ್ದಾ ಆಸ್ಪತ್ರೆಯ ಪ್ರಕಾರ, ನಿರ್ಮಿಸಲಾದ ನುಸ್ಸೈರತ್ ನಿರಾಶ್ರಿತರ ಶಿಬಿರದಲ್ಲಿರುವ ಮನೆಯ ಮೇಲೆ ನಡೆದ ದಾಳಿಯಲ್ಲಿ ಇತರ ಮೂವರು ಮೃತಪಟ್ಟಿದ್ದಾರೆ. ಗಾಜಾ ನಗರದಲ್ಲಿ, ವಸತಿ ಕಟ್ಟಡದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಐವರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವಾಲಯದ ತುರ್ತು ಸೇವೆ ತಿಳಿಸಿದೆ. 12 ಜನರು ಗಾಯಗೊಂಡಿದ್ದಾರೆ ಎಂದು ಅದು ತಿಳಿಸಿದೆ.

ಸೇವೆ ಮಾಡುವವರಿಗೆ ಸದಾ ಅಧಿಕಾರವೇ ಇರಬೇಕೆಂದಿಲ್ಲ!

ಮೈಸೂರು ವಿವಿ ವೈದ್ಯಾಧಿಕಾರಿ ಡಾ.ಎಂ.ಎಸ್.ಬಸವರಾಜ್‌ಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಗೀತಾ ಪ್ರಸನ್ನ ಅಭಿಮತ

ಮೈಸೂರು, ಮಾ. 25– ಸೇವೆ ಮಾಡುವವರಿಗೆ ಅಧಿಕಾರವೇ ಮುಖ್ಯವಲ್ಲ. ನಿವೃತ್ತರಾದರೂ ಸಮಾಜಕ್ಕೆ ಕೊಡುಗೆ ನೀಡಬಹುದು ಎಂದು ಜಿಲ್ಲಾ ಪೊಲೀಸ್ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಗೀತಾ ಪ್ರಸನ್ನ ಹೇಳಿದರು.

ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ವತಿಯಿಂದ ಮಾನಸಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಮೈವಿವಿ ವೈದ್ಯಾಧಿಕಾರಿ ಡಾ. ಎಂ.ಎಸ್. ಬಸವರಾಜ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಮಾತನಾಡಿದರು.



ಮೈಸೂರು ವಿವಿ ವೈದ್ಯಾಧಿಕಾರಿ ಡಾ.ಎಂ.ಎಸ್.ಬಸವರಾಜ್–ಗೀತಾ ದಂಪತಿಯನ್ನು ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ವತಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು.

ಡಾ.ಎಂ.ಎಸ್.ಬಸವರಾಜ್ ಅವರು ಇತರ ವೈದ್ಯರಿಗೆ ಮಾದರಿಯಂತಿದ್ದಾರೆ. ನಗುಮುಖದೊಂದಿಗೆ ರೋಗಿಗಳನ್ನು ಪ್ರೀತಿಯಿಂದ ಮಾತನಾಡಿಸುತ್ತಾ ಚಿಕಿತ್ಸೆ ನೀಡುತ್ತಿದ್ದರು. ವೈದ್ಯರು ಈ ರೀತಿಯ ಅರ್ಪಣಾ ಮನೋಭಾವದಿಂದ ಸೇವೆ ಮಾಡಿದರೆ ಸಾಕು ರೋಗ ಗುಣಮುಖವಾದಂತೆ ಎಂದರು.

ಕೋವಿಡ್ ಸಂದರ್ಭದಲ್ಲಿ ನಾವೆಲ್ಲಾ ಅನಿಶ್ಚತತೆ, ಅಭದ್ರತೆಯಿಂದ ಇದ್ದಾಗ ವೈದ್ಯರು ಚಿಕಿತ್ಸೆ ನೀಡಿ ಕಾಪಾಡಿದರು. ಈ ದೃಷ್ಟಿಯಿಂದ ನೋಡಿದರೆ ವೈದ್ಯರನ್ನು ದೇವರು ಎಂದು ಪರಿಗಣಿಸಬೇಕಾಗುತ್ತದೆ ಎಂದು ಹೇಳಿದರು.

ಮೈಸೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಮುಖ್ಯಾಧಿಕಾರಿ ಮಲ್ಲಿಕ್ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ವೈದ್ಯರ ಸೇವೆ ಅವಿಸ್ಮರಣೀಯ. ವೈದ್ಯರು ದೇಹದ ಸ್ವಾಸ್ಥ್ಯವನ್ನು ಕಾಪಾಡುತ್ತಾರೆ. ಪೊಲೀಸ್ ಇಲಾಖೆಯಲ್ಲಿರುವ ನಾವು ಎಲ್ಲರ ಸಹಕಾರದಿಂದ ಸಮಾಜದ ಸ್ವಾಸ್ಥ್ಯ ಕಾಪಾಡುತ್ತೇವೆ ಎಂದರು.

ವೈದ್ಯ ವೃತ್ತಿಗೆ ನಿವೃತ್ತಿ ಎಂಬುದೇ ಇಲ್ಲ. ಜೀವನದ ಕೊನೆಯುಸಿರು ಇರುವವರೆಗೂ ಸೇವೆ ನೀಡಬಹುದು ಎಂದ ಅವರು, ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ವೃತ್ತಿಪರತೆ ಕಡಿಮೆಯಾಗುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ನೀಡಬೇಕು ಎಂದರು.

ಮೈಸೂರು ನಗರಪಾಲಿಕೆಯ ನಿವೃತ್ತ ಆಯುಕ್ತ ಡಾ.ಪಿ.ಬೋರೇಗೌಡ ಮಾತನಾಡಿ, ಡಾ.ಎಂ.ಎಸ್.ಬಸವರಾಜ್ ಅವರದ್ದು ವಿರಳ ವ್ಯಕ್ತಿತ್ವ, ನಾನು ಪಾಲಿಕೆ ಆಯುಕ್ತನಾಗಿದ್ದಾಗ ಲಸಿಕೀಕರಣ ಕಾರ್ಯ ಯಶಸ್ಸಿಗೆ ಡಾ.ಬಸವರಾಜ್ ಅವರ ಸಹಕಾರ ದೊಡ್ಡದು. ಒಂದು ರೀತಿಯಲ್ಲಿ ಅವರು ವಿಶ್ವಕೋಶವಿದ್ದಂತೆ. ಅವರು ಸೇವೆಯಿಂದ ನಿವೃತ್ತರಾದರೂ ಅವರ ಅನುಭವವನ್ನು ಸಾಮಾಜಿಕ ಜಾಲತಾಣಗಳ ಮೂಲಕ ಎಲ್ಲರಿಗೂ ತಲುಪಿಸಲು ಯೋಜನೆಯೊಂದನ್ನು ರೂಪಿಸಿದ್ದೇವೆ ಎಂದರು.

ಮೈವಿವಿ ಲಲಿತಕಲಾ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಅನಿಟ ವಿಮ್ಲ ಬ್ರ್ಯಾಗ್ಸ್, ಮಾನಸಗಂಗೋತ್ರಿ ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶಕ ಪ್ರೊ.ಸಿ.ಗುರುಸಿದ್ದಯ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು.

ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಡಾ.ಎಂ.ಎಸ್. ಬಸವರಾಜ್, ಕಳೆದ 43 ವರ್ಷಗಳಿಂದ ವೈದ್ಯನಾಗಿದ್ದು, ಮೈಸೂರು ವಿವಿಯಲ್ಲಿ 31 ವರ್ಷ ಸಲ್ಲಿಸಿರುವ ಸೇವೆ ಪೂರ್ಣ ತೃಪ್ತಿ ಕೊಟ್ಟಿದೆ. ಮಾಡಿದ ಕೆಲಸ ಭಾರ ಎನಿಸಬಾರದು. ಪ್ರೊ.ಎಂ.ಮಾದಯ್ಯ, ಪ್ರೊ. ಧನಂಜಯ ಅವರಿಂದಾಗಿ ಇಲ್ಲಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಡಾ.ಪಿ.ಬೋರೇಗೌಡ, ಪ್ರೊ.ಸಿ.ಡಿ.ನರಸಿಂಹಯ್ಯ, ರಾಜು ಪ್ರೇಮಕುಮಾರ್ ಸೇರಿದಂತೆ ಸಾವಿರಾರು ಮಂದಿಗೆ ಚಿಕಿತ್ಸೆ ನೀಡಿದ್ದೇನೆ. ನಮ್ಮ ಆರೋಗ್ಯ ಕೇಂದ್ರದ ನೌಕರರಿಂದ ತಾಳ್ಮೆ ಕಲಿತಿದ್ದೇನೆ. ಕುಟುಂಬದ ಸಹಕಾರವೂ ಸಿಕ್ಕಿದೆ. ಈವರೆಗೆ ಸಹಕಾರ ನೀಡಿದ ಎಲ್ಲರನ್ನು ಸ್ಮರಿಸುತ್ತೇನೆ ಎಂದರು.

ಈ ಮಾಸಾಂತ್ಯಕ್ಕೆ ವಿವಿ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಹುದ್ದೆಯಿಂದ ನಿವೃತ್ತಿಯಾಗುತ್ತಿದ್ದು, ಏ.1ರಿಂದ ವೈದ್ಯಕೀಯ ಕಾಲೇಜಿನಲ್ಲಿ ಬೋಧನಾ ವೃತ್ತಿ ಆರಂಭಿಸುತ್ತೇನೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಹಾರಾಜ ಕಾಲೇಜಿನ ಎನ್‌ಸಿಸಿ ಅಧಿಕಾರಿ ದಿವಾಕರ್ ಚಾಂಡಿ ಅವರಿಗೆ ಉನ್ನತ ಸೇವಾ ಪ್ರಶಸ್ತಿ ನೀಡಲಾಯಿತು. ಎನ್‌ಸಿಸಿ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ವೇದಿಕೆ ಅಧ್ಯಕ್ಷ ಆರ್.ವಾಸುದೇವ, ಪದಾಧಿಕಾರಿಗಳಾದ ಭಾಸ್ಕರ್, ಎಸ್.ವಿನೋದ್, ಕೆ.ಗಣೇಶ್, ಎನ್. ಚಲುವೇಶ್, ಗಿರೀಶ್, ಚೆಲುವಾಂಬಿಕೆ ಮೊದಲಾದವರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಬುಧವಾರ 26 ಮಾರ್ಚ್ 2025

ಹಾಸನ ಮಿತ್ರ

ಬಿಸಿಲು, ಮಳೆ ಎನ್ನದೆ ಜನರ ಸೇವೆಯಲ್ಲಿಯೇ ದೇವರ ಕಂಡವರು ಸ್ಕೌಟ್ಸ್ & ಗೈಡ್ಸ್ ಮಕ್ಕಳು



ಹಾಸನದ ಭಾರತ್ ಸ್ಕೌಟ್ಸ್ & ಗೈಡ್ಸ್ ಭವನದ ಆವರಣದಲ್ಲಿ ನಡೆದ ರಾಜ್ಯ ಮಟ್ಟದ ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ವೀಕ್ಷಣಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಮಾತನಾಡಿದರು.

ಹಾಸನ: ನಮ್ಮ ಭಾರತ್ ಸ್ಕೌಟ್ಸ್ & ಗೈಡ್ಸ್ ಮಕ್ಕಳು ಚಳಿ, ಬಿಸಿಲು ಹಾಗೂ ತಮ್ಮ ಆರೋಗ್ಯವನ್ನು ಲೆಕ್ಕಿಸದೇ ಹಾಸನಾಂಬೆ ಜಾತ್ರಾ ಮಹೋತ್ಸವದಲ್ಲಿ, ಶ್ರವಣಬೆಳಗೊಳದ ಜಾತ್ರೆ ಸೇರಿದಂತೆ ವಿವಿಧ ಸೇವಾ ಚಟುವಟಿಕೆಯಲ್ಲಿ ಪಾಲ್ಗೊಂಡು ಜನರಲ್ಲಿಯೇ ದೇವರನ್ನು ಕಂಡಿದ್ದಾರೆ ಎಂದು ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ, ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಶ್ಲಾಘಿಸಿದರು.

ನಗರದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದ ಆವರಣದಲ್ಲಿ ನಡೆದ ರಾಜ್ಯ ಮಟ್ಟದ ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ವೀಕ್ಷಣಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ 75 ವರ್ಷಗಳು ಭಾರತದ ಇತಿಹಾಸದಲ್ಲಿ ಏಳೂವರೆ ಲಕ್ಷ ರೀಚ್ ಆಗಿರುವುದು ಇದೆ ಮೊದಲ ಬಾರಿಗೆ. ಇದರ ಕ್ರೆಡಿಟ್ ಹಾಸನ ಜಿಲ್ಲೆಯ ಸಂಸ್ಥೆಯವರಿಗೆ ಸಲ್ಲಬೇಕು ಎಂದರು.

ಹಾಸನ ಜಿಲ್ಲೆಗೆ ಟಾರ್ಗೆಟ್ ಗಣತಿ ನೀಡಿದ್ದೆವು. ಅದರಲ್ಲಿ ನೂರಕ್ಕೆ ನೂರರಷ್ಟು ರೀಚ್ ಮಾಡಿದ್ದಾರೆ. ಪ್ರತಿ ವರ್ಷ ನಡೆಯುವ ಹಾಸನಾಂಬೆ ಜಾತ್ರೆಯಲ್ಲಿ ನಮ್ಮ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ನೂರಾರು ಮಕ್ಕಳು ಚಳಿ, ಬಿಸಿಲು ಲೆಕ್ಕಿಸದೇ ಸೇವೆ ಮಾಡಿ ಜನರಲ್ಲಿ ದೇವರನ್ನು ಕಾಣುತ್ತಾರೆ ಎಂದರು.

ಇನ್ನು ಹಾಸನಾಂಬೆ ದೇವಾಲಯದ ಬಾಗಿಲು ಹಾಕಿದ ಮೇಲೆ ಕಾಣಿಕೆ ಹುಂಡಿ ಹಣ ಎಣಿಕೆ ಮಾಡಲು ಕೂಡ ಮಕ್ಕಳು ಮುಂದಾಗುತ್ತಾರೆ. ಈ ವರ್ಷ 13 ಕೋಟಿಗೂ ಹೆಚ್ಚು ಹಣ ಸಂಗ್ರಹವಾಗಿದೆ. ಸರಕಾರದ ಅನೇಕ ಇಲಾಖೆಗಳಿವೆ. ಆದರೆ ಪ್ರಾಮಾಣಿಕರು ಎಂದು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮಕ್ಕಳಿಗೆ ಹುಂಡಿ ಎಣಿಕೆ ಮಾಡಲು ಕೊಡುತ್ತಾರೆ. ನಿಮ್ಮ ಸೇವೆಯ ಒಂದು ಭಾಗ ಇದಾಗಿದೆ ಎಂದು ಶ್ಲಾಘಿಸಿದರು.

ಇದೇ ವೇಳೆ ಭಾರತ್ ಸ್ಕೌಟ್ ಅಂಡ್ ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತ ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಆಯುಕ್ತ ಸ್ಟೀಫನ್ ಪ್ರಕಾಶ್, ಆಯುಕ್ತ ಜಯ ರಮೇಶ್, ಹಿರಿಯರಾದ ಕಾಂಚನ ಮಾಲಾ, ಜಿಲ್ಲಾ ಖಜಾಂಚಿ ರಮೇಶ್, ಜಂಟಿ ಕಾರ್ಯದರ್ಶಿ ಸೌಮ್ಯ, ರೇಂಜರ್ ವಿದ್ಯಾ, ರಾಜ್ಯ ಸಂಘಟನೆಯ ಪ್ರಿಯಾಂಕ, ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ, ರೋವರ್ಸ್ ಗಿರೀಶ್ ಇತರರಿದ್ದರು.

ಹಾಸನದ ವಿವಿಧ ಬಡಾವಣೆಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಭೇಟಿ, ಅಹವಾಲು ಸ್ವೀಕಾರ



ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್ ಹಾಸನ ನಗರದ ವಿವಿಧ ಬಡಾವಣೆಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಹಾಸನ: ನಗರದ ಬಿ.ಟಿ. ಕೊಪ್ಪಲು, ಎಸ್.ಬಿ.ಎಂ.ಕಾಲೋನಿ ಹಾಗೂ ಬಿ.ಕಾಟಿಹಳ್ಳಿ ಬಡಾವಣೆಗಳಿಗೆ ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್ ಭೇಟಿ ನೀಡಿ, ಪರಿಶೀಲನೆ ನಡೆಸಿ, ಅಲ್ಲಿನ ಸಮಸ್ಯೆಗಳ ಬಗ್ಗೆ ನಿವಾಸಿಗಳಿಂದ ಮನವಿ ಸ್ವೀಕರಿಸಿದರು.

ಬಡಾವಣೆಗಳಲ್ಲಿ ಯುಜಿಡಿ ಹಾಗೂ ಒಳಚರಂಡಿ ಸಮಸ್ಯೆಗಳ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಕರ್ನಾಟಕ ಒಳಚರಂಡಿ ಹಾಗೂ ನೀರು ಸರಬರಾಜು ಇಲಾಖೆ ಹಾಗೂ ನಗರಸಭೆ ಅಧಿಕಾರಿಗಳ ಜೊತೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಸ್ಥಳೀಯ ನಿವಾಸಿಗಳ ಅಹವಾಲುಗಳನ್ನು ಸ್ವೀಕರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಈ ಬಡಾವಣೆಗಳಲ್ಲಿ ಜನರು ಕಳೆದ ಹಲವು ದಿನಗಳಿಂದ ಯುಜಿಡಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಕೂಡಲೇ ಅಧಿಕಾರಿಗಳು ಇದನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದರು. ಬಡಾವಣೆಗಳಿಗೆ ಪ್ರಮುಖವಾಗಿ ಬೇಕಾಗಿರುವ ಮೂಲಸೌಕರ್ಯಗಳ ಪೈಕಿ ಯುಜಿಡಿ ಪ್ರಮುಖವಾಗಿದೆ. ಕೂಡಲೇ ವೈಜ್ಞಾನಿಕವಾಗಿ ಕಾಮಗಾರಿ ನಡೆಸಿ, ಬಡಾವಣೆ ಜನರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು ಎಂದು ಸೂಚನೆ ನೀಡಿದರು.

ಈ ವೇಳೆ ನಗರಸಭೆ ಹಾಗೂ ಕರ್ನಾಟಕ ಒಳಚರಂಡಿ ಹಾಗೂ ನೀರು ಸರಬರಾಜು ಇಲಾಖೆ ಅಧಿಕಾರಿಗಳು ಕಾರ್ಯಕರ್ತರು, ಮುಖಂಡರು, ಸಾರ್ವಜನಿಕರು, ಸ್ಥಳೀಯರು ಉಪಸ್ಥಿತರಿದ್ದರು.

ಸಂಘಟನೆಗೆ ಮಹತ್ವ ನೀಡಿ, ಸೇವಾ ಮನೋಭಾವದಿಂದ ಕೆಲಸ ಮಾಡಿ

ಶ್ರೀ ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಕರೆ

ಹಾಸನ: ಸಮಾಜದ ಸಂಘಟನೆ ಅತ್ಯಂತ ಪ್ರಮುಖವಾಗಿದ್ದು, ಸಂಘಟನೆಗೆ ಮಹತ್ವ ನೀಡುವುದರ ಜೊತೆಗೆ ಸೇವಾ ಮನೋಭಾವದಿಂದ ಕೆಲಸ ಮಾಡುವಂತರಾಗಿ ಎಂದು ಸಕಲೇಶಪುರ ತಾಲೂಕು ಯಸಳೂರು ತೆಂಕಲಗೂಡು ಮಠದ ಮಠಾಧೀಶರಾದ ಶ್ರೀ ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಕರೆ ನೀಡಿದರು.

ನಗರದ ಶ್ರೀ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದಿಂದ ಹಮ್ಮಿಕೊಳ್ಳಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ವೀರಶೈವ ಲಿಂಗಾಯತ ಎರಡೂ ಒಂದೆ ಎಂಬ ಭಾವನೆಯಿಂದ ನಾವು ಸಂಘಟಿತರಾಗಬೇಕಾಗಿದೆ ಎಂದರು.

ವಕೀಲೆ ಗಿರಿಜಾಂಬಿಕೆ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಕಟ್ಟಾಯ ಶಿವಕುಮಾರ್ ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ಶೋಭಾ ಮಹೇಶ್, ತಾಲೂಕು ಘಟಕದ ಉಪಾಧ್ಯಕ್ಷರಾದ ಹೆಚ್.ಪಿ.ಹೇಮೇಶ್, ಲೀಲಾ ಧರ್ಮಪ್ಪ, ಪ್ರಧಾನ ಕಾರ್ಯದರ್ಶಿ ಹೆಚ್.ವಿ.ಹೇಮಂತ್, ಸಹ ಕಾರ್ಯದರ್ಶಿಗಳಾದ ಶೆಟ್ಟಿಹಳ್ಳಿ ಧರ್ಮ, ಚಾಂದಿನಿ ಭೂಷಣ್, ನಿರ್ದೇಶಕರಾದ ಮಯೂರಿ ಲೋಕೇಶ್, ಕಿರಣ್‌ಕುಮಾರ್ ಹೊಸಮನಿ, ಮದನ್, ಹೆಚ್.ಕೆ.ದೀಲಿಪ್, ದರ್ಶನ್, ರಾಜಶೇಖರ್‌ಮೂರ್ತಿ, ಸಾವಿತ್ರಿ ವಿಜಯಕುಮಾರ, ಸುಜಾತಾ ರಾಜಶೇಖರ್, ಲತಾ ಸಂಪತ್, ರಾಜ್ಯ ಸಮಿತಿ ಸದಸ್ಯರಾದ ಶಿವಕುಮಾರ್, ರಾಜ್ಯ ಮಹಿಳಾ ಸಮಿತಿ ನಿರ್ದೇಶಕರಾದ ನಾಗರತ್ನ, ಜಿಲ್ಲಾ ಉಪಾಧ್ಯಕ್ಷ ಮನಿತ್ ಪಟೇಲ್, ಗೀತಾ ಪುಟ್ಟಸ್ವಾಮಿ, ಜಿಲ್ಲಾ ನಿರ್ದೇಶಕರಾದ ಶೋಭನ್ ಬಾಬು, ಹಾಗೂ ತಾಲೂಕು ಮಹಿಳಾ ಘಟಕದ ಸದಸ್ಯರು ಪಾಲ್ಗೊಂಡಿದ್ದರು.

ಏ.13, ಮಾಜಿ ಸೈನಿಕರ ಸಂಘದ ಚುನಾವಣೆ

ಹಾಸನ: ಹಾಸನ ಜಿಲ್ಲಾ ಮಾಜಿ ಸೈನಿಕರ ಸಮನ್ವಯ ಸಮಿತಿ ನೂತನ ಆಡಳಿತ ಮಂಡಳಿ (2025-28ರ ಅವಧಿಗೆ) ಹಾಲಿ ಬೈಲಾ ಪ್ರಕಾರ ಚುನಾವಣೆ ಏ.13ರಂದು ನಡೆಯಲಿದ್ದು, ಎಲ್ಲರೂ ಭಾಗವಹಿಸಿ ಚುನಾವಣೆ ಯಶಸ್ವಿಗೊಳಿಸುವಂತೆ ಮಾಜಿ ಸೈನಿಕ ಸಂಘದ ಅಧ್ಯಕ್ಷ ಎಂ.ವೆಂಕಟೇಶ್ ಮತ್ತು ಉಪಾಧ್ಯಕ್ಷ ಗೋವಿಂದೇಗೌಡ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ನಾವುಗಳು ನಮ್ಮ ಅವಧಿಯಲ್ಲಿ 3 ವರ್ಷಗಳ ಕಾಲ ಸಂಘವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದಿದ್ದೇವೆ. ಡಿಸೆಂಬರ್ ತಿಂಗಳಲ್ಲೇ ನಮ್ಮ ಅವಧಿ ಮುಗಿದಿದ್ದು, ಮುಂದಿನ ಅವಧಿಯ ಪದಾಧಿಕಾರಿಗಳ ಆಯ್ಕೆಗಾಗಿ ಅವಕಾಶ ಮಾಡಿಕೊಡುತ್ತಿದ್ದೇವೆ. ಆಡಳಿತ ಮಂಡಳಿ ಸದಸ್ಯರು ಒಮ್ಮತದಿಂದ ನಿರ್ಧರಿಸುವುದರಿಂದ ಏ.13ರಂದು ಬೆಳಗ್ಗೆ 8ರಿಂದ ಸಂಜೆ 4ರವರೆಗೆ ನಗರದ ಕುವೆಂಪುನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಚುನಾವಣೆ ನಡೆಸಲಾಗುವುದು ಎಂದರು. ಗೋಷ್ಠಿಯಲ್ಲಿ ಮಾಜಿ ಸೈನಿಕರ ಸಂಘದ ಖಜಾಂಚಿ ಬಾಲಕೃಷ್ಣ, ಸಂಘಟನಾ ಕಾರ್ಯದರ್ಶಿ ರಮೇಶ್, ನಿರ್ದೇಶಕ ಮಂಜೇಗೌಡ, ಅರಸೀಕೆರೆ ನಿರ್ದೇಶಕ ಮಹೇಶ್ ಇದ್ದರು.

ಏ.3, ಬೆಂಗಳೂರು ಅರಮನೆ ಮೈದಾನದಲ್ಲಿ ಪೌರಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಸಮಾರಂಭ ಉದ್ಘಾಟನೆ



ಮಾಜಿ ಮೇಯರ್ ನಾರಾಯಣ್

ಮೈಸೂರು, ಮಾ.25(ಎಂಟಿವೈ)- ಬೆಂಗಳೂರು ಅರ ಮನೆ ಮೈದಾನದಲ್ಲಿ ಏ.3ರಂದು ಬೆಳಗ್ಗೆ 11 ಗಂಟೆಗೆ ಪೌರ ಕಾರ್ಮಿಕರ ರಾಜ್ಯ ಮಟ್ಟದ ಬೃಹತ್ ಸಮಾವೇಶ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ನಗರಪಾಲಿಕೆ, ನಗರ ಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ರಾಜ್ಯಾಧ್ಯಕ್ಷ, ಮಾಜಿ ಮೇಯರ್ ನಾರಾಯಣ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ 25ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದೆ. ಪೌರಕಾರ್ಮಿಕರ ಹಿತಕಾಯುವ ನಿಟ್ಟಿನಲ್ಲಿ ಹೋರಾಟ ಮಾಡುತ್ತಾ ಬಂದಿದೆ. ಅನೇಕ ಸಮಸ್ಯೆ ಈಡೇರಿಕೆಯಲ್ಲಿ ಸಂಘ ಯಶಸ್ವಿಯಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಪೌರ ಕಾರ್ಮಿಕರ ರಾಜ್ಯಮಟ್ಟದ ಬೃಹತ್ ಸಮಾವೇಶ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾವೇಶ ಉದ್ಘಾಟಿಸಲಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್, ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಸಚಿವರಾದ ಕೆ.ಹೆಚ್.ಮುನಿಯಪ್ಪ, ಡಾ. ಹೆಚ್.ಸಿ.ಮಹದೇವಪ್ಪ, ರಾಮಲಿಂಗಾ ರೆಡ್ಡಿ, ಕೆ.ಜೆ.ಜಾರ್ಜ್, ಭೈರತಿ ಸುರೇಶ್, ಪ್ರಿಯಾಂಕ ಖರ್ಗೆ, ಜಮೀರ್ ಅಹಮ್ಮದ್ ಖಾನ್, ದಿನೇಶ್ ಗುಂಡೂರಾವ್, ಸಂತೋಷ್ ಲಾಡ್, ರಹೀಂಖಾನ್, ಶಾಸಕರಾದ ಎಂ.ಕೃಷ್ಣಪ್ಪ, ರಿಜ್ವಾನ್ ಹರ್ಷದ್ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ ಎಂದರು.

ದೇಶದಲ್ಲೇ ಮಾದರಿಯಾಗಿ ಕರ್ನಾಟಕ ಸರ್ಕಾರ ಪೌರಕಾರ್ಮಿಕರ ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಿ ಸುಮಾರು 29 ಸಾವಿರ ನೇರಪಾವತಿ ಪೌರಕಾರ್ಮಿಕರನ್ನು ಕಾಯಂ ನೌಕರರನ್ನಾಗಿ ನೇಮಿಸಿದ ರಾಜ್ಯದ ಮುಖ್ಯಮಂತ್ರಿ ಉಪಮುಖ್ಯ ಮಂತ್ರಿ ಸಚಿವರನ್ನು ಅಭಿನಂದಿಸ ಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿ ಯಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷ ಆರ್.ಶಿವಣ್ಣ, ರಾಜ್ಯ ಸಂಚಾಲಕ ಆರ್.ದಾಸ್, ಜಿಲ್ಲಾಧ್ಯಕ್ಷ ಆರ್ಟಿಸ್ಟ್ ಎಸ್.ನಾಗರಾಜ್, ಮುಖಂಡರಾದ ಯತಿರಾಜ್, ವಿಜಯ್ ಇದ್ದರು.

ಮಚ್ಚು ಹಿಡಿದು ರೀಲ್ಸ್

ಬಿಗ್‌ಬಾಸ್ ಮಾಜಿ ಸ್ಪರ್ಧಿಗಳಾದ ರಜತ್, ವಿನಯ್ ನ್ಯಾಯಾಂಗ ಬಂಧನ



ವಿನಯ್ ಮತ್ತು ರಜತ್

ಬೆಂಗಳೂರು, ಮಾ.25- ಮಚ್ಚು ಹಿಡಿದು ರೀಲ್ಸ್ ಮಾಡಿದ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ನಂತರ ಕನ್ನಡ ಬಿಗ್‌ಬಾಸ್‌ನ ಮಾಜಿ ಸ್ಪರ್ಧಿಗಳಾದ ರಜತ್ ಕಿಶನ್ ಹಾಗೂ ವಿನಯ್ ಗೌಡ ಅವರನ್ನು ಸೋಮವಾರ ಬಂಧಿಸಿ, ಬಿಡುಗಡೆ ಮಾಡಲಾಗಿತ್ತು. ಆದರೆ ಮಂಗಳವಾರ ಮತ್ತೆ ಆರೋಪಿಗಳನ್ನು ವಶಕ್ಕೆ ಪಡೆದು ಸ್ಥಳ ಮಹಜರು ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಕೋರ್ಟ್ ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 270(ಸಾರ್ವಜನಿಕ ತೊಂದರೆ) ಮತ್ತು ಶಸ್ತ್ರಾಸ್ತ್ರ ಕಾಯ್ದೆಯ ಇತರ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ರಜತ್ ಹಾಗೂ ವಿನಯ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಬಸವೇಶ್ವರ ನಗರ ಠಾಣೆ ಪೊಲೀಸರು ಇಂದು ಇಬ್ಬರು ಆರೋಪಿಗಳನ್ನು ಠಾಣೆ ಕರೆತಂದು, ರೀಲ್ಸ್‌ನಲ್ಲಿ ಬಳಸಿದ್ದ ಅಸಲಿ ಮಚ್ಚು ತೋರಿಸುವಂತೆ ಸೂಚಿಸಿದ್ದಾರೆ. ಆದರೆ ಪೊಲೀಸರಿಗೆ ಸರಿಯಾದ ಉತ್ತರ ಸಿಕ್ಕಿಲ್ಲ. ಹೀಗಾಗಿ ಪೊಲೀಸರು ಲಾಂಗ್ ಹಿಡಿದು ರೀಲ್ಸ್ ಮಾಡಿದ್ದ ನಾಗರ ಬಾವಿಯ ಅಕ್ಷಯ ಸ್ಟುಡಿಯೋ ಆರೋಪಿಗಳನ್ನು ಕರೆದೊಯ್ದು ಸ್ಥಳ ಮಹಜರು ಮಾಡಿದ್ದಾರೆ.

ಅಕ್ಷಯ ಸ್ಟುಡಿಯೋದ ಮೂಲೆ ಮೂಲೆಯಲ್ಲಿ ಹುಡುಕಿದರೂ ಲಾಂಗ್ ಪತ್ತೆ ಆಗಿಲ್ಲ. ಮಚ್ಚು ಎಲ್ಲಿದೆ ಎಂದು ಕೇಳಿದರೂ ರಜತ್ ಹಾಗೂ ವಿನಯ್ ಗೌಡ ಬಾಯಿ ಬಿಟ್ಟಿಲ್ಲ. ಸೆಟ್ ಹಾಕಿದ್ದ ವರು ತಗೊಂಡು ಹೋಗಿರಬಹುದೆಂದು ಎಂದು ಬೇಜವಾಬ್ದಾರಿ ಉತ್ತರ ನೀಡಿದ್ದಾರೆ. ಹೀಗಾಗಿ ಬಸವೇಶ್ವರ ನಗರ ಪೊಲೀಸರು ಅವರಿಬ್ಬರನ್ನು ಮತ್ತೆ ಠಾಣೆಗೆ ಕರೆದುಕೊಂಡು ಬಂದಿದ್ದಾರೆ. ವಿಚಾರಣೆ ಬಳಿಕ ಇಬ್ಬರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದರು. ಅಂತಿಮವಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಡಾ.ಭಾನುಪ್ರಕಾಶ್ ಶರ್ಮಾ ನಾಮಪತ್ರ ಸಲ್ಲಿಕೆ



ಏಪ್ರಿಲ್ 13ರಂದು ನಡೆಯಲಿರುವ 2025-2030ನೇ ಸಾಲಿನ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ, ನಿವೃತ್ತ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ, ಬೆಂಬಲಿತ ಅಭ್ಯರ್ಥಿ ಹಾಲಿ ಉಪಾಧ್ಯಕ್ಷ ವೇದ ಬ್ರಹ್ಮಶ್ರೀ ಡಾ.ಭಾನುಪ್ರಕಾಶ್ ಶರ್ಮಾ ಅವರು ನಾಮಪತ್ರ ಸಲ್ಲಿಸಿದರು.

ಮೈಸೂರು,ಮಾ.25-ಏಪ್ರಿಲ್ 13ರಂದು ರಾಜ್ಯಾದ್ಯಂತ ಏಕಕಾಲಕ್ಕೆ ನಡೆಯುತ್ತಿರುವ 2025-2030ನೇ ಸಾಲಿನ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ, ನಿವೃತ್ತ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ಬೆಂಬಲಿತ ಅಭ್ಯರ್ಥಿ ಹಾಲಿ ಉಪಾಧ್ಯಕ್ಷ ವೇದ ಬ್ರಹ್ಮಶ್ರೀ ಡಾ.ಭಾನುಪ್ರಕಾಶ್ ಶರ್ಮಾ ಅವರು ಬೆಂಗಳೂರಿನ ಬನಶಂಕರಿಯ ಉಮಾ ಮಹೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ಬನಶಂಕರಿ 2ನೇ ಹಂತದಲ್ಲಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೇಂದ್ರ ಕಚೇರಿಗೆ ಚಂಡೆ ವಾದ್ಯ, ವೇದಘೋಷದೊಂದಿಗೆ ಮೆರವಣಿಗೆ ಮೂಲಕ ತೆರಳಿ ಚುನಾವಣೆ ಅಧಿಕಾರಿಗಳಿಗೆ ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮೈಸೂರಿನ ಜಿಲ್ಲಾ ಪ್ರತಿನಿಧಿ 2 ಸ್ಥಾನಗಳಿಗೆ ಹಾಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಸಂಘಟನಾ ಕಾರ್ಯದರ್ಶಿ ಕಡಕೊಳ ಜಗದೀಶ್ ನಾಮಪತ್ರ ಸಲ್ಲಿಸಿದರು.

ಈ ವೇಳೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ, ನಿವೃತ್ತ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ಮಾತನಾಡಿ, ಕಳೆದ 30 ವರ್ಷಗಳಿಂದ ಬ್ರಾಹ್ಮಣ ಸಂಘಟನೆಯಲ್ಲಿ ನಿರತರಾಗಿ ಆರು ಬಾರಿ ರಾಜ್ಯ ಉಪಾಧ್ಯಕ್ಷರಾಗಿ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಜೊತೆಗೆ ಧಾರ್ಮಿಕ ವೃತ್ತಿಯಲ್ಲಿ ತೊಡಗಿ, ಬ್ರಾಹ್ಮಣ ಅಭಿವೃದ್ಧಿ ನಿಗಮ ಮಂಡಳಿಯ ನಿರ್ದೇಶಕರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಮಹಾಮಾರಿ ಕೊರೊನಾ ಸಂದರ್ಭದಲ್ಲಿ ಸಾವಿರಾರು ಜನರಿಗೆ ಭಾನುಪ್ರಕಾಶ್ ಸದ್ಗತಿ ಸಲ್ಲಿಸಿದ್ದಾರೆ.

ವಿಶ್ವ ಹಿಂದೂ ಪರಿಷತ್‌ನ ಸಕ್ರಿಯ ಕಾರ್ಯಕರ್ತರಾಗಿ ಹಿಂದೂ ಸಮಾಜದೊಂದಿಗೆ ಬೆರೆತಿದ್ದಾರೆ. 13 ಬಾರಿ ಕಾವೇರಿ ಮಾತೆಗೆ ಬಾಗಿನ ಅರ್ಪಿಸಿರುವ ದಾಖಲೆ ಇವರದಾಗಿದ್ದು ಇಂಥವರನ್ನು ಎಕೆಬಿಎಂಎಸ್ ಸದಸ್ಯರು ಬೆಂಬಲಿಸಿ ಅತ್ಯಧಿಕ ಮತದಿಂದ ಗೆಲ್ಲಿಸಬೇಕೆಂದು ಮನವಿ ಮಾಡಿದರು. ಹಾಗೆಯೇ ಮೈಸೂರಿನ 2 ಸ್ಥಾನಗಳ ಪ್ರತಿನಿಧಿಯಾಗಿ ಡಿ.ಟಿ.ಪ್ರಕಾಶ್ ಹಾಗೂ ಕಡಕೋಳ ಜಗದೀಶ್ ಅವರನ್ನೂ ಬೆಂಬಲಿಸಬೇಕೆಂದು ಕೋರಿದರು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ, ರಾಜ್ಯ ಉಪಾಧ್ಯಕ್ಷರಾದ ರಾಘವೇಂದ್ರ ಭಟ್, ರಾಜೇಂದ್ರ ಪ್ರಸಾದ್, ಸುಧಾಕರ್, ವೆಂಕಟೇಶ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕಡಕೊಳ ಜಗದೀಶ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಎಚ್.ಎನ್.ಶ್ರೀಧರಮೂರ್ತಿ, ಕುಮಾರ್, ಮೇಲುಕೋಟೆ ವಂಗಿಪುರ ಮಠದ ಇಳೈ ಆಳ್ವಾರ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಗ್ರಾಮಾಂತರ ಅಧ್ಯಕ್ಷ ಗೋಪಾಲ್‌ರಾವ್, ಜಯಸಿಂಹ ಶ್ರೀಧರ್, ಕೆ.ಎಂ.ನಿಶಾಂತ್ ಇತರರಿದ್ದರು.

ಸಂವಿಧಾನ ತಿದ್ದುಪಡಿ ಎಂಬ ಡಿಕೆಶಿ ಹೇಳಿಕೆಯನ್ನು ಬಿಜೆಪಿ ತಿರುಚಿದೆ

ಕಾಂಗ್ರೆಸ್ ವಕ್ತಾರ ರಾಜೇಶ್ ಆರೋಪ

ಮೈಸೂರು,ಮಾ.25(ಎಂಟಿವೈ)- ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂವಿಧಾನ ಬದಲಾವಣೆ ಮಾಡುವ ಹೇಳಿಕೆ ನೀಡಿದ್ದಾರೆ ಎಂದು ಬಿಜೆಪಿ ಸುಳ್ಳು ಹೇಳುತ್ತಿದೆ ಎಂದು ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನದಲ್ಲಿನ ನಿಯಮಾವಳಿ ತಿದ್ದುಪಡಿಗೆ ಸಂಬಂಧಿಸಿದಂತೆ ಡಿ.ಕೆ. ಶಿವಕುಮಾರ್ ಅವರು ನೀಡಿದ ಹೇಳಿಕೆಯನ್ನೇ ತಿರುಚಿ, ಸಂವಿಧಾನ ಬದಲಿಸುವ ಹೇಳಿಕೆ ನೀಡಿದ್ದಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಈ ಹಿಂದೆ ಅನಂತಕುಮಾರ್ ಹೆಗಡೆ ಸಂವಿಧಾನ ಬದಲಿಸುವುದೇ ನಮ್ಮ ಗುರಿ ಎಂದು ಬಹಿರಂಗವಾಗಿ ಹೇಳಿಕೆ ನೀಡಿದ್ದರು. ಕೇಂದ್ರ ಸಚಿವ ಅಮಿತ್ ಶಾ ಸಂಸತ್‌ನಲ್ಲಿ ಅಂಬೇಡ್ಕರ್ ಅವರಿಗೆ ಅಪಮಾನ ಮಾಡುವ ಹೇಳಿಕೆ ನೀಡಿದ್ದರು. ಈ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದ ರಾಜ್ಯ ಬಿಜೆಪಿಗರು ಈಗ ಡಿ.ಕೆ.ಶಿವಕುಮಾರ್ ಹೇಳಿಕೆ ತಿರುಚಿ ಪ್ರತಿಭಟನೆಗೆ ಮುಂದಾಗಿರುವುದು ಹಾಸ್ಯಾಸ್ಪದ ಎಂದು ಟೀಕಿಸಿದರು.

ಕಾಂಗ್ರೆಸ್ ಪಕ್ಷ ಸಂವಿಧಾನ ಉಳಿಸುವ ನಿಟ್ಟಿನಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋ ಕಾರ್ಯಕ್ರಮ ರೂಪಿಸಿ, ಸಂವಿಧಾನದ ಬಗ್ಗೆ ದೇಶಾದ್ಯಂತ ಜಾಗೃತಿ ಮೂಡಿಸಿದೆ. ಕರ್ನಾಟಕದಲ್ಲಿ ಭಾರತ್ ಜೋಡೋ ಯಾತ್ರೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಡಿ.ಕೆ.ಶಿವಕುಮಾರ್ ಎಂಬುದನ್ನು ಬಿಜೆಪಿಯವರು ಅರಿಯಬೇಕು ಎಂದರು. ಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಬಿ.ಜಿ.ಕೇಶವ, ಓಂಕಾರ್ ರವಿ, ಶ್ರೀನಿವಾಸ್, ಸೈಯದ್ ಫಾರೂಕ್ ಇದ್ದರು.

ಹಿರಿಯ ವಕೀಲ ಲಾಗೈಡ್ ಎಚ್.ಎನ್.ವೆಂಕಟೇಶ್ ಹುಟ್ಟುಹಬ್ಬ ಆಚರಣೆ



ಮೈಸೂರು ನಗರ ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರೂ ಆದ ವಕೀಲ ಜೆ.ಶ್ರೀನಿವಾಸ್ ನೇತೃತ್ವದಲ್ಲಿ ಹಿರಿಯ ವಕೀಲ, ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರಾದ ಎಚ್.ಎನ್.ವೆಂಕಟೇಶ್ ಅವರ ಹುಟ್ಟುಹಬ್ಬವನ್ನು ಮೈಸೂರಿನ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಆಚರಿಸಲಾಯಿತು. ಇದೇ ವೇಳೆ ವೆಂಕಟೇಶ್ ಅವರಿಗೆ ಮೈಸೂರು ಪೇಟ ತೊಡಿಸಿ, ಹಾರ, ಶಾಲು ಹೊದಿಸಿ, ಗೌರವಿಸಲಾಯಿತು. ಹಿರಿಯ ವಕೀಲ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ವಕೀಲರಾದ ಹೇಮಂತ್, ಸುನೀಲ್, ಶರತ್, ಯಮುನಾ, ಸಿದ್ದರಾಜು, ನವೀನ್, ಧನಂಜಯ, ವೀಣಾ, ಸಂಜನಾ ಇನ್ನಿತರರಿದ್ದರು.

15 ಮಂದಿ ಡಿವೈಎಸ್‌ಪಿ, 16 ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

ಬೆಂಗಳೂರು,ಮಾ.25-ರಾಜ್ಯ ಪೊಲೀಸ್ ಇಲಾಖೆಯಲ್ಲಿ 16 ಮಂದಿ ಇನ್‌ಸ್ಪೆಕ್ಟರ್ ಹಾಗೂ 15 ಮಂದಿ ಡಿವೈಎಸ್‌ಪಿ (ಸಿವಿಲ್)ಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ವರ್ಗಾವಣೆಯಾದ ಇನ್‌ಸ್ಪೆಕ್ಟರ್‌ಗಳು: ದಿನೇಶ್‌ಕುಮಾರ್, ತುಮಕೂರಿನಿಂದ ಕೊಡಗಿನ ಕುಶಾಲನಗರ ವೃತ್ತಕ್ಕೆ ವರ್ಗಾವಣೆ ಮಾಡಲಾಗಿದೆ. ಮೋಹನ್‌ರೆಡ್ಡಿ- ಕರ್ನಾಟಕ ಲೋಕಾಯುಕ್ತದಿಂದ ಹಾಸನ ಆಲೂರು ಪೊಲೀಸ್ ಠಾಣೆ, ಲಕ್ಷ್ಮೀಕಾಂತ್ ಮೈಸೂರು ಹೆಬ್ಬಾಳ ಪೊಲೀಸ್ ಠಾಣೆ, ಚಾಮರಾಜನಗರ ಗ್ರಾಮಾಂತರದ ಇನ್‌ಸ್ಪೆಕ್ಟರ್ ಚಿಕ್ಕರಾಜಶೆಟ್ಟಿ ರಾಮಾಪುರ ಪೊಲೀಸ್ ಠಾಣೆ, ಶೇಷಾದ್ರಿ- ಚಾಮರಾಜನಗರ ಜಿಲ್ಲೆಯ ಮಹಿಳಾ ಪೊಲೀಸ್ ಠಾಣೆಯಿಂದ ಗ್ರಾಮಾಂತರ ಠಾಣೆಗೆ, ಸತೀಶ-ಚಿಕ್ಕಮಗಳೂರು ಬಸವನಹಳ್ಳಿ ವೃತ್ತದಿಂದ ಮಹಿಳಾ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡಿದ್ದಾರೆ.

ಶ್ರೀಕಾಂತ್-ಮಂಡ್ಯ ಡಿಸಿಆರ್‌ಬಿ, ಲಕ್ಷ್ಮಯ್ಯ, ರಾಮಚಂದ್ರಪ್ಪ, ಸತೀಶ್, ಪ್ರಕಾಶ್, ಬಿ.ಜೆ.ಸತೀಶ್‌ಕುಮಾರ್, ಸಂತೋಷ್ ಎಂ.ಪಾಟೀಲ್, ಸಂಜೀವ ರಾಯಪ್ಪ, ಮಂಜುನಾಥ್ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಲಾಗಿದೆ.

ಡಿವೈಎಸ್‌ಪಿ: ಶಾಂತವೀರ-ರಾಯಚೂರು ಉಪವಿಭಾಗ, ರವಿನಾಥ ಡಿ.ಹರಿಜನ-ಸಿಐಡಿ, ಸುರೇಶ್-ಬಳ್ಳಾರಿ ಗ್ರಾಮಾಂತರ ಸಿರುಗುಪ್ಪ ಉಪ ವಿಭಾಗ, ನವೀನ್ ಕುಲಕರ್ಣಿ-ಬೆಂಗಳೂರು ನಗರ ಟಿಟಿಐ, ಶ್ರೀನಿವಾಸ ರೆಡ್ಡಿ-ಪ್ರಧಾನ ಕಚೇರಿ, ಮಾದಪ್ಪ-ಸಿಐಡಿಯಿಂದ ರಾಜ್ಯ ಗುಪ್ತವಾರ್ತೆ, ಲಕ್ಷ್ಮಿನಾರಾಯಣ-ಪ್ರಧಾನ ಕಚೇರಿ, ಗಿರಿಮಲ್ಲ ತಳಕಟ್ಟಿ-ಪ್ರಧಾನ ಕಚೇರಿ ಹಾಗೂ ಬಸವರಾಜ್ ಅವರನ್ನು ಆಂತರಿಕ ಭದ್ರತಾ ವಿಭಾಗದಲ್ಲಿಯೇ ಮುಂದುವರೆಸಲಾಗಿದೆ.

ಸುಧಾಕರ್, ರವಿಕುಮಾರ್- ಬೆಂಗಳೂರು ನಗರ ಸಿಟಿಎಸ್‌ಬಿ, ಪರಶುರಾಮಪ್ಪ, ಗಜೇಂದ್ರ ಪ್ರಸಾದ್-ವಿವಿಐಪಿ ಭದ್ರತೆ, ಶರಣಪ್ಪ-ಟಿಟಿಐನಿಂದ ರಾಜ್ಯ ಗುಪ್ತವಾರ್ತೆ ಮತ್ತು ವೆಂಕಟೇಶ್ ಅವರನ್ನು ಬಳ್ಳಾರಿ ಜಿಲ್ಲೆ ಸಿರಗುಪ್ಪ ಉಪ ವಿಭಾಗದಿಂದ ಸಿಐಡಿಗೆ ವರ್ಗಾಯಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿಡದಿ ರೈಲು ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಕರೆ: ಬಾಂಬ್ ನಿಷ್ಕ್ರಿಯ, ಶ್ವಾನದಳ ಪರಿಶೀಲನೆ

ರಾಮನಗರ: ಬಿಡದಿ ರೈಲು ನಿಲ್ದಾಣಕ್ಕೆ ಹುಸಿ ಬಾಂಬ್ ಬೆದರಿಕೆ ಕರೆ ಬಂದಿದೆ. ರೈಲ್ವೆ ಕಂಟ್ರೋಲ್ ರೂಂಗೆ ತಡರಾತ್ರಿ ಕರೆ ಮಾಡಿರುವ ದುಷ್ಕರ್ಮಿಗಳು, ರೈಲು ನಿಲ್ದಾಣ ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದಾರೆ.

ಬಾಂಬ್ ಬೆದರಿಕೆ ಕರೆ ಹಿನ್ನೆಲೆಯಲ್ಲಿ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ರೈಲ್ವೆ ಪ್ಲಾಟ್‌ಫಾರಂನಲ್ಲಿ ಪರಿಶೀಲನೆ ನಡೆಸಿದ್ದು, ಅದೊಂದು ಹುಸಿ ಬಾಂಬ್ ಬೆದರಿಕೆ ಕರೆ ಎಂಬುದು ದೃಢಪಟ್ಟಿದೆ.

ರೈಲ್ವೆ ಅಧಿಕಾರಿಗಳು, ರಾಮನಗರ ಡಿವೈಎಸ್ಪಿ ನೇತೃತ್ವದಲ್ಲಿ ಬಿಡದಿ ರೈಲ್ವೆ ನಿಲ್ದಾಣದಲ್ಲಿ ಪರಿಶೀಲನೆ ನಡೆಸಿದ್ದು, ರೈಲ್ವೆ ನಿಲ್ದಾಣಕ್ಕೆ ಬರುವ ಪ್ರಯಾಣಿಕರ ಮೇಲೂ ನಿಗಾ ಇರಿಸಲಾಗಿದೆ. ಇತ್ತೀಚಿಗೆ ಬಿಡದಿಯ ಪ್ರತಿಷ್ಠಿತ ಕಂಪನಿಯ ಶೌಚಾಲಯದ ಗೋಡೆ ಮೇಲೆ ಪಾಕಿಸ್ತಾನ ಪರವಾಗಿ ಬರಹ ಬರೆದ ಪ್ರಕರಣದಲ್ಲಿ ಇಬ್ಬರನ್ನು ಬಂಧಿಸಲಾಗಿತ್ತು. ಈ ಆರೋಪಿಗಳನ್ನು ಬಿಡುಗಡೆ ಮಾಡಬೇಕು ಎಂದು ದುಷ್ಕರ್ಮಿಗಳು ಕರೆ ಮಾಡಿದ್ದ ವೇಳೆಯಲ್ಲಿ ಹೇಳಿರುವುದಾಗಿ ತಿಳಿದು ಬಂದಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಕರ್ನಾಟಕ ಮೂಲದ ಇಬ್ಬರನ್ನು ಬಿಡದಿ ಪೊಲೀಸರು ಬಂಧಿಸಿದ್ದರು.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಮಾ.25- ಮಾರ್ಚ್ 27ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಹೆಚ್.ಡಿ.ಕೋಟೆ 66/11 ಕೆವಿ, ವಿದ್ಯುತ್ ವಿತರಣಾ ಕೇಂದ್ರದಲ್ಲಿ 220 ಕೆವಿ ಮಾರ್ಗದ ತುರ್ತು ಕಾಮಗಾರಿ ನಿಮಿತ್ತ ಹೆಚ್.ಡಿ.ಕೋಟೆ ತಾಲೂಕಿನ ಪಡುವಕೋಟೆ, ಸವ್ವೆ, ಮತ್ತು ಚಿಕ್ಕಕೆರೆಯೂರು ಪಂಚಾಯಿತಿಗಳ ವ್ಯಾಪ್ತಿಯ ಸವ್ವೆ ಐ.ಪಿ ಮಾರ್ಗ, ಚಿಕ್ಕರೆಯೂರು ಐ.ಪಿ ಮಾರ್ಗ, ಪಡುಕೋಟೆ ಎನ್.ಜೆ.ವೈ ಮಾರ್ಗ, ಬೆಳಗನಹಳ್ಳಿ ಐ.ಪಿ ಮಾರ್ಗ ಹಾಗೂ ಕೆ.ಜಿ.ಹಳ್ಳಿ ಐ.ಪಿ ಮಾರ್ಗದ ವ್ಯಾಪ್ತಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೈಸೂರು ಪಿಎಫ್ ಕಚೇರಿ ಮುಂದೆ ನಿವೃತ್ತ ನೌಕರರ ಪ್ರತಿಭಟನೆ



ಕನಿಷ್ಠ ಪಿಂಚಣಿ ಹೆಚ್ಚಳಕ್ಕೆ ಒತ್ತಾಯಿಸಿ ಇಪಿಎಸ್-95 ರಾಷ್ಟ್ರೀಯ ಹೋರಾಟ ಸಮಿತಿ ವತಿಯಿಂದ ನಿವೃತ್ತ ನೌಕರರು ಮೈಸೂರಿನ ಗಾಯತ್ರಿಪುರಂನಲ್ಲಿರುವ ಪಿಎಫ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.25(ಜಿಎ)-ಕನಿಷ್ಠ ಪಿಂಚಣಿ ಹೆಚ್ಚಳಕ್ಕೆ ಒತ್ತಾಯಿಸಿ ಇಪಿಎಸ್-95 ರಾಷ್ಟ್ರೀಯ ಹೋರಾಟ ಸಮಿತಿ ವತಿಯಿಂದ ನಿವೃತ್ತ ನೌಕರರು ಮೈಸೂರಿನ ಗಾಯತ್ರಿಪುರಂನಲ್ಲಿರುವ ಪಿಎಫ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ದೇಶದಾದ್ಯಂತ 78 ಲಕ್ಷ ಇಪಿಎಸ್-95 ಪಿಂಚಣಿದಾರರು ನ್ಯಾಯಯುತ ಬೇಡಿಕೆಗಳಿಗಾಗಿ ಕಳೆದ 9 ವರ್ಷಗಳಿಂದ ನಿರಂತರವಾಗಿ ಹೋರಾಟ ನಡೆಸುತ್ತಿದ್ದೇವೆ. ಆದರೆ, ಇದುವರೆಗೂ ನಮ್ಮ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸಿಲ್ಲ. ಕನಿಷ್ಠ ಪಿಂಚಣಿಯನ್ನು 7.500 ರೂ. ಗೆ ಹೆಚ್ಚಿಸಿ ಅದನ್ನು ತುಟ್ಟಿಭತ್ಯೆಯೊಂದಿಗೆ ಜೋಡಿಸುವುದು, ತಾರತಮ್ಯವಿಲ್ಲದೆ ನಿಜವಾದ ವೇತನದ ಮೇಲೆ ಹೆಚ್ಚಿನ ಪಿಂಚಣಿ ಪ್ರಯೋಜನ ನೀಡುವುದು, ವೈದ್ಯಕೀಯ ಸೌಲಭ್ಯ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸುತ್ತಿದ್ದೇವೆ. ಕಾರ್ಮಿಕ ಮತ್ತು ಉದ್ಯೋಗ ಸಚಿವರ ಭರವಸೆ ಮೇರೆಗೆ ಎಲ್ಲಾ ಆಂದೋಲನಗಳನ್ನು ಮುಂದೂಡಿದ್ದೇವೆ. ಆದರೂ ಬೇಡಿಕೆ ಈಡೇರಿಸಿಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ.ಮನ್ಸುಖ್ ಜಿ.ಮಾಂಡವಿಯಾ ಅವರು ನಮ್ಮ ಬೇಡಿಕೆಗಳ ಬಗ್ಗೆ ಸಕಾರಾತ್ಮಕವಾಗಿದ್ದಾರೆ. ಆದರೆ ದುಃಖಕರ ಸಂಗತಿಯೆಂದರೆ ಎನ್ಎಸಿ ಬೇಡಿಕೆ ಪ್ರಕಾರ, ಕನಿಷ್ಠ ಪಿಂಚಣಿ ಹೆಚ್ಚಿಸಲು ವಿಶೇಷ ಸಿಬಿಟಿ ಸಭೆಯನ್ನೇ ಕರೆದಿಲ್ಲ. 1000 ದಿಂದ 7500ಕ್ಕೆ ಹೆಚ್ಚಿಸುವ ಪ್ರಸ್ತಾಪವನ್ನು ಸಿಬಿಟಿ ಸಭೆಯಲ್ಲಿ ಇನ್ನೂ ಅನುಮೋದಿಸಲಾಗಿಲ್ಲ. ಎರಡು ವರ್ಷಗಳ ಹಿಂದೆ ನೈಜ ಸಂಬಳದ ಮೇಲೆ ಹೆಚ್ಚಿನ ಪಿಂಚಣಿ ಸೌಲಭ್ಯ ನೀಡುವ ಕುರಿತು ಸುಪ್ರೀಂಕೋರ್ಟ್ ಆದೇಶ ನೀಡಿದ್ದರೂ, ಎಲ್ಲಾ ಪಿಂಚಣಿದಾರರಿಗೆ ತಾರತಮ್ಯವಿಲ್ಲದೆ ಪಿಂಚಣಿಯ ಪ್ರಯೋಜನ ನೀಡಿ ನ್ಯಾಯ ಒದಗಿಸುವ ಬದಲು, ವಿನಾಯಿತಿ ಪಡೆದ ಸಂಸ್ಥೆಗಳು ಟ್ರಸ್ಟ್ ನಿಯಮಗಳಲ್ಲಿ ತಿದ್ದುಪಡಿ ಮತ್ತು ತಪಾಸಣೆ ಶುಲ್ಕದಂತಹ ಕಾರಣಗಳನ್ನು ಮುಂದಿಟ್ಟು ಹೆಚ್ಚಿನ ಪಿಂಚಣಿಯ ಪ್ರಯೋಜನದಿಂದ ವಂಚಿತರಾಗುತ್ತಿದ್ದಾರೆ. ಅಲ್ಲದೆ, ಸ್ವೀಕರಿಸಿದ ಅರ್ಜಿಗಳಲ್ಲಿ ಅನಗತ್ಯ ಆಕ್ಷೇಪಣೆಗಳನ್ನು ಎತ್ತುವ ಮೂಲಕ ಅವುಗಳನ್ನು ರದ್ದುಗೊಳಿಸುತ್ತಿದ್ದಾರೆ. ಹೀಗಾಗಿ ಕೂಡಲೇ ಇಪಿಎಫ್-95 ಪಿಂಚಣಿದಾರ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು. ಬಳಿಕ ಆಯುಕ್ತ ವಿನುತ್‌ಕುಮಾರ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಅಧ್ಯಕ್ಷ ಷಡಕ್ಷರಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮಾ.31ರಿಂದ ವೈಭವದ ವೈರಮುಡಿ ಉತ್ಸವ

ಸರ್ಕಾರದಿಂದ 10 ಕೋಟಿ ರೂ. ಅನುದಾನ ಮಂಜೂರು



ಕೋತಿ ಹಿಡಿದು ಕಾಡಿಗೆ ಬಿಡಿ

ಮೇಲುಕೋಟೆಯಲ್ಲಿ ಮೂರು ಸಾವಿರಕ್ಕೂ ಅಧಿಕ ಕೋತಿಗಳಿದ್ದು ಭಕ್ತರಿಗೆ ತೊಂದರೆ ಕೊಡುತ್ತಿವೆ. ಅರಣ್ಯ ಇಲಾಖೆ ಅಧಿಕಾರಿಗಳ, ಸಾರ್ವಜನಿಕರ ಸಹಕಾರದೊಂದಿಗೆ ಕೋತಿಗಳನ್ನು ಹಿಡಿದು ನಾಗರಹೊಳೆ ಅಥವಾ ಬಂಡೀಪುರ ಕಾಡಿನಲ್ಲಿ ಬಿಡಿ. ಇದೇ ವೇಳೆ ಜಾತ್ರಾ ಅವಧಿಯಲ್ಲಿ ಬಸವಗಳು ಹಾಗೂ ಆಡುಗಳಿಂದಲೂ ಸಹ ಭಕ್ತರಿಗೆ ತೊಂದರೆಯಾಗದಂತೆ ಕ್ರಮ ವಹಿಸಿ. ವೈರಮುಡಿ ಕಿರೀಟ ತರುವ ಸ್ಥಾನೀಕರ ನಡುವಿನ ವಿವಾದದ ವಿಚಾರದಲ್ಲಿ ನಾನು ಮಧ್ಯೆ ಬರುವುದಿಲ್ಲ. ದೇವಾಲಯದ ನೀತಿ ನಿಯಮ ಹಾಗೂ ಕಾನೂನಿನಂತೆ ಕ್ರಮವಹಿಸಿ ಮೊದಲೇ ತೀರ್ಮಾನ ಮಾಡಿ ಎಂದು ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡಿದ್ದೇನೆ. ಕಳೆದ ವರ್ಷ ಯಾವುದೇ ಗೊಂದಲ ಇರಲಿಲ್ಲ. ಈ ವರ್ಷವೂ ಇರುವುದಿಲ್ಲ. ದರ್ಶನ್ ಪುಟ್ಟಣ್ಣಯ್ಯ



ಮೇಲುಕೋಟೆಯಲ್ಲಿ ವೈರಮುಡಿ ಪೂರ್ವಸಿದ್ಧತಾ ಸಭೆಯಲ್ಲಿ ಕೈಂಕರ್ಯಪರರ ಸಲಹೆ ಪಡೆದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿದರು.

ಮೇಲುಕೋಟೆ, ಮಾ.25– ವಿಶ್ವವಿಖ್ಯಾತ ಮೇಲುಕೋಟೆ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವವನ್ನು ವೈಭವಯುತವಾಗಿ ಆಚರಿಸಲು ಸರ್ಕಾರ 10 ಕೋಟಿ ರೂ. ಅನುದಾನ ಮಂಜೂರು ಮಾಡಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಮೇಲುಕೋಟೆಯಲ್ಲಿ ಕೈಂಕರ್ಯಪರರ ಸಲಹೆ ಪಡೆದು ಅಧಿಕಾರಿಗಳ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು ವೈರಮುಡಿ ಬ್ರಹ್ಮೋತ್ಸವ ಕಾರ್ಯಕ್ರಮಗಳು ಮಾ.31ರ ಮೊದಲ ತೆಪ್ಪೋತ್ಸವದಿಂದ ಆರಂಭವಾಗಿ ಏಪ್ರಿಲ್ 14ರವರೆಗೆ ನಡೆಯಲಿದೆ. ಬ್ರಹ್ಮೋತ್ಸವದ ವಿಶೇಷ ಆಚರಣೆಗಾಗಿ ಸರ್ಕಾರ 10 ಕೋಟಿ ರೂ. ಅನುದಾನ ನೀಡಿದೆ. ಕಳೆದ ವರ್ಷವೂ ಜಾತ್ರೆಗೆ ಅನುದಾನ ಬಿಡುಗಡೆಯಾಗಿತ್ತು. ಜಾತ್ರಾ ಮಹೋತ್ಸವ ವ್ಯವಸ್ಥೆಗೆ 1.50 ಕೋಟಿ ರೂ. ಮಾತ್ರ ಬಳಸಿ ಉಳಿದ ಅನುದಾನವನ್ನು ಮೂಲ ಸೌಕರ್ಯ ಅಭಿವೃದ್ಧಿಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ ಎಂದರು.

ದಿವ್ಯ ಕ್ಷೇತ್ರದ ಅಭಿವೃದ್ಧಿಗೆ ದಾನಿಗಳು ಸಹ ಮುಂದೆ ಬಂದಿದ್ದಾರೆ. ಮೇಲುಕೋಟೆ ಅಭಿವೃದ್ಧಿಗೆ ಈಗಾಗಲೇ ಯೋಜನೆ ಸಿದ್ಧಪಡಿಸಲಾಗಿದೆ. ಜಾತ್ರಾ ಮಹೋತ್ಸವ ಮುಗಿಯುತ್ತಿದ್ದಂತೆ ಮತ್ತೊಮ್ಮೆ ಕೈಂಕರ್ಯ ಪರರ ಸಭೆ ಕರೆದು ಯೋಜನೆಯ ರೂಪುರೇಷೆ ನಿಮ್ಮ ಮುಂದಿಟ್ಟು ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸಲಾಗುತ್ತದೆ ಎಂದು ಅವರು ಹೇಳಿದರು.

ಕಳೆದ ವರ್ಷ ವೈರಮುಡಿ ಹಾಗೂ ಇತರ ಉತ್ಸವಗಳಲ್ಲಿ ನಾನೂ ಸಾಮಾನ್ಯ ಭಕ್ತನಂತೆ ಭಾಗವಹಿಸಿದ್ದೆ. ವೈರಮುಡಿ ಹಾಗೂ ರಥೋತ್ಸವ ವೇಳೆ ನೂಕು ನುಗ್ಗಲು ನಿಯಂತ್ರಿಸಲು ಪೊಲೀಸರು ಅಗತ್ಯ ಕ್ರಮ ಕೈಗೊಳ್ಳಬೇಕು. ಜನಜಂಗುಳಿ ಇರುವ ಕಡೆ ಹೆಚ್ಚು ಪೊಲೀಸರನ್ನು ನಿಯೋಜಿಸಬೇಕು, ರಾಜಬೀದಿಯಲ್ಲಿ ತೆರೆದ ಚರಂಡಿಗಳಿದ್ದು ವೈರಮುಡಿ ದರ್ಶನದ ವೇಳೆ ಭಕ್ತರು ಚರಂಡಿಯಲ್ಲಿ ಬೀಳುತ್ತಾರೆ. ನಾನೂ ಸಹ ಕಳೆದ ವರ್ಷ ಚರಂಡಿಯಲ್ಲಿ ಬಿದ್ದಿದ್ದೆ. ನನ್ನ ವಾಚ್ ಸಹ ಕಳೆದು ಹೋಗಿತ್ತು ಈ ವರ್ಷ ಇಂತಹ ಅವ್ಯವಸ್ಥೆಗಳು ಮರುಕಳಿಸಬಾರದು ಎಂದರು.

ಉತ್ಸವ ಬೀದಿಗಳಲ್ಲಿರುವ ತೆರೆದ ಚರಂಡಿಗಳ ಮೇಲ್ಭಾಗ ತಾತ್ಕಾಲಿಕವಾಗಿ ಮುಚ್ಚುವ ಕೆಲಸವನ್ನು ಗ್ರಾಮ ಪಂಚಾಯಿತಿ ಮತ್ತು ನಿರ್ಮಿತಿ ಕೇಂದ್ರ ಮಾ.31ರೊಳಗೆ ಮಾಡಬೇಕು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಜಿಲ್ಲಾ ಕೇಂದ್ರ ಮತ್ತು ಇತರ ನಗರಗಳಿಂದ ಕಳೆದ ವರ್ಷಕ್ಕಿಂತ ಹೆಚ್ಚು ವಿಶೇಷ ಬಸ್ ವ್ಯವಸ್ಥೆ ಮಾಡಬೇಕು ಕಲ್ಯಾಣಿಯಲ್ಲಿ ಸ್ನಾನ ಮಾಡುವ ಭಕ್ತರ ಸುರಕ್ಷತೆಗಾಗಿ ಎರಡು ಮೆಟ್ಟಿಲು ನಂತರ ನಿಯಂತ್ರಣ ಬಲೆ ಅಳವಡಿಸಿ ಎಂದರು.

ಸಭೆಯಲ್ಲಿ ಪಾಂಡವಪುರ ತಹಸೀಲ್ದಾರ್ ಸಂತೋಷ್, ಇಒ ಲೋಕೇಶ್ ಮೂರ್ತಿ ದೇವಾಲಯದ ಇಒ ಶೀಲಾ ಗ್ರಾಪಂ ಅಧ್ಯಕ್ಷೆ ಮಣಿ ಮುಗನ್, ಉಪಾಧ್ಯಕ್ಷ ಜಿ.ಕೆ ಕುಮಾರ್, ಪಾರುಪತ್ತೇಗಾರರು, ಸ್ಥಾನೀಕರಾದ ಶ್ರೀನಿವಾಸ ನರಸಿಂಹನ್ ಗುರೂಜಿ, ಪರಿಚಾರಕ ಹಾಗೂ ಪಾರುಪತ್ತೇಗಾರ್ ಪಾರ್ಥಸಾರಥಿ ಅರ್ಚಕಾದ ಬಿ.ವಿ.ಆನಂದಾಳ್ವಾರ್, ವರದರಾಜ ಭಟ್ಟರ್, ಸ್ಥಾನೀಕರಾದ ತಿರುನಾರಾಯಣ ಅಯ್ಯಂಗಾರ್, ಕರಗಂ ರಂಗಪ್ರಿಯ ಸಂಪತ್ ಕುಮಾರನ್ ಪ್ರಸನ್ನ ಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು

ತೊರೆಬೊಮ್ಮನಹಳ್ಳಿ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಭಾರತೀನಗರ, ಮಾ.25– ಇಲ್ಲಿಗೆ ಸಮೀಪದ ತೊರೆಬೊಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಸುಲೋಚನ, ಉಪಾಧ್ಯಕ್ಷರಾಗಿ ಟಿ.ನಂಜುಂಡೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಹೊನ್ನಾಯಕನಹಳ್ಳಿ ಸುಲೋಚನ, ಉಪಾಧ್ಯಕ್ಷ ಸ್ಥಾನಕ್ಕೆ ತೊರೆಬೊಮ್ಮನಹಳ್ಳಿ ಟಿ.ನಂಜುಂಡೇಗೌಡ ಹೊರತು ಪಡಿಸಿ ಬೇರ್‍ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಗೊಳಿಸಲಾಗಿದೆ ಎಂದು ಚುನಾವಣಾಧಿಕಾರಿ ಸುಧಾಕರ್ ಆದೇಶ ಹೊರಡಿಸಿದ್ದಾರೆ.

ಈ ಸಂದರ್ಭದಲ್ಲಿ ಶಾಸಕ ಕೆ.ಎಂ.ಉದಯ್ ಅವರ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾಗಿ ಆಯ್ಕೆಗೊಂಡ ಅಧ್ಯಕ್ಷ–ಉಪಾಧ್ಯಕ್ಷ ಮತ್ತು ನಿರ್ದೇಶಕರನ್ನು ಅಭಿನಂದಿಸಿ ಗೌರವಿಸಲಾಯಿತು.

ನಿರ್ದೇಶಕರಾದ ತೊರೆಬೊಮ್ಮನಹಳ್ಳಿ ಲಕ್ಷ್ಮಮ್ಮ, ಹೊನ್ನಾಯಕನಹಳ್ಳಿ ಎಚ್.ಪಿ.ನಾಗೇಶ್, ಮುತ್ತುರಾಜು, ಕೃಷ್ಣ, ಶಿವಮಾದು, ಜೈಲಿಂಗಣ್ಣ ಉಪಸ್ಥಿತರಿದ್ದರು.

ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಗರ ಭರ್ಜರಿ ಗೆಲುವು



ಕೆ.ಆರ್.ಪೇಟೆ,ಮಾ.25– ತಾಲೂಕಿನ ಬೂಕನಕೆರೆ ಹೋಬಳಿಯ ಬಲ್ಲೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ 11 ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಬರೋಬ್ಬರಿ 8 ಸ್ಥಾನಗಳಲ್ಲಿ ಭರ್ಜರಿ ಜಯ ಸಾಧಿಸುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಬಿ.ಸಿ.ರಮೇಶ್, ಕಬ್ಬಲಗೆರೆಪುರ ಪುಟ್ಟಸ್ವಾಮೀಗೌಡ, ಎಂ.ಎಸ್.ಜಯರಾಮೇಗೌಡ, ಎಸ್.ಯೋಗ, ಬಿ.ವಿ.ಲಕ್ಷ್ಮೀನಾರಾಯಣ್, ಪವಿತ್ರ ಯಾಲಕ್ಕೀಗೌಡ, ನಾಗರಾಜು, ದೊಡ್ಡಾಡಿಗನಹಳ್ಳಿ ಕುಮಾರ್ ಭರ್ಜರಿ ಜಯ ಸಾಧಿಸಿದ್ದಾರೆ.

ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಬಿ.ಎಸ್.ಅರುಣ್‌ಕುಮಾರ್, ಕೆ.ಎಸ್.ಸತೀಶ್, ಲಲಿತಮ್ಮ ಗೆಲುವು ಸಾಧಿಸಿದ್ದಾರೆ.

ಈ ವೇಳೆ ವಿಜೇತರನ್ನು ಗ್ರಾಮಸ್ಥರು ಮತ್ತು ಸಂಘದಿಂದ ಅಭಿನಂದಿಸಲಾಯಿತು.

ಚಿಕ್ಕಾಡೆಯಲ್ಲಿ ಜೆಡಿಎಸ್ ಬೆಂಬಲಿತರ ಜಯಭೇರಿ



ವಿಜೇತರನ್ನು ಅಭಿನಂದಿಸಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು.

ಪಾಂಡವಪುರ, ಮಾ.25– ತಾಲೂಕಿನ ಚಿಕ್ಕಾಡೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 10 ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸುವ ಮೂಲಕ ಜೆಡಿಎಸ್ ಅಧಿಕಾರ ಚುಕ್ಕಾಣಿ ಹಿಡಿದರು.

ಸಂಘದ 12 ಮಂದಿ ನಿರ್ದೇಶಕ ಸ್ಥಾನದ ಪೈಕಿ ಶಂಕರನಾಯಕ ಎಂಬುವರು ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ 11 ಮಂದಿ ನಿರ್ದೇಶಕ ಸ್ಥಾನಕ್ಕೆ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ನಿರ್ದೇಶಕರಾದ ವಿಜಯೇಂದ್ರ–424, ಸಿ.ಎಂ.ಕಿರಣ್ ಕುಮಾರ್–500, ಸಿ.ಆರ್.ರಾಮು–503, ಸಿ.ಆರ್.ದೀಪಕ್–539, ಸಿ.ಎಲ್.ಅಶ್ವಿನಿ–513, ಡಿ.ಮಂಜುನಾಥ್–401, ಸಿ.ಜಿ.ಗೌತಮ್–519, ಸಿ.ಪಿ.ರವಿಕುಮಾರ್–364, ಡಿ.ಸಿ.ಲೋಹಿತ್–252, ಸಿ.ಬಿ.ಜಗದೀಶ್–380 ಹಾಗೂ ರೈತಸಂಘ–ಕಾಂಗ್ರೆಸ್ ಬೆಂಬಲಿತ ಡಿ.ಶಶಿಕಲಾ–410 ಮತಗಳನ್ನು ಪಡೆದು ಆಯ್ಕೆಯಾದರು.

ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಜೆಡಿಎಸ್ ನೂತನ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂಧಿಸಿ ಶುಭ ಹಾರೈಸಿದರು.

ಇಂದು ಜನ ಸಂಪರ್ಕ ಸಭೆ

ಮಂಡ್ಯ, ಮಾ.25– ಮಂಡ್ಯ ವಿಭಾಗ ವ್ಯಾಪ್ತಿಯಲ್ಲಿರುವ ಮಂಡ್ಯ ಉಪ ವಿಭಾಗ, ಕೊತ್ತತ್ತಿ ಉಪ ವಿಭಾಗ ಮತ್ತು ಕೆರಗೋಡು ಉಪ–ವಿಭಾಗದ ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳ ಕುರಿತು ಚರ್ಚಿಸಲು ವಿದ್ಯುತ್ ಗ್ರಾಹಕರ ಕುಂದು ಕೊರತೆ ವಿಚಾರಣೆಯ ಜನ ಸಂಪರ್ಕ ಸಭೆಯನ್ನು ಮಂಡ್ಯ ವೃತ್ತದ ಅಧೀಕ್ಷಕ ಇಂಜಿನಿಯರ್ (ವಿ), ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 26 ರಂದು ಮಂಡ್ಯ ವಿಭಾಗ ಕಛೇರಿ ಆವರಣದಲ್ಲಿ ಆಯೋಜಿಸಲಾಗಿದ್ದು ಮಂಡ್ಯ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಹಕರು ಹಾಗೂ ಸಾರ್ವಜನಿಕರು ಈ ಸಭೆಯಲ್ಲಿ ಭಾಗವಹಿಸಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಕಾರ್ಯನಿರ್ವಾಹಕ ಅಭಿಯಂತರರು ಈ ಮೂಲಕ ಪ್ರಕಟಣೆಯಲ್ಲಿ ಕೋರಿದ್ದಾರೆ.

'ಛತ್ರಿಗಳು' ಎಂದ ಡಿಕೆಶಿ ವಿರುದ್ಧ ಛತ್ರಿ ಹಿಡಿದು ಪ್ರತಿಭಟನೆ



ಮಂಡ್ಯದಲ್ಲಿ ಛತ್ರಿ ಹಿಡಿದು ಮೆರವಣಿಗೆ ಮೂಲಕ ಪ್ರತಿಭಟನೆ ನಡೆಸುತ್ತಿರುವುದು.

ಮಂಡ್ಯ,ಮಾ.25– ಕಾರ್ಯಕ್ರಮವೊಂದರಲ್ಲಿ 'ಮಂಡ್ಯ ಜನರು ಛತ್ರಿಗಳು' ಎಂದು ಅವಹೇಳನಕಾರಿ ಹೇಳಿಕೆ ನೀಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಕರ್ನಾಟಕ ರೈತ ಸಂಘಟನೆ ಏಕೀಕರಣ ಸಮಿತಿ, ಕನ್ನಡಪರ ಸಂಘಟನೆಗಳು ಹಾಗೂ ಮಂಡ್ಯ ಜಿಲ್ಲಾ ಹಿತರಕ್ಷಣಾ ಸಮಿತಿ ಕಾರ್ಯಕರ್ತರು ಛತ್ರಿ ಹಿಡಿದು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಜಮಾಯಿಸಿದ ನೂರಾರು ಮಂದಿ ಕಾರ್ಯಕರ್ತರು, ಪಕ್ಷಾತೀತವಾಗಿ, ಸಂಘಟನಾತೀತವಾಗಿ ಡಿ.ಕೆ.ಶಿವಕುಮಾರ್ ಹೇಳಿದ ಹೇಳಿಕೆಯನ್ನು ಖಂಡಿಸಿ ಛತ್ರಿ ಹಿಡಿದು ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು. ಬಂಡೆ ಎಂದೇ ಕರೆಯಲ್ಪಡುವ ಡಿಕೆಶಿ ವಿರುದ್ಧ ಬಂಡೆಯ ಆಕಾರದಲ್ಲಿದ್ದ ಕಲ್ಲುಗಳನ್ನು ಸುತ್ತಿಗೆ ಮೂಲಕ ಪುಡಿ ಪುಡಿ ಮಾಡಿ, ಶಿವಕುಮಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಜೊತೆಗೆ ಕೂಡಲೇ ಮಂಡ್ಯ ಜಿಲ್ಲೆಯ ಜನರ ಕ್ಷಮೆಯಾಚಿಸದಿದ್ದರೆ ಬೃಹತ್ ಮಟ್ಟದಲ್ಲಿ ಹೋರಾಟ ರೂಪಿಸುವ ಜೊತೆಗೆ ಮಂಡ್ಯ ಜಿಲ್ಲೆಯ ಯಾವುದೇ ಮೂಲೆಗೆ ಡಿ.ಕೆ.ಶಿವಕುಮಾರ್ ಬಂದರೂ ಘೇರಾವ್ ಹಾಕಿ ಕಪ್ಪು ಬಾವುಟ ಪ್ರದರ್ಶನ ಮಾಡುವುದಾಗಿ ಎಚ್ಚರಿಸಿದರು.

ಮಂಡ್ಯ ಜಿಲ್ಲೆ ಕಲೆ, ಸಾಹಿತ್ಯ, ಧಾರ್ಮಿಕ, ರಾಜಕೀಯ, ಸಿನಿಮಾ, ಹೋರಾಟ ಕ್ಷೇತ್ರಕ್ಕೆ ಹೆಸರಾದ ಜಿಲ್ಲೆ. ಪುತಿನ, ಕೆ.ಎಸ್.ನರಸಿಂಹಸ್ವಾಮಿ, ಹೆಚ್.ಕೆ.ವೀರಣ್ಣಗೌಡ, ಜಿ.ಮಾದೇಗೌಡ, ಎಸ್.ಎಂ.ಕೃಷ್ಣ, ಅಂಬರೀಷ್, ಕೆಎಸ್.ಪುಟ್ಟಣ್ಣಯ್ಯರಂತಹ ಮಹನೀಯರು ಮಂಡ್ಯ ಜಿಲ್ಲೆಯಲ್ಲಿ ಹುಟ್ಟಿ ದೇಶ ಮಟ್ಟದಲ್ಲಿ ಹೆಸರು ಮಾಡಿದವರು. ಜೊತೆಗೆ ಅನೇಕ ಐತಿಹಾಸಿಕ ಘಟನೆಗಳಿಗೆ ಮಂಡ್ಯ ಜಿಲ್ಲೆ ಸಾಕ್ಷಿಯಾಗಿದ್ದು, ಇಂತಹ ಜಿಲ್ಲೆಯ ಜನರನ್ನು ಛತ್ರಿಗಳು ಎಂದು ಸಂಭೋದಿಸಿರುವ ಡಿ.ಕೆ.ಶಿವಕುಮಾರ್‌ಗೆ ನಾಚಿಕೆಯಾಗಬೇಕೆಂದು ಕಿಡಿಕಾರಿದರು.

ಡಿಕೆಶಿ ಕೂಡಲೇ ಕ್ಷಮೆ ಕೇಳಿದರೆ ಹೃದಯವಂತ ಜನರಾದ ನಾವು ಅವರನ್ನು ಕ್ಷಮಿಸುತ್ತೇವೆ. ಉದಾರತೆಗೆ ಇನ್ನೊಂದು ಹೆಸರೇ ಮಂಡ್ಯ ಜಿಲ್ಲೆಯಾಗಿದೆ. 1999ರಲ್ಲಿ ಎಸ್.ಎಂ.ಕೃಷ್ಣ ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ ಎಂದು ತಿಳಿದಾಗ ಅಂದು ಅವರ ವಿರುದ್ಧ ಸ್ಪರ್ಧೆ ಮಾಡಲು ಪ್ರತಿಸ್ಪರ್ಧಿಗಳೇ ಹಿಂದೆ–ಮುಂದೆ ನೋಡಿದರು. ಅಂತಹ ಸೌಹಾರ್ಧತೆಗೆ ನಮ್ಮ ಜಿಲ್ಲೆ ಹೆಸರಾಗಿದೆ ಎಂದು ಹೇಳಿದರು.

ಮಂಡ್ಯ ಜಿಲ್ಲೆಯ ಜನ ಇಲ್ಲದಿದ್ದರೆ ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಯಾಗಲು ಸಾಧ್ಯವಾಗುತ್ತಿರಲಿಲ್ಲ. ಜಿಲ್ಲೆಯ ಜನರ ಮುಂದೆ ಚುನಾವಣೆ ಸಮಯದಲ್ಲಿ ಪೆನ್ನು–ಪೇಪರ್ ಕೊಡಿ ಎಂದು ಅಂಗಲಾಚಿದ್ದು ಇದೇ ಡಿಕೆಶಿ. ಈ ಜಿಲ್ಲೆಯ ಎಸ್.ಎಂ.ಕೃಷ್ಣ ಡಿಕೆಶಿರನ್ನು ಈ ಮಟ್ಟಕ್ಕೆ ಬೆಳೆಸಿದ್ದಾರೆ. ಇದೀಗ ಡಿಸಿಎಂ ಆಗಿ ಸಿಡಿ, ಹನಿಟ್ರ್ಯಾಪ್ ಇನ್ನಿತರೆ ಹಗರಣದಲ್ಲಿ ಸಿಲುಕಿದ್ದಾರೆ. ಜೊತೆಗೆ ಅಕ್ರಮ ಆಸ್ತಿ ಮಾಡಿ ತಿಹಾರ್ ಜೈಲಿಗೆ ಹೋಗಿ ಬಂದಿದ್ದಾರೆ. ಈ ರೀತಿಯ ಕೆಟ್ಟ ಚರಿತ್ರೆ ಹೊಂದಿರುವ ಡಿಕೆಶಿ ಕ್ಷಮೆಯಾಚಿಸದಿದ್ದರೆ ಉಗ್ರ ಹೋರಾಟ ಖಚಿತ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಶಂಭೂನಹಳ್ಳಿ ಸುರೇಶ್, ಬೋರೇಗೌಡ, ಇಂಡುವಾಳು ಚಂದ್ರಶೇಖರ್, ಕನ್ನಡಸೇನೆ ಮಂಜು, ಮಂಜೇಶ್‌ಗೌಡ, ಫಯಾಜ್ ಸೇರಿದಂತೆ ನೂರಾರು ಮಂದಿ ರೈತರು ಮತ್ತು ಕನ್ನಡಪರ ಸಂಘಟನೆ ಸದಸ್ಯರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಬಿಸಿಜಿ ಲಸಿಕೆ ಕಾರ್ಯಕ್ರಮ

ಸಾರ್ವಜನಿಕರು ಅಪನಂಬಿಕೆ ಪಡುವ ಅಗತ್ಯವಿಲ್ಲ ಎಂಬ ಸಂದೇಶ ರವಾನಿಸುವ ನಿಟ್ಟಿನಲ್ಲಿ ಸ್ವತಃ ಆರೋಗ್ಯ ಇಲಾಖೆ ನಿರ್ದೇಶಕಿ ತ್ರಿವೇಣಿ ಅವರು ಸೇರಿದಂತೆ ಕ್ಷಯ ರೋಗಿಗಳಿಗೆ ಚಿಕಿತ್ಸೆ ನೀಡುವ ವೈದ್ಯರು ಕಾರ್ಯಕ್ರಮದಲ್ಲಿ ಬಿಸಿಜಿ ಲಸಿಕೆ ಪಡೆದರು. ಕರ್ನಾಟಕ ಕ್ಷಯ ಮುಕ್ತ ಕಾರ್ಯತಂತ್ರದ ಭಾಗವಾಗಿ ಎಲ್ಲಾ ಕ್ಷಯರೋಗಿಗಳಿಗೆ ಸಾರ್ವತ್ರಿಕವಾಗಿ ಚಿಕಿತ್ಸೆ ದೊರಕಿಸುವುದು ಮತ್ತು ಶೂನ್ಯ ಕ್ಷಯ ಮರಣದ ಗುರಿ ಹಾಕಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯದಲ್ಲಿ 2024 ರ ಸಾಲಿನಲ್ಲಿ 20 ಲಕ್ಷಕ್ಕೂ ಹೆಚ್ಚು ಸಂಭಾವ್ಯ ಕ್ಷಯರೋಗಿಗಳ ಕಫ ಪರೀಕ್ಷೆಗಳನ್ನು ಮಾಡಲಾಗಿದೆ ಹಾಗೂ ಖಾಸಗಿ ವಲಯದಿಂದ 28122 ಮತ್ತು ಸಾರ್ವಜನಿಕ ವಲಯದಿಂದ 49865 ಒಟ್ಟು 77987 ಕ್ಷಯರೋಗಿಗಳನ್ನು ದೃಢಪಡಿಸಿ ಪತ್ತೆ ಹಚ್ಚಲಾಗಿದೆ. ಈ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಇಳಿಮುಖವಾಗಿರುತ್ತದೆ. ಇವರಲ್ಲಿ ಶೇ. 4.5ರಷ್ಟು ಔಷಧ ನಿರೋಧಕ ಕ್ಷಯರೋಗಿಗಳಾಗಿರುತ್ತಾರೆ.

ದೃಢಪಟ್ಟ ಎಲ್ಲಾ ಕ್ಷಯರೋಗಿಗಳಿಗೆ ಕನಿಷ್ಠ 6 ತಿಂಗಳ ಅವಧಿಯ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಕ್ಷಯ ರೋಗದಿಂದ ಉಂಟಾಗುವ ಮರಣ ಧರವನ್ನು ಶೇ 8% ರಿಂದ 6% ಇಳಿಸಲಾಗಿದೆ. ಇದುವರೆಗೂ 4787 ನಿಕ್ಷಯ್ ಮಿತ್ರರಿಂದ 98721 ಪೌಷ್ಠಿಕ ಆಹಾರದ ಕಿಟ್‌ಗಳನ್ನು ಕ್ಷಯರೋಗಿಗಳಿಗೆ ವಿತರಿಸಲಾಗಿದೆ.

ಆಡಳಿತಾತ್ಮಕ ಕಾರ್ಯಸಾಧ್ಯತೆಗಾಗಿ, ರಾಜ್ಯವನ್ನು 32 ಜಿಲ್ಲಾ ಟಿಬಿ ಕೇಂದ್ರಗಳಾಗಿ (ಡಿಟಿಸಿ) ವಿಂಗಡಿಸಲಾಗಿದೆ. 32 DTCಗಳನ್ನು 275 TB ಘಟಕಗಳಾಗಿ ವಿಂಗಡಿಸಲಾಗಿದೆ. ಪ್ರತಿ 2.5 ಲಕ್ಷ ಜನಸಂಖ್ಯೆಗೆ ಒಂದು ಕ್ಷಯ ಘಟಕ ಸ್ಥಾಪಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 1450 ಮೈಕ್ರೋಸ್ಕೋಪಿಕ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇದರ ಜೊತೆಗೆ ರಾಜ್ಯದಲ್ಲಿ 298 TrueNAT ಕೇಂದ್ರಗಳು ಹಾಗೂ 125 ಅಃಓಂಖಿ ಕೇಂದ್ರಗಳು ವಿವಿಧ ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಹುಡುಗಿಯರು ಹನಿಟ್ರ್ಯಾಪ್‌ಗೆ ಯತ್ನಿಸಿದ್ದರು

ನ್ಯಾಯಾಧೀಶರನ್ನು ಹನಿಟ್ರ್ಯಾಪ್ ಮಾಡಲಾಗಿದೆ ಎಂಬುದಾಗಿ ನಾನು ಹೇಳಿಲ್ಲ, ಎಲ್ಲ ಪಕ್ಷದ ನಾಯಕರ ಮೇಲೆ ಕಳಂಕ ತರಲು ಈ ರೀತಿ ಮಾಡಿದ್ದಾರೆಂದು ಹೇಳಿದ್ದೇನೆ. ನನ್ನ ಪತ್ರದ ಆಧಾರದ ಮೇಲೆ ಗೃಹ ಸಚಿವರು ಯಾವುದೇ ರೀತಿಯ ತನಿಖೆ ನಡೆಸುವುದು ಅವರಿಗೆ ಬಿಟ್ಟ ವಿಚಾರ ಎಂದರು. ಸಂಜೆ ಪರಮೇಶ್ವರ್ ಭೇಟಿ ನಂತರವೂ ಸುದ್ದಿಗಾರರೊಂದಿಗೆ ಮಾತನಾಡಿದ ರಾಜಣ್ಣ, ದೂರು ನೀಡಿದ್ದೇನೆ. ಅವರು, ಎಸ್‌ಐಟಿ ರಚನೆ ಮಾಡುತ್ತಾರೋ, ಇಲ್ಲವೆ ಎಡಿಜಿಪಿ ಶ್ರೇಣಿ ಅಧಿಕಾರಿಯಿಂದ ತನಿಖೆ ನಡೆಸುತ್ತಾರೋ ಅವರಿಗೆ ಬಿಟ್ಟ ವಿಚಾರ. ನಾನು ದೂರು ನೀಡುವುದಕ್ಕೂ ಮುನ್ನವೇ ಗೃಹ ಸಚಿವರು ತಮ್ಮ ಇಲಾಖೆಯಿಂದ ಒಂದಷ್ಟು ಮಾಹಿತಿ ಮತ್ತು ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಅವರು, ನನ್ನ ದೂರು ಮತ್ತು ತಮ್ಮಲ್ಲಿರುವ ದಾಖಲೆಗಳ ಸಮೇತ ಮುಖ್ಯಮಂತ್ರಿ ಬಳಿ ಸಮಾಲೋಚಿಸಿ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು. ಪಕ್ಷದ ವರಿಷ್ಠರನ್ನೂ ಭೇಟಿ ಮಾಡಿ ದೂರು ನೀಡಲಿದ್ದೇನೆ ಎಂದ ರಾಜಣ್ಣ, ಈಗಾಗಲೇ ಅವರಿಗೂ ಇದರ ಬಗ್ಗೆ ಒಂದಷ್ಟು ಮಾಹಿತಿಗಳಿವೆ ಎಂದು ತಿಳಿಸಿದರು.

ಪ್ರಮಾದದಿಂದ ಯುವತಿಗೆ ಗಂಭೀರ ಗಾಯ

ಮೈಕೈಗೆ ಹೆಚ್ಚು ಪೆಟ್ಟು ಬಿದ್ದಿರಲಿಲ್ಲ, ಆತ ಹೆಲ್ಮೆಟ್ ಧರಿಸಿದ್ದರೆ ಪ್ರಾಣ ಉಳಿಯುತ್ತಿತ್ತು ಎಂದು ಸ್ಥಳದಲ್ಲಿದ್ದವರು ಮಾತನಾಡಿಕೊಳ್ಳುತ್ತಿದ್ದರು. ಈ ಸಂಬಂಧ ವಿವಿಪುರಂ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ 2: ಕುಕ್ಕರಹಳ್ಳಿ ಕೆರೆ ಸಿಗ್ನಲ್ ಬಳಿ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿ ನೀರಿನ ಪೈಪ್‌ಲೈನ್ ಅಳವಡಿಕೆಗೆ ಪಾಲಿಕೆ ರಸ್ತೆ ಅಗೆದು ಹಳ್ಳ ಮಾಡಿತ್ತು. ಅದನ್ನು ಸರಿಯಾಗಿ ಮುಚ್ಚದಿರುವ ಕಾರಣ ಅಪಘಾತ ಸಂಭವಿಸಿದೆ. ಯುವತಿಯೊಬ್ಬಳು ತನ್ನ ತಾಯಿಯೊಂದಿಗೆ ಸ್ಕೂಟರ್‌ನಲ್ಲಿ ಹೋಗುವಾಗ ಈ ಹಳ್ಳ ನೋಡಿ ಆತಂಕದಿಂದ ವಾಹನವನ್ನು ದಿಢೀರ್ ಎಡಕ್ಕೆ ತಿರುಗಿಸಿ, ನಿಲ್ಲಿಸಿದ್ದಾಳೆ. ಈ ವೇಳೆ ಬೈಕ್ ಸವಾರ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದರಿಂದ ಯುವತಿ ಹಾಗೂ ಆಕೆಯ ತಾಯಿ ನೆಲಕ್ಕುರುಳಿದ್ದಾರೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡ ಯುವತಿಯನ್ನು ಆಸ್ಪತ್ರೆಗೆ ದಾಖಲಿಸಿದ್ದು, ಆಕೆಯ ತಾಯಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಘಟನೆ 3: ಸಾರಿಗೆ ಸಂಸ್ಥೆ ಉದ್ಯೋಗಿ ಸೌಮ್ಯ(31) ಅವರು ಕರ್ತವ್ಯ ಮುಗಿಸಿಕೊಂಡು ಬನ್ನಿಮಂಟಪ ಡಿಪೋದಿಂದ ಬೋಗಾದಿಯಲ್ಲಿರುವ ಮನೆಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ಹೈವೆ ವೃತ್ತದ ಬಳಿ ವೇಗವಾಗಿ ಬಂದ ಬುಲೆಟ್ ಬೈಕ್ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಸೌಮ್ಯ ಸ್ಕೂಟರ್‌ನೊಂದಿಗೆ ಉರುಳಿಬಿದ್ದ ಪರಿಣಾಮ ಅವರ ಕಾಲಿಗೆ ತೀವ್ರ ಪೆಟ್ಟಾಗಿದ್ದು, ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಬುಲೆಟ್ ಸವಾರನಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದಾನೆ. ಈ ಸಂಬಂಧ ನರಸಿಂಹರಾಜ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕ್ಯೂಸೆಕ್ ನೀರು

ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಾಂತ್ರಿಕ ದೋಷದ ನೆಪ ಹೇಳಿ ಎರಡು ರಾತ್ರಿ ಒಂದು ಹಗಲು ಕದ್ದು ಮುಚ್ಚಿ ತಮಿಳುನಾಡಿಗೆ ನೀರು ಬಿಟ್ಟಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಅನುಮಾನ ವ್ಯಕ್ತವಾಗಿದ್ದು, ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆಯ 5ನೇ ಗೇಟ್‌ನಿಂದ ನಿರಂತರವಾಗಿ ಮೂರು ದಿನ, ತಮಿಳುನಾಡಿಗೆ ನೀರು ಹರಿದಿದೆ ಎನ್ನಲಾಗಿದೆ. ಇದೀಗ ತಾಂತ್ರಿಕ ತೊಂದರೆಯನ್ನು ಸರಿಪಡಿಸಿ ಗೇಟ್ ಬಂದ್ ಮಾಡಿರುವುದಾಗಿ ನೀರಾವರಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಮೂರು ದಿನಗಳಿಂದ ಕೆಆರ್‌ಎಸ್ ಅಣೆಕಟ್ಟೆ ಕೆಳಭಾಗದ ಕಾವೇರಿ ನದಿ ನೀರಿನ ಮಟ್ಟದಲ್ಲಿ ಏಕಾಏಕಿ ಏರಿಕೆಯಾದ ಹಿನ್ನೆಲೆಯಲ್ಲಿ ಈ ಬಗ್ಗೆ ಪ್ರಶ್ನೆ ಮಾಡಿದ ರೈತರಿಗೆ ನೀರಾವರಿ ಅಧಿಕಾರಿಗಳಿಂದ ಹಾರಿಕೆಯ ಉತ್ತರ ದೊರೆತಿದೆ. ಅಣೆಕಟ್ಟೆಯಿಂದ ಸುಮಾರು 5 ಸಾವಿರ ಕ್ಯೂಸೆಕ್ ನೀರು ಹೊರ ಹೋಗಿರುವುದಾಗಿ ತಿಳಿದು ಬಂದಿದೆ. ಸಮಸ್ಯೆಗಳ ನೆಪ ಮಾಡಿಕೊಂಡು ತಮಿಳುನಾಡಿಗೆ ನೀರು ಬಿಡಲಾಗಿದೆಯೇ ಎಂಬ ಅನುಮಾನ ಸಹ ಮೂಡಿದೆ.

ಮಾಹಿತಿ ತಿಳಿದ ರೈತರು ಅಧಿಕಾರಿಗಳ ತರಾಟೆಗೆ ತೆಗೆದುಕೊಂಡ ಬಳಿಕ ಗೇಟ್ ಬಂದ್ ಮಾಡಿರುವ ನೀರಾವರಿ ಇಲಾಖೆ ಅಧಿಕಾರಿಗಳು, ತಾಂತ್ರಿಕ ದೋಷದಿಂದ ಗೇಟ್ ತೆರೆದುಕೊಂಡಿದ್ದು, ಹಾಗಾಗಿ ನೀರು ಹೋಗಿದೆ ಎಂದು ಸಬೂಬು ಹೇಳುತ್ತಿರುವುದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿದೆ. ಕಳೆದ ಜೂನ್‌ನಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾದ ಪರಿಣಾಮ ಕೆಆರ್‌ಎಸ್ ಅಣೆಕಟ್ಟೆ ಸಂಪೂರ್ಣ ಭರ್ತಿಯಾಗಿತ್ತು. ಮುಂಗಾರು ಬೆಳೆಯ ನಂತರ ಬೇಸಿಗೆ ಬೆಳೆಗೂ ಕಟ್ಟು ಪದ್ದತಿಯಲ್ಲಿ ನೀರು ಹರಿಸುವುದಾಗಿ ಸರ್ಕಾರ ಹೇಳಿ, ಬೇಸಿಗೆ ಹಂಗಾಮು ಬೆಳೆ ಬೆಳೆದಿದ್ದು, ಈ ರೀತಿ ನೀರು ಬಿಟ್ಟರೆ ನಮ್ಮ ಪರಿಸ್ಥಿತಿ ಏನೆಂಬುದು ರೈತರ ಪ್ರಶ್ನೆಯಾಗಿದೆ.

ಕೆಆರ್‌ಎಸ್ ಜಲಾಶಯದಲ್ಲಿ ಇದೀಗ 106.48 ಅಡಿ ನೀರು ಸಂಗ್ರಹವಿದ್ದು, ಒಳ ಹರಿವು ಬರೀ 156 ಕ್ಯೂಸೆಕ್. ಜಲಾಶಯದಿಂದ ನಾಲೆ ಮತ್ತು ನದಿಗೆ 5017 ಕ್ಯೂಸೆಕ್ ನೀರು ಹೊರ ಹೋಗುತ್ತಿದೆ. ಸರ್ಕಾರ ಮತ್ತು ನೀರಾವರಿ ಇಲಾಖೆ ಅಧಿಕಾರಿಗಳ ಈ ಕಣ್ಣಾಮುಚ್ಚಾಲೆ ಆಟದಿಂದ ತಮಿಳುನಾಡಿಗೆ ನೀರು ಹರಿಸಲಾಗಿತ್ತೆ ಎಂಬುದು ಮಂಡ್ಯ ಜನತೆ ಪ್ರಶ್ನೆಯಾಗಿದ್ದು, ಮುಂದೆ ಇಂತಹ ಘಟನೆ ನಡೆಯದಂತೆ ಕ್ರಮ ವಹಿಸದಿದ್ದರೆ ಹೋರಾಟ ಮಾಡುವ ಎಚ್ಚರಿಕೆಯನ್ನು ರೈತ ಮುಖಂಡರು ನೀಡಿದ್ದಾರೆ.

ಅನೈತಿಕ ಚಟುವಟಿಕೆ ತಾಣವಾದ ವಿಜಯನಗರ ಪಾರ್ಕ್

- ಅಪ್ರಾಪ್ತ ವಿದ್ಯಾರ್ಥಿನಿಯರು, ಯುವಕರ ಅಸಭ್ಯ ವರ್ತನೆ
- ಯುವ ಜೋಡಿಗಳ ಲೀಲೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸುವ ಪುಂಡರು
- ಆಕ್ಷೇಪಿಸಿದ ಸ್ಥಳೀಯರಿಗೆ ಬೆದರಿಕೆ ಹಾಕುವ ಪೋಕರಿಗಳು
- ಸ್ಥಳೀಯರಲ್ಲಿ ಬಾಲಕಿಯರ ಜೀವನ ಹಾಳು ಮಾಡುವ ಸಂಚಿನ ಸಂಶಯ





ಪೊಲೀಸ್ ಗಸ್ತು ಹೆಚ್ಚಿಸಿ

ಪಾರ್ಕ್‌ಗೆ ಪ್ರತಿದಿನ ಬೆಳಗ್ಗೆ ಸಮವಸ್ತ್ರದಲ್ಲೇ ಇರುವ ವಿದ್ಯಾರ್ಥಿನಿಯರನ್ನು ಕೆಲವು ಯುವಕರು ಕರೆತರುತ್ತಾರೆ. ಅಸಭ್ಯವಾಗಿ ವರ್ತಿಸುತ್ತಾರೆ. ಪಾರ್ಕ್‌ಗೆ ಹೋಗಲು ಬೇಸರವಾಗುತ್ತದೆ. ಕೆಲ ಯುವ ಜೋಡಿಗಳ ಅಸಭ್ಯ ವರ್ತನೆ ನೋಡಲೆಂದು, ವಿಡಿಯೋ ಮಾಡಿಕೊಳ್ಳಲು ಪುಂಡ–ಪೋಕರಿಗಳು ಬರುತ್ತಾರೆ. ಇದು ಯುವತಿಯರ ಭವಿಷ್ಯ ಹಾಳು ಮಾಡುವ ಮುನ್ಸೂಚನೆ ಎನಿಸಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಗಸ್ತು ಹೆಚ್ಚಿಸಬೇಕು. ಮುಲಾಜಿಲ್ಲದೆ ಯಾವುದೇ ಪಾರ್ಕ್‌ನಲ್ಲಿ ಅಸಭ್ಯವಾಗಿ ವರ್ತಿಸುವ ಯುವ ಜೋಡಿಗಳ ವಿರುದ್ಧ ಕ್ರಮ ಕೈಗೊಂಡು, ಅವರ ಪೋಷಕರ ಗಮನಕ್ಕೆ ತರಬೇಕು.

- ಅಶ್ವಿನಿ, ಸ್ಥಳೀಯ ನಿವಾಸಿ

ಮೈಸೂರು, ಮಾ.25(ಎಂಟಿವೈ)– ವಾಯುವಿಹಾರ ಹಾಗೂ ಮಕ್ಕಳಿಗೆ ಆಟವಾಡುವ ತಾಣವಾಗಬೇಕಾಗಿದ್ದ ಮೈಸೂರಿನ ವಿಜಯನಗರದ ಒಂದನೇ ಹಂತದಲ್ಲಿರುವ ಉದ್ಯಾನವನ ಅನೈತಿಕ ಚಟುವಟಿಕೆಗಳ ತಾಣವಾಗಿದೆ.

ಮೈಸೂರು ಮಹಾನಗರ ಪಾಲಿಕೆಯ 20ನೇ ವಾರ್ಡ್ ವ್ಯಾಪ್ತಿಗೆ ಬರುವ ವಿಜಯನಗರದ ಒಂದನೇ ಹಂತ ಕಾಳಿದಾಸ ರಸ್ತೆ, ಜನರಲ್ ತಿಮ್ಮಯ್ಯ ರಸ್ತೆ ಹಾಗೂ ಡಾ.ಎಂ.ಹೆಚ್.ಅಂಬರೀಶ್ ರಸ್ತೆಗೆ ಹೊಂದಿಕೊಂಡಿರುವ ಉದ್ಯಾನವನ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದೆ. ಆದರೆ ಇಲ್ಲಿನ ಚಟುವಟಿಕೆಗಳು ಮಾತ್ರ ಅಸಹ್ಯ ತರಿಸುತ್ತಿದೆ. ಶಾಲಾ–ಕಾಲೇಜು ವಿದ್ಯಾರ್ಥಿನಿಯರೊಂದಿಗೆ ಈ ಪಾರ್ಕಿಗೆ ಬರುವ ಯುವಕರು ಯಾರ ಭಯವೂ ಇಲ್ಲದೆ ಅಸಭ್ಯವಾಗಿ ವರ್ತಿಸಲಾರಂಭಿಸುತ್ತಾರೆ. ಇದರಿಂದ ಮುಜುಗರಕ್ಕೀಡಾಗುತ್ತಿರುವ ಸ್ಥಳೀಯರು ಪಾರ್ಕ್ ಕಡೆ ತಲೆ ಹಾಕಲು ಚಿಂತಿಸುವಂತಾಗಿದೆ.

ಭವಿಷ್ಯ ಹಾಳು ಮಾಡಿಕೊಳ್ಳುತ್ತಿರುವ ವಿದ್ಯಾರ್ಥಿನಿಯರು: ಪ್ರತಿದಿನ 30ರಿಂದ 50 ಜೋಡಿಗಳು ಈ ಪಾರ್ಕ್‌ಗೆ ಬರುತ್ತವೆ. ಅವರಲ್ಲಿ ಬಹುತೇಕರು ವಿದ್ಯಾರ್ಥಿನಿಯರೇ ಆಗಿದ್ದಾರೆ. ಸಮವಸ್ತ್ರದಲ್ಲಿಯೇ ಪಾರ್ಕ್‌ಗೆ ಬರುವ ವಿದ್ಯಾರ್ಥಿಗಳು ಚೇಷ್ಟೆಗಳಲ್ಲಿ ತಲ್ಲೀನರಾಗಿರುತ್ತಾರೆ. ತರಗತಿಗೆ ಗೈರಾಗಿ ಪಾರ್ಕ್‌ಗೆ ಬರುವ ವಿದ್ಯಾರ್ಥಿನಿಯರು ಕ್ಷಣಿಕ ಆಸೆಗೆ ಬಲಿಯಾಗಿ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳ ಶಾಲಾ–ಕಾಲೇಜಿಗೆ ತೆರಳಿ ಹಾಜರಾತಿ ಪರಿಶೀಲಿಸಬೇಕು ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

ವಿಡಿಯೋ ಚಿತ್ರೀಕರಣ: ಪಾರ್ಕ್‌ನಲ್ಲಿ ಜೋಡಿಗಳು ಯಾರಿಗೂ ಹೆದರದೇ ಅಸಭ್ಯವಾಗಿ ವರ್ತಿಸುವುದನ್ನೇ ಬಂಡವಾಳ ಮಾಡಿಕೊಳ್ಳುತ್ತಿರುವ ಕೆಲ ಪುಂಡರ ಗ್ಯಾಂಗ್ ಪಾರ್ಕ್ ಹಾಗೂ ರಸ್ತೆ ಬದಿಯಲ್ಲಿದ್ದುಕೊಂಡೇ ರಾಸಲೀಲೆಯಲ್ಲಿ ತೊಡಗಿರುವ ಜೋಡಿಗಳ ವಿಡಿಯೋ ಚಿತ್ರೀಕರಣ ಮಾಡುತ್ತಾರೆ. ಕೆಲವರು ಬೇಕಂತಲೇ ಪಾರ್ಕ್ ಪಕ್ಕ ಕಾರು ನಿಲ್ಲಿಸಿಕೊಂಡು ಅಲ್ಲಿಂದಲೇ ಅಸಭ್ಯವಾಗಿ ನಡೆದುಕೊಳ್ಳುವ ಜೋಡಿಗಳ ಚಿತ್ರೀಕರಣ ಮಾಡಿಕೊಳ್ಳುತ್ತಿದ್ದಾರೆ. ಸಂಬಂಧಪಟ್ಟ ಪೊಲೀಸರು ಇತ್ತ ತಲೆಯೂ ಹಾಕದೆ ಇರುವುದರಿಂದ ಇವರುಗಳ ಆಟ ಜೋರಾಗಿ ನಡೆಯುತ್ತಿದೆ.

ಲಾಡ್ಜ್‌ಗೆ ದುಡ್ಡು ಕೊಡಿ: ಪಾರ್ಕ್‌ನಲ್ಲಿ ಅಸಭ್ಯವಾಗಿ ವರ್ತಿಸುವುದಕ್ಕೆ ಆಕ್ಷೇಪಿಸಿದ ಸ್ಥಳೀಯರಿಗೆ ಯುವತಿಯರನ್ನು ಕರೆತಂದಿದ್ದ ಕೆಲ ಪುಂಡ ಯುವಕರು 'ಪಾರ್ಕ್ ನಿಮ್ಮ ಸ್ವಂತ ಆಸ್ತಿಯಲ್ಲ. ಸಾರ್ವಜನಿಕರಿಗೆ ಸೇರಿದ್ದು. ನಮಗಿಷ್ಟ ಬಂದಂತೆ ನಾವಿರುತ್ತೇವೆ. ಕೇಳಲು ನಿಮಗೆ ಹಕ್ಕಿಲ್ಲ. ನೀವು ಲಾಡ್ಜ್‌ಗೆ ಹಣ ಕೊಡಿ, ನಾವು ಅಲ್ಲಿಗೆ ಹೋಗುತ್ತೇವೆ' ಎಂದು ಧಮ್ಕಿ ಹಾಕಿರುವುದರಿಂದ ಸ್ಥಳೀಯರು ಅಸಹಾಯಕರಾಗಿದ್ದಾರೆ.

ಬಿಯರ್ ಬಾಟಲಿ ಎಸೆತ: ಪಾರ್ಕ್‌ಗೆ ಬರದಂತೆ ಪುಂಡರಿಗೆ ಆಕ್ಷೇಪಿಸಿದ ಸ್ಥಳೀಯರ ಮನೆ ಬಾಗಿಲಿಗೆ ಪುಂಡರು ರಾತ್ರಿ ವೇಳೆ ಬಿಯರ್ ಬಾಟಲಿ ಎಸೆದು ಬೆದರಿಕೆ ಹಾಕಿದ್ದಾರೆ. ಈ ಘಟನೆಯಿಂದ ಸ್ಥಳೀಯರು ಆತಂಕಗೊಂಡು ಪಾರ್ಕ್‌ಗೆ ಬರುವ ಯುವ ಜೋಡಿ ಹಾಗೂ ಚಿತ್ರೀಕರಣ ಮಾಡಲು ಬರುವ ಪುಂಡರನ್ನು ಪ್ರಶ್ನಿಸಲು ಭಯ ಪಡುವಂತಾಗಿದೆ.

ಸಿಬ್ಬಂದಿಗೂ ಬೆದರಿಕೆ: ಪಾರ್ಕ್‌ನಲ್ಲಿ ಸ್ವಚ್ಛತಾ ಕೆಲಸ ಮಾಡುವ ಸಿಬ್ಬಂದಿಗೂ ಯುವ ಜೋಡಿಗಳು ಕೇರ್ ಮಾಡುತ್ತಿಲ್ಲ. ಪ್ರತಿದಿನ ಕಸ ಗುಡಿಸುವಾಗ ಬಳಸಿದ ಕಾಂಡೋಮ್, ಬಿಯರ್ ಬಾಟಲ್ ಸಿಗುತ್ತಿದ್ದು, ಮಹಿಳಾ ಸಿಬ್ಬಂದಿ ಮುಜುಗರದಿಂದಲೇ ಕೆಲಸ ಮಾಡುವಂತಾಗಿದೆ.

ಎಬಿವಿಪಿಯಿಂದ ಬಾಲಿಕಾ ಛಾತ್ರಾ ಪರ್ವಂ ಕಾರ್ಯಕ್ರಮ

ಮೈಸೂರು, ಮಾ.25– ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೈಸೂರು ವಿಭಾಗದ ವತಿಯಿಂದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಾಳೆ(ಮಾ.26) ಬೆಳಗ್ಗೆ 10.30ಕ್ಕೆ 'ಬಾಲಿಕಾ ಛಾತ್ರ ಪರ್ವಂ' ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ.

ನಿರೂಪಕಿ ಮುಮ್ತಾಜ್ ನೆಲ್ಯಾಡ್ಕ, ಹಾಸನದ ನವಕೀಸ್ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಪ್ರೊ.ರಾಜಲಕ್ಷ್ಮೀ, ಅಂತಾರಾಷ್ಟ್ರೀಯ ಖೋ–ಖೋ ಕ್ರೀಡಾಪಟು ಬಿ.ಚೈತ್ರಾ ಅತಿಥಿಗಳಾಗಿ ಭಾಗವಹಿಸಲಿದ್ದು, ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತ ವಿದ್ಯಾರ್ಥಿನಿ ಪ್ರಮುಖ್ ಸುಧಾ ಶೆಣೈ, ಕರ್ನಾಟಕ ದಕ್ಷಿಣ ಪ್ರಾಂತದ ಉಪಾಧ್ಯಕ್ಷೆ ಪ್ರೊ.ಹೆಚ್.ಎಂ.ನಿರ್ಮಲಾ, ವಿದ್ಯಾರ್ಥಿನಿ ಪ್ರಮುಖ್ ವಸಂತ ಇತರರು ಉಪಸ್ಥಿತರಿರಲಿದ್ದಾರೆ.

ಹುಟ್ಟುಹಬ್ಬದ ಶುಭಾಶಯ...



ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷರೂ ಆದ ಒಕ್ಕಲಿಗ ಸಮುದಾಯದ ಹಿರಿಯ ಮುಖಂಡ ವಿಕ್ರಾಂತ್ ಪಿ. ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಯುವ ಮುಖಂಡರು ಅವರನ್ನು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಬರಕ್ಕಿ ಬಂದಪ್ಪ, ಒಂಟಿಕೊಪ್ಪಲ್ ಗುರುರಾಜ್, ದತ್ತ, ರಾಜಕುಮಾರ್, ಭೈರವ ಗ್ರೂಪ್ ಮಾದೇವ, ಬರಕ್ಕಿ ಕಿಟ್ಟಪ್ಪ, ಕಂಡಕ್ಟರ್ ಮಾದೇವಣ್ಣ, ಕೊಪ್ಪಲ್ ದೀಪು, ಸೊಸೈಟಿ ರಾಜು, ಜವರೇಗೌಡ, ಶ್ಯಾಮಲ, ಆನಂದ್, ಕಾಳಬೋರಪ್ಪ, ಗಜ್ಜಪ್ಪನ್, ಮಾದೇವ, ಕೃಷ್ಣ, ಕಲಾಮಂದಿರ ರಮೇಶ್, ಮಾದಪ್ಪ, ಪ್ರದೀಪ್(ದೇವು) ಇತರರಿದ್ದಾರೆ.

ಸಂವಿಧಾನ ಬದಲಿಸುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಖಂಡಿಸಿ ಮೈಸೂರಲ್ಲಿ

ಕೃಷ್ಣರಾಜ, ಚಾಮರಾಜ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ

ಮೈಸೂರು,ಮಾ.25(ಜಿಎ)–ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂವಿಧಾನ ಬದಲಿಸುತ್ತೇವೆ ಎಂದು ನೀಡಿರುವ ಹೇಳಿಕೆಯನ್ನು ಖಂಡಿಸಿ ಮೈಸೂರಿನ ಕೃಷ್ಣರಾಜ ಮತ್ತು ಚಾಮರಾಜ ಕ್ಷೇತ್ರದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ಆದಿ ಚುಂಚನಗಿರಿ ರಸ್ತೆಯಲ್ಲಿರುವ ಅಶೋಕಪುರಂ ಪೊಲೀಸ್ ಠಾಣೆ ಮುಂಭಾಗವಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಿಜೆಪಿ ಮುಖಂಡರು, ಕಾರ್ಯಕರ್ತರು 'ದಲಿತ ವಿರೋಧಿ ಕಾಂಗ್ರೆಸ್‌ಗೆ ಧಿಕ್ಕಾರ', 'ಸಂವಿಧಾನ ವಿರೋಧಿ ಡಿ.ಕೆ.ಶಿವಕುಮಾರ್‌ಗೆ ಧಿಕ್ಕಾರ', 'ಕಾಂಗ್ರೆಸ್ ಹಠಾವೋ ಸಂವಿಧಾನ್ ಬಚಾವೋ', 'ಕಾಂಗ್ರೆಸ್ ಕೈನಿಂದ ಸಂವಿಧಾನ ರಕ್ಷಿಸಿ' ಎಂಬ ವಿವಿಧ ಪ್ಲೇಕಾರ್ಡ್ ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂವಿಧಾನ ಬದಲಿಸಿ ಮುಸ್ಲಿಂಮರಿಗೆ ಮೀಸಲಾತಿ ತರುತ್ತೇವೆ ಎಂದು ಸಂವಿಧಾನ ವಿರೋಧಿ ಹೇಳಿಕೆ ನೀಡಿದ್ದಾರೆ. ಸಂವಿಧಾನಕ್ಕಿಂತ ದೊಡ್ಡವರು ಯಾರೂ ಇಲ್ಲ. ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುತ್ತಿರುವರು ಧರ್ಮಧಾರಿತ ಹೇಳಿಕೆ ನೀಡಿರುವುದು ಖಂಡನೀಯ ಎಂದರು.

ಜಮ್ಮು ಕಾಶ್ಮೀರದಂತೆ ಕರ್ನಾಟಕವನ್ನು ಮಾಡುವ ಹುನ್ನಾರದಿಂದ ಈ ರೀತಿ ನಿರ್ಧರಿಸಿದ್ದಾರೆ. ಧರ್ಮಾಧಾರಿತ ಮೀಸಲಾತಿ ನೀಡಲು ಸಾಧ್ಯವಿಲ್ಲ. ಅದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಈಗಾಗಲೇ ಹನಿಟ್ರ್ಯಾಪ್ ಮೂಲಕ ಒಬ್ಬರನ್ನು ಸಿಲುಕಿಸಿರುವ ಆರೋಪ ಹೊತ್ತುಕೊಂಡಿದ್ದಾರೆ. ಈ ನಡುವೇ ಸಂವಿಧಾನ ಬದಲಿಸುತ್ತೇವೆ ಎಂದು ಹೇಳಿಕೆ ನೀಡಿರುವ ವಿರುದ್ಧ ಸುಮೊಟೋ ಕೇಸ್ ದಾಖಲಿಸಿ ಬಂಧಿಸಬೇಕು ಎಂದು ಆಗ್ರಹಿಸಿದರು.

ರಾಹುಲ್ ಗಾಂಧಿ ಸಂವಿಧಾನ ಪ್ರತಿಯನ್ನು ಜೇಬಿನಲ್ಲಿ ಇಟ್ಟುಕೊಂಡು ಓಡಾಡುತ್ತಿದ್ದಾರೆ. ಅದರೆ ಅವರದ್ದೇ ಪಕ್ಷ ಅಧ್ಯಕ್ಷ ಸಂವಿಧಾನವನ್ನು ಬದಲಿಸುತ್ತೇನೆ ಎಂದು ಹೇಳಿಕೆ ನೀಡುತ್ತಿದ್ದಾರೆ. ಹನಿಟ್ರ್ಯಾಪ್ ವಿಷಯವನ್ನು ಮರೆಮಾಚಲು ಸಂವಿಧಾನ ಬದಲಾವಣೆ ವಿಚಾರವನ್ನು ಇಟ್ಟಿದ್ದಾರೆ ಎಂದು ಆರೋಪಿಸಿದರು.

ಮತ್ತೊಂದೆಡೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ನೇತೃತ್ವದಲ್ಲಿ ಚಾಮರಾಜ ಕ್ಷೇತ್ರದ ಕಾರ್ಯಕರ್ತರು, ಮುಖಂಡರು ಪುರಭವನದ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪ್ರತಿಭಟನೆ ನಡೆಸಿ, ಡಿ.ಕೆ.ಶಿವಕುಮಾರ್ ಭಾವಚಿತ್ರವನ್ನು ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಕಾರಿನಲ್ಲಿ ಡಿ.ಕೆ.ಶಿವಕುಮಾರ್ ಪ್ರತಿಕೃತಿ ತಂದು ದಹನ ಮಾಡಲು ಯತ್ನಿಸಿದ ಸಂದರ್ಭದಲ್ಲಿ ಪೊಲೀಸರು ತಕ್ಷಣ ಪ್ರತಿಕೃತಿಯನ್ನು ವಶಪಡಿಸಿಕೊಂಡರು. ಈ ವೇಳೆ ಪೊಲೀಸರು ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು.

ನಂತರ ಎಲ್.ನಾಗೇಂದ್ರ ಮಾತನಾಡಿ, ಡಿ.ಕೆ.ಶಿವಕುಮಾರ್ ಹೇಳಿಕೆ ಖಂಡಿಸಿ, ಕರ್ನಾಟಕದ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಅಂಬೇಡ್ಕರ್ ವಿರೋಧಿಗಳ ವಿರುದ್ಧ ಬಿಜೆಪಿ ಪ್ರತಿಭಟನೆ ಮಾಡುತ್ತಿದೆ. ಕಾಂಗ್ರೆಸ್ ಮುಸ್ಲಿಂಮರಿಗೆ ಮೀಸಲಾತಿ ನೀಡಲು ಮುಂದಾಗಿದ್ದಾರೆ. ಆದರೆ ಜಾತಿಗೆ ಅನುಗುಣವಾಗಿ ಮೀಸಲಾತಿ ಮಾಡಲು ಸಾಧ್ಯವಿಲ್ಲ. ಮುಸ್ಲಿಂಮರ ತುಷ್ಟೀಕರಣಕ್ಕೆ ಮುಂದಾಗಿರುವ ಅವರು ಓಟಿಗಾಗಿ ಮಾತ್ರ ಈ ರೀತಿ ಮಾಡಲು ಮುಂದಾಗಿದ್ದಾರೆ. ಇದ್ದರಿಂದ ಕಾಂಗ್ರೆಸ್‌ನ ನಿಜವಾದ ಬಂಡವಾಳ ಬಹಿರಂಗವಾಗಿದೆ ಎಂದರು.

ಮಂಡ್ಯ ಜನರಿಗೆ ಛತ್ರಿಗಳು ಎಂದು ಹೇಳಿಕೆ ನೀಡಿದ್ದಾರೆ ಅಧಿಕಾರದ ಮದ ಹೆಚ್ಚಾಗಿ ಈ ರೀತಿ ಮಾಡುತ್ತಿದ್ದಾರೆ. ಕೂಡಲೇ ರಾಜೀನಾಮೆ ನೀಡಬೇಕು. ಕಾಂಗ್ರೆಸ್ ನಾಟಕದ ಬಣ್ಣ ಬದಲಾಗಿದೆ. ಡಿ.ಕೆ.ಶಿವಕುಮಾರ್ ಅವರು ರಾಜೀನಾಮೆ ನೀಡುವವರೆಗೂ ರಾಜ್ಯಾದ್ಯಂತ ಪ್ರತಿಭಟನೆ ನಡೆಯುತ್ತಲ್ಲೇ ಇರುತ್ತವೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಮಾಜಿ ಮೇಯರ್ ಶಿವಕುಮಾರ್, ಹೇಮಾನಂದೀಶ್, ಶೈಲೇಂದ್ರ, ಜೋಗಿ ಮಂಜು, ರಾಕೇಶ್, ಕಿರಣ್‌ಗೌಡ, ವಿನೋದ್ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂವಿಧಾನ ಬದಲಿಸುತ್ತೇವೆ ಎಂದು ನೀಡಿರುವ ಹೇಳಿಕೆಯನ್ನು ಖಂಡಿಸಿ ಮಂಗಳವಾರ ಮೈಸೂರಿನ ಕೃಷ್ಣರಾಜ, ಚಾಮರಾಜ ಕ್ಷೇತ್ರದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಓಲಾ, ಊಬರ್, ರ್‍ಯಾಪಿಡೋ ಕಮಿಷನ್ ಬಾಕಿ; ಲಾಗ್‌ಔಟ್ ಅಭಿಯಾನ

ಮೈಸೂರು, ಮಾ.25(ಎಂಟಿವೈ)– ಮೈಸೂರಲ್ಲಿ ಓಲಾ, ಊಬರ್ ಮತ್ತು ರ್‍ಯಾಪಿಡೋ ಕಂಪನಿಗಳು ನಿಗದಿತ ಕಮಿಷನ್ ನೀಡದೆ ಕಿರುಕುಳ ನೀಡುತ್ತಿರುವುದನ್ನು ವಿರೋಧಿಸಿ ನಾಳೆ(ಮಾ.26)ಯಿಂದ ಈ ಕಂಪನಿಗಳ ಆ್ಯಪ್‌ಗಳನ್ನು ಅನಿರ್ದಿಷ್ಟಾವಧಿಗೆ ಲಾಗ್‌ಔಟ್ ಅಭಿಯಾನ ನಡೆಸುವುದಾಗಿ ಅರಮನೆ ನಗರಿ ವಾಹನ ಚಾಲಕರ ಮತ್ತು ಕಾರ್ಮಿಕರ ಸಂಘದ ಅಧ್ಯಕ್ಷ ಮಹೇಶ್ ಮಸಿಯಪ್ಪ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಂಪನಿಗಳು ಸರ್ಕಾರ ಪ್ರತಿ ಕಿ.ಮೀಗೆ ನಿಗದಿಪಡಿಸಿರುವ ದರವನ್ನು ಚಾಲಕರಿಗೆ ನೀಡಿ ಅನ್ಯಾಯ ಮಾಡುತ್ತಿವೆ. ಇದು ಸರ್ಕಾರದ ನಿಯಮಗಳ ಉಲ್ಲಂಘನೆ ಮತ್ತು ಸಾರ್ವಜನಿಕರ ಹಾಗೂ ಚಾಲಕರ ಹಣದ ದುರುಪಯೋಗ ಆಗುತ್ತಿದೆ. ಖಾಸಗಿ ಕಂಪನಿಗಳ ಈ ಧೋರಣೆಯನ್ನು ಖಂಡಿಸಿ, ಸರ್ಕಾರ ನಿಗದಿಪಡಿಸಿರುವ ದರವನ್ನು ಚಾಲಕರಿಗೆ ನೀಡಬೇಕೆಂದು ಒತ್ತಾಯಿಸಿ ಈ ಅಭಿಯಾನ ಕೈಗೊಳ್ಳಲಾಗಿದೆ. ನಗರ ವ್ಯಾಪ್ತಿ ಬುಕಿಂಗ್ ಮ್ಯಾಪ್ ಕಡಿತಗೊಳಿಸಬೇಕು. ನಿಗದಿಗಿಂತ ಹೆಚ್ಚು ಕ್ಯಾಬ್ ಅಟ್ಯಾಚ್‌ಮೆಂಟ್ ಮಾಡುವುದನ್ನು ನಿಲ್ಲಿಸಬೇಕು. ಎಲ್ಲಾ ಚಾಲಕರಿಗೂ ಒಂದೇ ರೀತಿಯ ಆ್ಯಪ್ ನೀಡಬೇಕು. ಹೊರವಲಯದ ಪ್ರಯಾಣ ದರವನ್ನು ಹೆಚ್ಚು ಮಾಡಬೇಕು. ಪ್ರತಿ ಕಿ.ಮೀಗೆ ಸರ್ಕಾರ 24ರೂ. ದರ ನಿಗದಿಪಡಿಸಿದ್ದು, ಈ ಕಂಪನಿಗಳು ಅರ್ಧದಷ್ಟನ್ನೂ ನೀಡುತ್ತಿಲ್ಲ. ಹೀಗಾಗಿ ಖಾಸಗಿ ಕಂಪನಿಗಳ ಆ್ಯಪ್‌ಗಳನ್ನು ರದ್ದುಪಡಿಸಿ ಸರ್ಕಾರವೇ ಆ್ಯಪ್ ಸಿದ್ಧಪಡಿಸಿ ನೀಡಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ವಾಹನ ಚಾಲಕರಾದ ವಸಂತ, ರಘು, ಮಹೇಶ್, ಚಂದ್ರು ಇದ್ದರು.

ವಿಶ್ವ ಮಹಿಳಾ ದಿನಾಚರಣೆ


ಕರ್ನಾಟಕ ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದಿಂದ ಗಾಡಿಚೌಕ ಶಾಲೆಯಲ್ಲಿ ವಿಶ್ವ ಮಹಿಳಾ ದಿನ ಆಚರಿಸಲಾಯಿತು. ಡಿಡಿಪಿಐ ಜವರೇಗೌಡ, ನಿವೃತ್ತ ಡಿಡಿಪಿಐ ಮಲ್ಲೇಶ್ವರಿ, ಬಿಇಓ ಪ್ರಕಾಶ್, ಬಿಆರ್‌ಸಿ ಗೀತಾ, ಸಂಘದ ಅಧ್ಯಕ್ಷೆ ಲಲಿತಾ, ಪ್ರಧಾನ ಕಾರ್ಯದರ್ಶಿ ಅನುಕಲಾ, ಖಜಾಂಚಿ ಅನುಸೂಯ, ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಸೆಲ್ವಿಯಾ, ಜಿಲ್ಲಾ ಖಜಾಂಚಿ ವೀಣಾ, ನಾರಾಯಣ ಕ್ಲಿನಿಕ್‌ನ ಮಿಥುನ್, ಮ್ಯಾಜಿಕ್ ಬಸ್‌ನ ಮುಖ್ಯಸ್ಥ ವೆಂಕಟೇಶ್, ಶಿಕ್ಷಕರ ಸಂಘದಿಂದ ಸುಮತಿ, ಮಮತ, ಶ್ಯಾಮಲ, ರಾಧಾ, ಗೌರವಾಧ್ಯಕ್ಷೆ ಕಮಲಾಕ್ಷಿ, ಎಡಿಪಿಐ ಮಹದೇವಸ್ವಾಮಿ ಇತರರಿದ್ದರು.

ಎಲ್.ಜಿ.ಹಾವನೂರು ಜಯಂತಿ ಆಚರಣೆ


ಶ್ರೀ ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್ ವತಿಯಿಂದ ಕಚೇರಿಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷರಾದ ಎಲ್.ಜಿ.ಹಾವನೂರು ಜಯಂತಿಯನ್ನು ಆಚರಿಸಲಾಯಿತು. ಈ ವೇಳೆ ದ್ಯಾವಪ್ಪನಾಯಕ, ಪ್ರಭಾಕರ ಹುಣಸೂರು, ಲಾಯರ್ ಕುಮಾರ್, ಪಿ.ದೇವರಾಜ್ ಪಾಳೇಗಾರ, ಮಯೂರ, ರಂಗಸ್ವಾಮಿ, ರಾಜು ಮಾರ್ಕೆಟ್, ಸುರೇಶ್ ಕುಮಾರ್‌ಬೀಡು, ಪ್ರಭಾಕರ, ಉಷಾರಾಣಿ, ಹೇಮಾವತಿ, ಕಳಲೆ ಮಹೇಶ್, ರಾಜು, ಪ್ರತಾಪ್ ಮತ್ತಿತರರಿದ್ದರು.

ಡಿಸಿಎಂ ಡಿಕೆಶಿ ವಿರುದ್ಧ ವ್ಯವಸ್ಥಿತ ಷಡ್ಯಂತ್ರ

ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆರೋಪ

ಮೈಸೂರು, ಮಾ. 25–ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂವಿಧಾನ ತಿದ್ದುಪಡಿ ಬಗ್ಗೆ ಮಾತನಾಡಿರುವುದನ್ನು ಸಂವಿಧಾನ ಬದಲಾವಣೆ ಎಂದು ಗುಲ್ಲೆಬ್ಬಿಸುವ ವ್ಯವಸ್ಥಿತ ಷಡ್ಯಂತ್ರವನ್ನು ಬಿಜೆಪಿ ನಡೆಸುತ್ತಿದೆ. ಸಂವಿಧಾನ ಬದಲಿಸುವಂತಹ ಮನಸ್ಥಿತಿ ಬಿಜೆಪಿಗಿದೆಯೇ ಹೊರತು ಕಾಂಗ್ರೆಸ್‌ಗಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ ಎಂದು ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಂವಿಧಾನ ಜಾರಿಯಾದಾಗಿನಿಂದ ಇಲ್ಲಿಯವರೆಗೂ ಸಾಕಷ್ಟು ಬಾರಿ ತಿದ್ದುಪಡಿಯಾಗಿದೆ. ಅದನ್ನೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಲ್ಲೇಖಿಸಿದ್ದಾರೆ. ಮುಸ್ಲಿಂ ಮೀಸಲಾತಿಗಾಗಿ ಸಂವಿಧಾನಕ್ಕೆ ತಿದ್ದುಪಡಿ ಮಾಡಲಾಗುತ್ತದೆ ಎಂಬರ್ಥದಲ್ಲಿ ಅವರು ನೀಡಿರುವ ಹೇಳಿಕೆಯನ್ನು ಬಿಜೆಪಿ ಸೇರಿದಂತೆ ಕೆಲ ಪಕ್ಷಗಳು ತಪ್ಪಾಗಿ ಅರ್ಥೈಸಿ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸಿ ಸಮಾಜದ ಸಾಮರಸ್ಯ ಕೆಡಿಸಲು ಯತ್ನಿಸುತ್ತಿರುವುದು ಅಕ್ಷಮ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ.


ಕೆ.ವಿ.ಮಲ್ಲೇಶ್

ಬಿಜೆಪಿಯವರ ಆರೋಪ ನಿಜವೇ ಆದರೆ, ಪೂರ್ಣ ವಿಡಿಯೊವನ್ನು ಬಿಡುಗಡೆ ಮಾಡಲಿ. ಅದು ಬಿಟ್ಟು ಮಾತುಕತೆಯಲ್ಲಿ ಬರುವ ಒಂದು ತುಣುಕನ್ನಷ್ಟೇ ಪ್ರಸಾರ ಮಾಡಿ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸುವುದು ಸರಿಯಲ್ಲ. ಈ ಬಗ್ಗೆ ಕಾಂಗ್ರೆಸ್ ರಾಷ್ಟ್ರೀಯ ನಾಯಕರು ಸಂಪೂರ್ಣ ಮಾಹಿತಿ ಕಲೆ ಹಾಕಿದ್ದು, ಡಿ.ಕೆ.ಶಿವಕುಮಾರ್ ಅವರು ಸಂವಿಧಾನ ಬದಲಾವಣೆಯ ಮಾತನಾಡಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಕೇಂದ್ರದಿಂದ ರಾಜ್ಯಕ್ಕೆ ಆಗುತ್ತಿರುವ ಅನುದಾನದ ತಾರತಮ್ಯವನ್ನು ಬಿಜೆಪಿ ನಾಯಕರು ಸರಿಪಡಿಸಲಿ. ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಕೈಜೋಡಿಸುವ ಅಗತ್ಯವಿದೆ. ರಾಜಕಾರಣವೆಂದರೆ ಸಮಾಜದ ಸಾಮರಸ್ಯವನ್ನು ಕದಡುವುದಲ್ಲ. ದೇಶದ ಕೋಮು ಸೌಹಾರ್ದ ಕಾಪಾಡುವುದು ಬಿಜೆಪಿ ಸೇರಿದಂತೆ ಎಲ್ಲ ಪಕ್ಷಗಳ ಆದ್ಯ ಕರ್ತವ್ಯ ಎಂಬುದನ್ನು ಅರಿಯಬೇಕಿದೆ ಎಂದು ಮಲ್ಲೇಶ್ ಹೇಳಿದ್ದಾರೆ.

ಯುಗಾದಿ ಕಪ್ ಕ್ರಿಕೆಟ್ ಟೂರ್ನಮೆಂಟ್‌ಗೆ ಪ್ರತಾಪ್ ಸಿಂಹ ಚಾಲನೆ


ಟೀಂ ಮಂಜುನಾಥ್‌ಪುರ ವತಿಯಿಂದ ಆಯೋಜಿಸಿರುವ ಯುಗಾದಿ ಕಪ್ ಕ್ರಿಕೆಟ್ ಟೂರ್ನಮೆಂಟ್‌ನ ಮೊದಲ ಪಂದ್ಯಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ನಾಯಕ ಸಮುದಾಯದ ಹಿರಿಯ ಮುಖಂಡರಾದ ಟೆನಿಸ್ ಗೋಪಿ, ನಗರಪಾಲಿಕೆ ಮಾಜಿ ಸದಸ್ಯರಾದ ಸುಬ್ಬಯ್ಯ, ಗಿರೀಶ್ ಪ್ರಸಾದ್, ಚಾಮರಾಜ ಕ್ಷೇತ್ರದ ಮಾಜಿ ಅಧ್ಯಕ್ಷ ಸೋಮಶೇಖರ್‌ರಾಜ್, ಪರಮೇಶ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

ಮಾ.29ರಂದು ಶನೇಶ್ವರ ಮಹಾಯಾಗ

ಮೈಸೂರು, ಮಾ.25– ಮೈಸೂರಿನ ಕಲ್ಯಾಣಗಿರಿನಗರದಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಮಾ.29ರಂದು ಶನಿವಾರ ಬೆಳಿಗ್ಗೆ 9.30ಕ್ಕೆ ಅಮಾವಾಸ್ಯೆ ಪ್ರಯುಕ್ತ ಲೋಕಕಲ್ಯಾಣಾರ್ಥವಾಗಿ ವಿಶೇಷ ಶನೇಶ್ವರ ಮಹಾಯಾಗ ಅಘೋರಅಸ್ತ್ರ, ಉಗ್ರ ನರಸಿಂಹ, ಮಹಾ ಸುದರ್ಶನ, ನವಗ್ರಹ ಮತ್ತು ಮೃತ್ಯುಂಜಯ ಹೋಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ದಿನ ಶನಿಪರಮಾತ್ಮ ಕುಂಭ ರಾಶಿಯಿಂದ ಮೀನ ರಾಶಿಗೆ ಪ್ರವೇಶಿಸುವುದರಿಂದ ಮಕರ ರಾಶಿಗೆ ಸಾಡೆಸಾತಿ ಮುಕ್ತಾಯವಾಗಿ ಮೇಷ ರಾಶಿಗೆ ಪ್ರವೇಶವಾಗುತ್ತದೆ. ಕುಂಭ, ಮೀನ, ಮೇಷ ರಾಶಿಗೆ ಸಾಡೆಸಾತಿ ಶನಿದೋಷ ಇರುತ್ತದೆ. ಸಿಂಹ ರಾಶಿಯವರಿಗೆ ಅಷ್ಟಮ ಶನಿದೋಷ, ವೃಶ್ಚಿಕ ರಾಶಿಯವರಿಗೆ ಪಂಚಮ ಶನಿದೋಷ, ಧನಸ್ಸು ರಾಶಿಯವರಿಗೆ ಅರ್ಧಾಷ್ಟಮ ಶನಿದೋಷ ಇರುತ್ತದೆ ಎಂದು ದೇವಸ್ಥಾನದ ಸಂಸ್ಥಾಪಕ ಗಿರಿಧರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.9448614297 ಸಂಪರ್ಕಿಸಬಹುದು.


ಇಂಜಿನಿಯರಿಂಗ್‌ನಲ್ಲಿ ರ್‍ಯಾಂಕ್ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ 7ನೇ ಘಟಿಕೋತ್ಸವದಲ್ಲಿ ಕಂಪ್ಯೂಟರ್ ಇಂಜಿನಿಯರಿಂಗ್ ಎಂ.ಟೆಕ್ ವಿಭಾಗದಲ್ಲಿ ಅಕ್ಷರ ಆರ್., ಪ್ರಥಮ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಈಕೆ ನಂಜನಗೂಡು ಸರ್ಕಾರಿ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ಡಾ.ಕೆ.ಮಾಲತಿ ಮತ್ತು ರಾಮಕೃಷ್ಣ ದಂಪತಿ ಪುತ್ರಿ.

ಒಗ್ಗಟ್ಟಿನಿಂದ ಶ್ರಮಿಸಿದರೆ, ಶಿಕ್ಷಣದಲ್ಲಿ ಬದಲಾವಣೆ ಸಾಧ್ಯ

ಕಾರ್ಯಾಗಾರದಲ್ಲಿ ಕಾಲೇಜು ಶಿಕ್ಷಣ ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಬಿ.ಚಂದ್ರಶೇಖರ್ ಅಭಿಪ್ರಾಯ

ಮೈಸೂರು, ಮಾ.25(ಜಿಎ)–ಒಗ್ಗಟ್ಟಿನಿಂದ ಶ್ರಮಿಸಿದರೆ, ಶಿಕ್ಷಣದಲ್ಲಿ ಬದಲಾವಣೆ ತರಬಹುದು ಎಂದು ಕಾಲೇಜು ಶಿಕ್ಷಣ ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಬಿ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿ ಹಾಗೂ ಆಂತರಿಕ ಗುಣಮಟ್ಟ ಖಾತರಿ ಘಟಕದ(ಐಕ್ಯೂಎಸಿ) ವತಿಯಿಂದ ಆಯೋಜಿಸಿದ್ದ 'ಎನ್‌ಐಆರ್‌ಎಫ್ ರ್‍ಯಾಂಕಿಂಗ್: ಎ ಟೂಲ್ ಫಾರ್ ಸೆಲ್ಫ್ ಅಸೆಸ್‌ಮೆಂಟ್ ಅಂಡ್ ಕ್ವಾಲಿಟಿ ಇಂಪ್ರೂವ್‌ಮೆಂಟ್' ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಶಿಕ್ಷಕರು ಗುಣಮಟ್ಟದ ಶಿಕ್ಷಣ ನೀಡಿದರೆ ಮಾತ್ರ ಸದೃಢ ದೇಶ ನಿರ್ಮಾಣವಾಗಲಿದೆ. ಒಳ್ಳೆಯ ಹಾಗೂ ಗುಣಮಟ್ಟದ ಶಿಕ್ಷಕನಿಂದ ಮಾತ್ರ ವಿದ್ಯಾರ್ಥಿಗಳನ್ನು, ಒಳ್ಳೆಯ ವೈದ್ಯರನ್ನು, ಆಡಳಿತಗಾರರನ್ನು ಹಾಗೂ ರಾಜಕಾರಣಿಗಳನ್ನು ಸಮಾಜಕ್ಕೆ ನೀಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಶಿಕ್ಷಣವೆಂದರೆ ಪಠ್ಯದಲ್ಲಿರುವುದನ್ನು ಮಾತ್ರ ಓದಿಸಬಾರದು. ಮಕ್ಕಳಿಗೆ ಶಿಕ್ಷಣದ ಜತೆ ಜತೆಯಲ್ಲಿ ಅವರಿಗೆ ಮುಂದೆ ಅವಶ್ಯಕತೆ ಇರುವಂತಹ ಕೌಶಲಗಳನ್ನು ಕಲಿಸುವಂತಹ ಕೆಲಸವನ್ನು ಶಿಕ್ಷಕರು ಮಾಡಬೇಕು. ಇತ್ತೀಚಿನ ಯುಗದಲ್ಲಿ ಯಾರೂ ಅಂಕಪಟ್ಟಿಯಲ್ಲಿರುವ ಅಂಕಗಳನ್ನು ನೋಡುವುದಿಲ್ಲ. ಕೇವಲ ಕೌಶಲವನ್ನು ನೋಡುತ್ತಿದ್ದಾರೆ. ಹೀಗಾಗಿ ಶಿಕ್ಷಕರು ಪಠ್ಯದಲ್ಲಿರುವ ಪಾಠಗಳನ್ನು ಮಾತ್ರ ಕಲಿಸದೆ, ವಿದ್ಯಾರ್ಥಿಗಳ ಜೀವನಕ್ಕೆ ಬೇಕಾದ ಅಂಶಗಳನ್ನು ಕಲಿಸಬೇಕು ಎಂದು ತಿಳಿಸಿದರು.

ನ್ಯಾಕ್‌ನಲ್ಲಿರುವ ಮಾನದಂಡ ಹಾಗೂ ಎನ್‌ಐಆರ್‌ಎಫ್ ಮಾನದಂಡ ಎರಡು ಒಂದೇ ರೀತಿ ಇರುವುದರಿಂದ ಆಂತರಿಕ ಗುಣಮಟ್ಟ ಖಾತರಿ ಘಟಕದಿಂದ ಹೇಗೆ ಸಂಯೋಜಕರನ್ನು ನೇಮಿಸುತ್ತಾರೆ ಹಾಗೇ ಎನ್‌ಐಆರ್‌ಎಫ್‌ನಿಂದಲೂ ಸಂಯೋಜಕರನ್ನು ನೇಮಿಸಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ಎನ್.ಕೆ.ಸವಿತಾ, ಹಿರಿಯ ಪ್ರಾಧ್ಯಾಪಕ ಡಾ.ಎನ್.ಎಸ್.ಹರಿನಾರಾಯಣ, ಪ್ರೊ.ಎನ್.ನಾಗರಾಜ, ಐಕ್ಯೂಎಸಿ ನಿರ್ದೇಶಕ ಅಮೃತೇಶ್, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಕೆ.ಮಂಟೇಲಿಂಗು ಸೇರಿದಂತೆ ಇನ್ನಿತರರು ಹಾಜರಿದ್ದರು.


ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ 'ಎನ್‌ಐಆರ್‌ಎಫ್ ರ್‍ಯಾಂಕಿಂಗ್: ಎ ಟೂಲ್ ಫಾರ್ ಸೆಲ್ಫ್ ಅಸೆಸ್‌ಮೆಂಟ್ ಅಂಡ್ ಕ್ವಾಲಿಟಿ ಇಂಪ್ರೂವ್‌ಮೆಂಟ್' ಕುರಿತ ಕಾರ್ಯಾಗಾರವನ್ನು ಕಾಲೇಜು ಶಿಕ್ಷಣ ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಬಿ.ಚಂದ್ರಶೇಖರ್ ಉದ್ಘಾಟಿಸಿದರು.

ಇಂದು ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕ ವಿಷ್ಣುವರ್ಧನ್ ಫೋನ್–ಇನ್ ಕಾರ್ಯಕ್ರಮ



ಮೈಸೂರು: ಮೈಸೂರಿನ ಜೆಎಸ್‌ಎಸ್ ಕಾಲೇಜಿನಲ್ಲಿರುವ ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ ಸಮುದಾಯ ಬಾನುಲಿ ಕೇಂದ್ರವು ಮಾ.26ರಂದು ಬೆಳಗ್ಗೆ 11:30ರಿಂದ 12:30ರವರೆಗೆ ಸೈಬರ್ ಅಪರಾಧಗಳು ಮತ್ತು ಸೈಬರ್ ಸುರಕ್ಷತೆ ಕುರಿತು ಮೈಸೂರು ಜಿಲ್ಲೆಯ ಪೊಲೀಸ್ ಅಧೀಕ್ಷಕ ಎನ್.ವಿಷ್ಣುವರ್ಧನ ಅವರ ಜೊತೆ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾರ್ವಜನಿಕರು ಸೈಬರ್ ವಂಚನೆಗಳು, ವಂಚನೆಯಿಂದ ಪಾರಾಗುವ ಮುಂಜಾಗ್ರತೆಗಳು ಹಾಗೂ ವಂಚನೆಗೆ ಒಳಗಾದವರು ದೂರು ದಾಖಲಿಸುವ ನಿಯಮಗಳ ಕುರಿತು ಯಾವುದೇ ಪ್ರಶ್ನೆಗಳು ಅಥವಾ ಅನುಮಾನಗಳು ಇದ್ದಲ್ಲಿ, ಕರೆಮಾಡಿ ಪೊಲೀಸ್ ಅಧೀಕ್ಷಕರ ಜೊತೆ ನೇರವಾಗಿ ಮಾತನಾಡಬಹುದು. ಕರೆ ಮಾಡಬಹುದಾದ ನಮ್ಮ ದೂ.ಸಂಖ್ಯೆ: 8296725912, 0821–2546563. ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಾದರೂ ಬಾನುಲಿ ಕಾರ್ಯಕ್ರಮಗಳನ್ನು ಆಲಿಸಬಹುದು.

ದೇಶ – ವಿದೇಶ

ಬಿಳಿ ಸೀರೆ, ಜಾಕೆಟ್, ಚಪ್ಪಲಿ ಹಾಕಿ ಲಂಡನ್‌ನಲ್ಲಿ ಮಮತಾ ಜಾಗಿಂಗ್




ಲಂಡನ್: ಜಾಗಿಂಗ್ ಮಾಡುವಾಗ, ಪ್ಯಾಂಟ್, ಜಾಕೆಟ್, ಶೂ ಹಾಕಿಕೊಂಡು ಹೋಗುವುದು ಸಾಮಾನ್ಯ. ಪಶ್ಚಿಮಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಇದೇ ವಿಷಯಕ್ಕೆ ಇದೀಗ ಸುದ್ದಿಯಲ್ಲಿದ್ದಾರೆ. ಸೀದಾ ಸಾದಾ ಉಡುಪು ಧರಿಸಿ ಲಂಡನ್ ನಗರದಲ್ಲಿ ಅವರು ಓಡಾಡಿದ್ದಾರೆ. ಹೌದು, ಲಂಡನ್‌ನಂತಹ ನಗರದಲ್ಲಿ ತಾವು ಕೊಲ್ಕತ್ತಾದಲ್ಲಿ ಧರಿಸುತ್ತಿದ್ದ ಸ್ಟೈಲಿನಂತೆ ಬಿಳಿ ಸೀರೆ, ಚಪ್ಪಲಿ ಧರಿಸಿ ಮಮತಾ ಜಾಗಿಂಗ್ ಮಾಡುತ್ತಿರುವುದು ಕಂಡುಬಂದಿದೆ. ಸದ್ಯ ಅವರು ವಾಕಿಂಗ್ ಮಾಡುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ (ಎಲ್‌ಎಸ್‌ಇ) ಮತ್ತು ಕ್ವೀನ್ ಮೇರಿ ವಿಶ್ವವಿದ್ಯಾಲಯದ ಮೈಲ್ ಎಂಡ್ ಇನ್‌ಸ್ಟಿಟ್ಯೂಟ್‌ನ ಕಾರ್ಯಕ್ರಮಕ್ಕೆಂದು ಲಂಡನ್‌ಗೆ ತೆರಳಿರುವ ಮಮತಾ ಬ್ಯಾನರ್ಜಿ ಹೈಡ್ ಪಾರ್ಕ್‌ನಲ್ಲಿ, ತಾವು ಯಾವಾಗಲೂ ಕೊಲ್ಕತ್ತಾದಲ್ಲಿ ಉಡುವ ಬಿಳಿ ಸೀರೆ ಮತ್ತು ಬಿಳಿ ಚಪ್ಪಲಿಯಲ್ಲಿ ವಾಕಿಂಗ್ ಮಾಡಿದ್ದಾರೆ. ಈ ವಿಡಿಯೋವನ್ನು ತೃಣಮೂಲ ಕಾಂಗ್ರೆಸ್‌ನ ಕುನಾಲ್ ಘೋಷ್ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಕರ್ನಾಟಕ ಕೇಡರ್ ಹಿರಿಯ ಐಎಎಸ್ ಅಧಿಕಾರಿ ಅಜಯ್ ಸೇಠ್‌ಗೆ ಕೇಂದ್ರದಲ್ಲಿ ಉನ್ನತ ಹುದ್ದೆ




ನವದೆಹಲಿ: ಕರ್ನಾಟಕ ಕೇಡರ್‌ನ ಹಿರಿಯ ಐಎಎಸ್ ಅಧಿಕಾರಿ ಅಜಯ್ ಸೇಠ್ ಅವರಿಗೆ ಕೇಂದ್ರ ಸರ್ಕಾರದಲ್ಲಿ ಉನ್ನತ ಹುದ್ದೆ ದೊರೆತಿದೆ. ಕೇಂದ್ರ ಹಣಕಾಸು ಸಚಿವಾಲಯದ ಕಾರ್ಯದರ್ಶಿಯಾಗಿ ಹಾಗೂ ಕಂದಾಯ ಕಾರ್ಯದರ್ಶಿಯಾಗಿ ಅಜಯ್ ಸೇಠ್ ನಿಯುಕ್ತಿಗೊಂಡಿದ್ದಾರೆ. ಇದಕ್ಕೂ ಮೊದಲು ಅವರು ಹಣಕಾಸು ಸಚಿವಾಲಯದ 'ಆರ್ಥಿಕ ವ್ಯವಹಾರಗಳ ಇಲಾಖೆ'ಯ ಕಾರ್ಯದರ್ಶಿಯಾಗಿ 2021ರ ಏಪ್ರಿಲ್‌ನಿಂದ ಕಾರ್ಯನಿರ್ವಹಿಸುತ್ತಿದ್ದರು. ಕೇಂದ್ರ ಹಣಕಾಸು ಸಚಿವಾಲಯದ ಕಾರ್ಯದರ್ಶಿಯಾಗಿದ್ದ ತುಹಿನ್ ಕಾಂತ್ ಪಾಂಡೆ ಅವರು ಸೆಬಿ ಅಧ್ಯಕ್ಷ ಸ್ಥಾನಕ್ಕೆ ನೇಮಕವಾಗಿದ್ದರು. ಅವರ ಸ್ಥಾನವನ್ನು ಅಜಯ್ ಸೇಠ್ ಅಲಂಕರಿಸಿದ್ದಾರೆ. ಐಎಎಸ್ 1987ರ ಬ್ಯಾಚ್‌ನ ಕರ್ನಾಟಕ ಕೇಡರ್ ಹಿರಿಯ ಅಧಿಕಾರಿಯಾಗಿರುವ ಅಜಯ್ ಸೇಠ್ ಅವರು 2018ರ ಜುಲೈನಲ್ಲಿ ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ್ದರು. 2021ರ ಏಪ್ರಿಲ್‌ನಲ್ಲಿ ಕೇಂದ್ರ ಸೇವೆಗೆ ತೆರಳಿದ್ದರು. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾಗ ನಮ್ಮ ಮೆಟ್ರೊ ನಿರ್ಮಾಣ ಕಾರ್ಯ ವೇಗ ಪಡೆದುಕೊಳ್ಳುವಲ್ಲಿ ಶ್ರಮಿಸಿದ್ದರು.

ಸ್ಯಾಮ್‌ಸಂಗ್ ಕಂಪನಿಯ ಸಹ ಸಿಇಓ ಹ್ಯಾನ್ ಜಾಂಗ್ ನಿಧನ



ಬೀಜಿಂಗ್: ಪ್ರತಿಷ್ಠಿತ ಸ್ಯಾಮ್‌ಸಂಗ್ ಸಂಸ್ಥೆಯ ಸಹ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹ್ಯಾನ್‌ಜಾಂಗ್ ಹೀ (63) ಹೃದಯ ಸ್ತಂಭನದಿಂದ ಕೊನೆಯುಸಿರೆಳೆದಿರುವುದಾಗಿ ಸ್ಯಾಮ್ ಸಂಗ್ ಎಲೆಕ್ಟ್ರಾನಿಕ್ಸ್ ತಿಳಿಸಿದೆ. ಸ್ಯಾಮ್‌ಸಂಗ್‌ನ ಕನ್ಸೂಮರ್ ಎಲೆಕ್ಟ್ರಾನಿಕ್ಸ್ ಮತ್ತು ಮೊಬೈಲ್ ಸಾಧನಗಳ ವಿಭಾಗ ನೋಡಿಕೊಳ್ಳುತ್ತಿದ್ದ ಹ್ಯಾನ್‌ಜಾಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂದರ್ಭದಲ್ಲೇ ವಿಧಿವಶರಾಗಿರುವುದಾಗಿ ಖಚಿತಪಡಿಸಿದ್ದಾರೆ. ಆದರೆ ಅವರ ಸ್ಥಾನಕ್ಕೆ ಇನ್ನೂ ಯಾರನ್ನೂ ನೇಮಕ ಮಾಡಿಲ್ಲ ಎಂದು ರಾಯಿಟರ್ಸ್ ವರದಿ ಮಾಡಿದೆ. ಕಂಪನಿಯ ಆದಾಯ ಮತ್ತು ಷೇರು ಬೆಲೆ ಕುಸಿಯುತ್ತಿರುವ ಸಂಕಷ್ಟದ ಸಮಯದಲ್ಲೇ ಹ್ಯಾನ್ ಅವರ ನಿಧನವು ತುಂಬಲಾರದ ನಷ್ಟವನ್ನು ತಂದಿದೆ. ಎಐನಿಂದಾಗಿ ಹೆಚ್ಚು ಬೇಡಿಕೆ ಕಂಡಿರುವ ಅತ್ಯಾಧುನಿಕ ಮೆಮೊರಿ ಚಿಪ್‌ಗಳ ತಯಾರಿಕೆಯಲ್ಲಿ ಸ್ಯಾಮ್ ಸಂಗ್ ಪ್ರತಿಸ್ಪರ್ಧಿಗಳಿಗಿಂತ ಹಿಂದುಳಿದಿದೆ. Apple ಕಂಪನಿಯಿಂದಾಗಿ ಸ್ಯಾಮ್‌ಸಂಗ್ ವಿಶ್ವದ ಅಗ್ರ ಸ್ಮಾರ್ಟ್ ಫೋನ್ ತಯಾರಕರ ಸ್ಥಾನ ಕಳೆದುಕೊಂಡಿದೆ. ಟೆಲಿವಿಷನ್ ಉದ್ಯಮದ ಮೂಲಕ ವೃತ್ತಿ ಜೀವನ ಆರಂಭಿಸಿದ್ದ ಹ್ಯಾನ್ 40 ವರ್ಷಗಳ ಕಾಲ ಸ್ಯಾಮ್‌ಸಂಗ್‌ನಲ್ಲಿ ಕಳೆದಿದ್ದಾರೆ.

ಶ್ರೀಶೈಲಂ ಕಾಲುವೆ ಸುರಂಗ ಕುಸಿತ ಪ್ರಕರಣ: ತಿಂಗಳ ನಂತರ ಮೃತದೇಹ ಪತ್ತೆ



ನಾಗರಕುರ್ನೂಲ್: ತಿಂಗಳ ಹಿಂದೆ (ಫೆ. 22) ನಡೆದಿದ್ದ ಶ್ರೀಶೈಲಂ ಎಡದಂಡೆ ಕಾಲುವೆ (ಎಸ್‌ಎಲ್‌ಬಿಸಿ) ಸುರಂಗದ ಭಾಗಶಃ ಕುಸಿತ ಪ್ರಕರಣದಲ್ಲಿ ಮತ್ತೊಬ್ಬ ಕಾರ್ಮಿಕನ ಮೃತದೇಹ ಮಂಗಳವಾರ ಪತ್ತೆಯಾಗಿದೆ. ಇದರಿಂದಾಗಿ ಮೃತರ ಸಂಖ್ಯೆ ಎರಡಕ್ಕೆ ಏರಿದೆ. ಮಂಗಳವಾರ ದೊರೆತ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಆಸ್ಪತ್ರೆಗೆ ಸಾಗಿಸಲಾಗಿದೆ. ವ್ಯಕ್ತಿಯ ಗುರುತು ತಕ್ಷಣಕ್ಕೆ ಪತ್ತೆಯಾಗಿಲ್ಲ. ಇನ್ನಿತರ ಪ್ರಕ್ರಿಯೆಗಳು ಬಾಕಿ ಇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಲುವೆಗಾಗಿ ನಿರ್ಮಿಸಿದ್ದ ಸುರಂಗದ ಒಂದು ಭಾಗವು ಫೆ.22ರಂದು ಕುಸಿದಿತ್ತು. ಎಂಜಿನಿಯರ್ ಮತ್ತು ಕಾರ್ಮಿಕರು ಸೇರಿ ಒಟ್ಟು ಏಳು ಜನ ಸಿಲುಕಿದ್ದರು. ಇವರಲ್ಲಿ ಸುರಂಗ ಕೊರೆಯುವ ಯಂತ್ರದ ಚಾಲಕ ಗುರುಪ್ರೀತ್ ಸಿಂಗ್ ಅವರ ಮೃತದೇಹ ಮಾರ್ಚ್ 9ರಂದು ಪತ್ತೆಯಾಗಿತ್ತು. ಅವರ ಕುಟುಂಬಕ್ಕೆ ಪಾರ್ಥಿವ ಶರೀರವನ್ನು ಹಸ್ತಾಂತರಿಸಲಾಗಿದೆ ಎಂದಿದ್ದಾರೆ. ಕೇಂದ್ರ ಸರ್ಕಾರ ಹಾಗೂ ಕೆಲ ಖಾಸಗಿ ಕಂಪನಿಗಳಿಗೆ ಸೇರಿದ ದೇಶದ 25 ರಾಜ್ಯಗಳ ಸುಮಾರು 700 ಜನರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಏಳು ಜನರು ಕುಸಿದ ಸುರಂಗದಲ್ಲಿ ಸಿಲುಕಿದ್ದರು.

ಇಂಗ್ಲೆಂಡ್‌ನಲ್ಲಿ ಹಕ್ಕಿಜ್ವರ ಪತ್ತೆ



ಲಂಡನ್: ಉತ್ತರ ಇಂಗ್ಲೆಂಡ್‌ನ ಹೆಣ್ಣು ಕುರಿಯಲ್ಲಿ ಹಕ್ಕಿಜ್ವರ ಪತ್ತೆಯಾಗಿದ್ದು, ಇದು ಬ್ರಿಟನ್‌ನ ಮೊದಲ ಪ್ರಕರಣ ಎಂದು ಇಂಗ್ಲೆಂಡ್ ಸರ್ಕಾರ ಹೇಳಿದೆ. ಸಸ್ತನಿಗಳಲ್ಲಿ (ಹಾಲುಣಿಸುವ ಪ್ರಾಣಿಗಳು) ಸೋಂಕು ಹೆಚ್ಚಳ ಆಗುತ್ತಿರುವುದು ಸಾಂಕ್ರಾಮಿಕ ರೋಗದ ಆತಂಕಕ್ಕೆ ಕಾರಣವಾಗಿದೆ. ಹೆಚ್5ಎನ್1 ಹಕ್ಕಿಜ್ವರದ ವೈರಾಣುವಿನಿಂದಾಗಿ ವಿಶ್ವದಾದ್ಯಂತ ಕರಡಿ, ಬೆಕ್ಕು, ಹಸುಗಳು, ಶ್ವಾನಗಳು, ಡಾಲ್ಫಿನ್, ಕಡಲುನಾಯಿ ಮತ್ತು ಹುಲಿಗಳು ಸಾವನ್ನಪ್ಪಿವೆ. ಯಾರ್ಕ್‌ಶೈರ್‌ನ ಹಕ್ಕಿಗಳಲ್ಲಿ ಮಾರಕ ಸಾಂಕ್ರಾಮಿಕ ಸೋಂಕು (ಹೆಚ್5ಎನ್1) ಪತ್ತೆಯಾದ ನಂತರ ನಿರಂತರ ತಪಾಸಣೆ ವೇಳೆ ಕುರಿಯಲ್ಲಿ ಹಕ್ಕಿ ಜ್ವರ ಪತ್ತೆಯಾಗಿದೆ ಎಂದು ಬ್ರಿಟನ್ ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ. ಪಕ್ಷಿ ಮತ್ತು ಪ್ರಾಣಿಗಳಲ್ಲಿ ಕಾಣಿಸಿಕೊಂಡಿರುವ ವೈರಾಣು ಮನುಷ್ಯರಿಗೆ ಹಬ್ಬಿರುವ ಬಗ್ಗೆ ದೃಢಪಟ್ಟಿಲ್ಲ. ಸೋಂಕು ಪತ್ತೆಯಾಗಿರುವ ಕುರಿಯ ಹಾಲಿನ ಪರೀಕ್ಷೆಯಲ್ಲಿ ಪಾಸಿಟಿವ್ ಬಂದಿದೆ. ಕುರಿ ಮಂದೆಯಲ್ಲಿ(ಹಿಂಡು) ಲಕ್ಷಣಗಳು ಕಾಣಿಸಿಕೊಂಡಿಲ್ಲ. ಹಕ್ಕಿಜ್ವರ ಕಾಣಿಸಿಕೊಂಡ ಸ್ಥಳಗಳಲ್ಲಿ ಜನರ ಆರೋಗ್ಯದ ಮೇಲೆ ನಿಗಾ ವಹಿಸಲಾಗಿದೆ. ಜಾಗತಿಕವಾಗಿ ಸಸ್ತನಿಗಳ ಮೂಲಕ ಮಾರಕ ವೈರಾಣು ಹರಡುತ್ತಿರುವುದು ಪತ್ತೆಯಾಗಿದೆ ಎಂದು ಇಂಗ್ಲೆಂಡ್ ಹೆಲ್ತ್ ಸೆಕ್ಯೂರಿಟಿ ಏಜೆನ್ಸಿ ಕಾರ್ಯದರ್ಶಿ ಮೀರಾ ಚಂದ್ ತಿಳಿಸಿದ್ದಾರೆ.

ವಿಜ್ಞಾನ, ತಂತ್ರಜ್ಞಾನ ಇಲ್ಲದೆ ಬದುಕು ಅಸಾಧ್ಯ

ಸುಸ್ಥಿರ ಅಭಿವೃದ್ಧಿಗೆ ವಿಜ್ಞಾನ, ತಂತ್ರಜ್ಞಾನ ಕುರಿತ ಸಮಾವೇಶಕ್ಕೆ ಸಚಿವ ಭೋಸರಾಜು ಚಾಲನೆ



ಮಂಗಳವಾರದಿಂದ ಆರಂಭವಾದ ಮೂರು ದಿನಗಳ ಸಮಾವೇಶಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ಚಾಲನೆ ನೀಡಿದರು.

ಮಡಿಕೇರಿ ಮಾ.25– ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮಹಾವಿದ್ಯಾಲಯದ ಅಮೃತ ಮಹೋತ್ಸವದ ಅಂಗವಾಗಿ ಕೊಡಗು ವಿಶ್ವವಿದ್ಯಾನಿಲಯ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಹಯೋಗದಲ್ಲಿ ಆಯೋಜಿಸಿರುವ ಕನ್ನಡದಲ್ಲಿ 5ನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನದ ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ ಮೂರು ದಿನಗಳ ಸಮಾವೇಶಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರು ಚಾಲನೆ ನೀಡಿದರು.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಸಭಾಂಗಣದಲ್ಲಿಂದು ನಡೆದ ಸಮಾವೇಶವನ್ನು ಉದ್ಘಾಟಿಸಿದ ಸಚಿವರು, ಮಾನವನ ಬದುಕಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲ್ಲದೆ ಊಹಿಸಿಕೊಳ್ಳುವುದು ಕಷ್ಟಸಾಧ್ಯ ಎಂದು ಹೇಳಿದರು.

ಭೂಮೇಲ್ಮೈ ವಾತಾವರಣ (ಮಳೆ, ಬಿಸಿಲು, ಚಳಿ ಸೇರಿದಂತೆ) ಪ್ರಾಕೃತಿಕವಾಗಿ ಪ್ರತಿನಿತ್ಯದ ಚಟುವಟಿಕೆಯನ್ನು ಮುಂಚಿತವಾಗಿಯೇ ತಿಳಿಯುವಂತಾಗಲು ವಿಜ್ಞಾನ ಮತ್ತು ತಂತ್ರಜ್ಞಾನ ಅತ್ಯವಶ್ಯಕವಾಗಿದೆ ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಆಸಕ್ತಿ ಮತ್ತು ಕುತೂಹಲ ಇರಬೇಕು. ಇದರಿಂದ ವೈಜ್ಞಾನಿಕವಾಗಿ ಸಂಶೋಧನೆಗಳನ್ನು ಕೈಗೊಳ್ಳಲು ಸಾಧ್ಯವಾಗಲಿದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಕನ್ನಡದಲ್ಲಿಯೇ ಮಾಹಿತಿ ದೊರೆಯುತ್ತಿದ್ದು, ಇದನ್ನು ಹೆಚ್ಚು ಬಳಸಬೇಕು. ಇದರಿಂದ ಹಂತ ಹಂತವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆ ಬೆಳವಣಿಗೆಗೆ ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯಬೇಕು ಎಂದು ಅವರು ನುಡಿದರು. ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಬೆಳವಣಿಗೆಗೆ ಅತ್ಯವಶ್ಯಕ. ಆ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ವಿಶ್ವದಲ್ಲಿ ಅಗಾಧವಾಗಿ ಬೆಳೆದಿದೆ.

ಅಮೇರಿಕಾದ ಬಾಹ್ಯಾಕಾಶ ವಿಜ್ಞಾನಿಗಳು 9 ತಿಂಗಳ ಕಾಲ ಅಂತರರಾಷ್ಟ್ರೀಯ ಗಗನಯಾನದಲ್ಲಿ ಇದ್ದು, ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ಸಂಶೋಧನೆ ಕೈಗೊಂಡು ಭೂಮಿಗೆ ವಾಪಸ್ಸು ಬಂದಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಇದೊಂದು ಮೈಲಿಗಲ್ಲು ಎಂದು ತಿಳಿಸಿದರು.

ನಾಡಗೀತೆಯನ್ನು ವಿದ್ಯಾರ್ಥಿಗಳು ಹಾಡುವಂತಾಗಬೇಕು. ಅದನ್ನು ಬಿಟ್ಟು ಧ್ವನಿವರ್ಧಕ ಮೂಲಕ ನಾಡಗೀತೆ ಹಾಡಿಸಿದ್ದು ಸರಿಯಲ್ಲ ಎಂದು ವಿಧಾನಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಬೇಸರ ವ್ಯಕ್ತಪಡಿಸಿ, ಕನ್ನಡ ನಾಡುನುಡಿ ಬಗ್ಗೆ ಹೆಮ್ಮೆ ಇರಬೇಕು. ಮನುಷ್ಯತ್ವ ಗುಣ ಪ್ರತಿಯೊಬ್ಬರಲ್ಲೂ ಇರಬೇಕು. ಏನಾದರೂ ಆಗು ಮೊದಲು ಮಾನವನಾಗು, ಆ ನಿಟ್ಟಿನಲ್ಲಿ ಮಾನವೀಯ ಮೌಲ್ಯ ಕಳೆದುಕೊಳ್ಳಬಾರದು ಎಂದರು. ಮತ್ತೋರ್ವ ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವ ಜೀವನದ ಅಭಿವೃದ್ಧಿಗೆ ಸಹಕಾರಿಯಾಗಿದೆ. ಸುಸ್ಥಿರ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆ ಅಪಾರವಾಗಿದೆ ಎಂದರು.

ಕೊಡಗು ವಿಶ್ವವಿದ್ಯಾನಿಲಯದ ಕುಲಪತಿ ಅಶೋಕ ಸಂಗಪ್ಪ, ವಿಶ್ವ ವಿದ್ಯಾಲಯಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎ.ಎಂ.ರಮೇಶ್ ಮಾತನಾಡಿದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಉಪ ವಿಭಾಗಾಧಿಕಾರಿ ವಿನಾಯಕ ನರ್ವಡೆ, ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಸುರೇಶ ಎಚ್.ಜಂಗಮಶೆಟ್ಟಿ, ಹಾಸನ ವಿಶ್ವವಿದ್ಯಾಲಯದ ಕುಲಪತಿ ಡಾ.ತರೀಕೆರೆ ಸಿ.ತಾರಾನಾಥ್, ಚಾಮರಾಜನಗರ ವಿಶ್ವವಿದ್ಯಾಲಯ ಕುಲಪತಿ ಡಾ.ಎಂ.ಆರ್. ಗಂಗಾಧರ್, ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಪತಿ ಡಾ.ಆನಂದ ಎಸ್. ದೇಶಪಾಂಡೆ, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಕೆ.ರವಿ, ಬೀದರ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಎಸ್.ಬಿರಾದಾರ್, ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಅಶೋಕ ಸಂಗಪ್ಪ ಆಲೂರ, ಬೆಂಗಳೂರು ಕವಿತಂಅ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಎಂ. ರಮೇಶ್, ಎಫ್‌ಎಂಕೆಎಂಸಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ.ಬಿ.ರಾಘವ, ಸಿಂಡಿಕೇಟ್ ಸದಸ್ಯರಾದ ಪುಟ್ಟರಾಜಪ್ಪ, ಡಾ.ವಾಣಿ ಎಂ., ಕೆ.ಎನ್.ಜನಾರ್ಧನ್, ಡಾ.ದಯಾನಂದ ಕೆ.ಸಿ., ಡಾ.ಎಂ.ಜಿ.ಕಾವೇರಿಯಪ್ಪ, ಡಾ.ಡಿ.ಕೆ.ಸರಸ್ವತಿ, ಕುಲಸಚಿವರಾದ (ಮೌಲ್ಯಮಾಪನ) ಡಾ.ಎಂ.ಸುರೇಶ, ಇತರರು ಇದ್ದರು.

ಮರದಿಂದ ಬಿದ್ದು ಅಸ್ಸಾಂ ಮೂಲದ ಕಾರ್ಮಿಕ ಸಾವು



ಮಡಿಕೇರಿ, ಮಾ.25– ಮರದಿಂದ ಬಿದ್ದು ಅಸ್ಸಾಂ ಮೂಲದ ಕಾರ್ಮಿಕ ಸಾವನ್ನಪ್ಪಿದ ಘಟನೆ ನಾಪೋಕ್ಲು ಸಮೀಪದ ನೆಲಜಿ ಗ್ರಾಮದಲ್ಲಿ ನಡೆದಿದೆ. ವಾಜಿದ್ ಅಲಿ(28) ಎಂಬಾತನೇ ಮೃತಪಟ್ಟ ದುರ್ದೈವಿ. ಎಮ್ಮೆಮಾಡು ಕೂರುಳಿ ಗ್ರಾಮದಲ್ಲಿ ವಾಸವಾಗಿದ್ದು, ವಿವಿದೆಡೆ ಕೂಲಿ ಕೆಲಸಕ್ಕೆ ತೆರಳುತ್ತಿದ್ದ ವಾಜಿದ್ ನೆಲಜಿ ಗ್ರಾಮದ ಕೆ.ಸೋಮಣ್ಣ ಎಂಬವರ ತೋಟದಲ್ಲಿ ಮರ ಕಪಾತು ಕೆಲಸಕ್ಕೆ ತೆರಳಿದ್ದಾಗ ಮರದ ಮೇಲಿನಿಂದ ಆಯತಪ್ಪಿ ಕೆಳಗೆ ಬಿದ್ದಿದ್ದಾನೆ. ಬಿದ್ದ ರಭಸಕ್ಕೆ ವಾಜಿದ್‌ನ ಕುತ್ತಿಗೆ ಭಾಗದ ಸ್ಪೈನಲ್ ಕಾರ್ಡ್‌ಗೆ ತೀವ್ರ ಪೆಟ್ಟಾಗಿದ್ದು ಆಸ್ಪತ್ರೆಯಲ್ಲಿ ಪರಿಶೀಲಿಸಿದ ವೈದ್ಯರು ಆತ ಮೃತಪಟ್ಟಿರುವುದನ್ನು ದೃಢೀಕರಿಸಿದ್ದಾರೆ. ಘಟನೆ ಕುರಿತು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಗುಂಡು ಹೊಡೆದುಕೊಂಡು ವ್ಯಕ್ತಿ ಆತ್ಮಹತ್ಯೆ

ಮಡಿಕೇರಿ,ಮಾ.25– ನಾಪೋಕ್ಲು ಸಮೀಪದ ನೆಲಜಿ ಗ್ರಾಮದಲ್ಲಿ ಗುಂಡು ಹೊಡೆದುಕೊಂಡು ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ. ನೆಲಜಿ ಗ್ರಾಮದ ನಿವಾಸಿ ಚಿಯಕಪೂವಂಡ ರಂಜು ತಿಮ್ಮಯ್ಯ(55) ಎಂಬವರೇ ಆತ್ಮಹತ್ಯೆಗೆ ಶರಣಾದ ವ್ಯಕ್ತಿಯಾಗಿದ್ದಾರೆ. ಸಾಲಬಾಧೆಯಿಂದ ರಂಜು ತಿಮ್ಮಯ್ಯ ಖಿನ್ನತೆಗೆ ಒಳಗಾಗಿದ್ದರೆನ್ನಲಾಗಿದ್ದು, ಮಂಗಳವಾರ ಬೆಳಿಗ್ಗೆ ನೆಲಜಿ ಗ್ರಾಮದ ತಮ್ಮ ಮನೆ ಸಮೀಪದಲ್ಲಿ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತ ರಂಜು ತಿಮ್ಮಯ್ಯ ಅವರ ಪತ್ನಿ ತಾರಾಮಣಿ ಅವರು ನೀಡಿದ ದೂರಿನ ಮೇರೆಗೆ ನಾಪೋಕ್ಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಉಪಮುಖ್ಯಮಂತ್ರಿ ಹೇಳಿಕೆ ವಿರೋಧಿಸಿ ಬಿಜೆಪಿ ಪ್ರತಿಭಟನೆ



ಉಪಮುಖ್ಯಮಂತ್ರಿ ಹೇಳಿಕೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಮಾ.25– ಮುಸ್ಲಿಮರಿಗೆ ಮೀಸಲಾತಿ ಒದಗಿಸಲು ಸಂವಿಧಾನ ಬದಲಾಯಿಸುವ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪ್ರತಿಕೃತಿ ದಹಿಸುವ ಮೂಲಕ ಜಿಲ್ಲಾ ಬಿಜೆಪಿ, ಜನರಲ್ ಕೆ.ಎಸ್. ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿತು. ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ವಿಧಾನ ಸಭಾಧ್ಯಕ್ಷ ಕೆ.ಜಿ.ಬೋಪಯ್ಯ, ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ನೇತೃತ್ವ ದಲ್ಲಿ ಬೆಳಗ್ಗೆ ಜನರಲ್ ತಿಮ್ಮಯ್ಯ ವೃತ್ತಕ್ಕೆ ಪಕ್ಷದ ಕಚೇರಿಯಿಂದ ಘೋಷಣೆಗಳ ಸಹಿತ ಆಗಮಿಸಿದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ರಾಜ್ಯ ಸರ್ಕಾರದ ಧೋರಣೆಗಳನ್ನು ತೀವ್ರವಾಗಿ ಖಂಡಿಸಿದರು.

ಡಿಕೆಶಿಯನ್ನು ವಜಾಗೊಳಿಸಿ: ಸರ್ಕಾರದ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ ಒದಗಿಸುವುದಕ್ಕಾಗಿ ಸಂವಿಧಾನದ ಬದಲಾವಣೆ ಮಾಡುವುದಾಗಿ ಹೇಳಿಕೆ ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸಂಪುಟದಿಂದಲೇ ವಜಾಗೊಳಿಸಬೇಕೆಂದು ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಆಗ್ರಹಿಸಿದರು.

ಸಮಾಜ ಒಡೆಯುವ ಕಾರ್ಯ : ಅಲ್ಪಸಂಖ್ಯಾತರ ಓಲೈಕೆಗೆ ಮುಂದಾಗುವ ಮೂಲಕ ಸಮಾಜವನ್ನು ಒಡೆಯುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದನ್ನು ಅಲ್ಪಸಂಖ್ಯಾತರು ಅರಿತುಕೊಳ್ಳಬೇಕು, ಅವರ ಮಾತಿಗೆ ಮರುಳಾಗಬಾರದು ಮಾಜಿ ವಿಧಾನ ಸಭಾಧ್ಯಕ್ಷ ಕೆ.ಜಿ.ಬೋಪಯ್ಯ ತಿಳಿಸಿದರು.

ಅಧಿಕಾರವಿದ್ದಲ್ಲಿ ಏನನ್ನೂ ಮಾಡಬಹುದು ಎನ್ನುವ ರೀತಿಯಲ್ಲಿ ಕಾಂಗ್ರೆಸ್ ವರ್ತಿಸುತ್ತಿದೆ. ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ ವಾರಕ್ಕೊಂದು ಹಗರಣಗಳು ನಡೆಯುತ್ತಿರುವುದಾಗಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಟೀಕಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ರಾಜ್ಯ ಮಹಿಳಾ ಮೋರ್ಚಾ ಪ್ರಮುಖರಾದ ರೀನಾ ಪ್ರಕಾಶ್, ಜಿಲ್ಲಾ ಮಹಿಳಾ ಬಿಜೆಪಿ ಮಾಜಿ ಅಧ್ಯಕ್ಷರಾದ ಯಮುನಾ ಚಂಗಪ್ಪ, ಪ್ರಮುಖರಾದ ಮಹೇಶ್ ಜೈನಿ, ಕೆ.ಎಸ್. ರಮೇಶ್, ಕನ್ನಂಡ ಸಂಪತ್, ಎಸ್.ಸಿ. ಸತೀಶ್, ತಳೂರು ಕಿಶೋರ್ ಕುಮಾರ್, ನಾಗೇಶ್ ಕುಂದಲ್ಪಾಡಿ, ಬಿ.ಕೆ. ಜಗದೀಶ್, ಬಿ.ಕೆ.ಅರುಣ್ ಕುಮಾರ್, ಪಿ.ಎಂ.ರವಿ, ಸಜಿಲ್ ಕೃಷ್ಣನ್, ಅರುಣ್ ಶೆಟ್ಟಿ ಮತ್ತಿತರರು ಪಾಲ್ಗೊಂಡಿದ್ದರು.

ಮುದ್ದಂಡ ಕಪ್ ಹಾಕಿ ಉತ್ಸವ ಕ್ರೀಡಾಜ್ಯೋತಿ ಉದ್ಘಾಟನೆ



ಮುದ್ದಂಡ ಕಪ್ ಹಾಕಿ ಉತ್ಸವದ ಕ್ರೀಡಾಜ್ಯೋತಿಗೆ ಚಾಲನೆ ನೀಡಲಾಯಿತು.

ಮಡಿಕೇರಿ ಮಾ.25– ಮುದ್ದಂಡ ಕಪ್ ಹಾಕಿ ಉತ್ಸವದ ಕ್ರೀಡಾಜ್ಯೋತಿಯನ್ನು ಕೊಡವ ಹಾಕಿ ಹಬ್ಬದ ಜನಕರಾದ ಕರಡ ಗ್ರಾಮದ ಪಾಂಡಂಡ ಕುಟುಂಬದ ಐನ್‌ಮನೆಯಲ್ಲಿ ಉದ್ಘಾಟಿಸಲಾಯಿತು.

ಮುದ್ದಂಡ ಕಪ್ ಹಾಕಿ ಉತ್ಸವ ಸಮಿತಿ ಮತ್ತು ಕೊಡವ ಹಾಕಿ ಅಕಾಡೆಮಿಯ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಹಾಗೂ ಕೊಡವ ಹಾಕಿ ಹಬ್ಬದ ಜನಕ ದಿ.ಪಾಂಡಂಡ ಕುಟ್ಟಪ್ಪ ಅವರ ಪತ್ನಿ ಲೀಲ ಕುಟ್ಟಪ್ಪ ಕ್ರೀಡಾಜ್ಯೋತಿಯನ್ನು ಉದ್ಘಾಟಿಸಿದರು.

ಕೊಡಗಿನ ಪ್ರಮುಖ ಕಾರ್ಯಚಟುವಟಿಕೆಗಳಲ್ಲಿ ಕ್ರೀಡೆಯೂ ಒಂದಾಗಿದ್ದು, ಬೆಳ್ಳಿ ಮಹೋತ್ಸವ ಆಚರಣೆ ಸಂದರ್ಭದಲ್ಲಿ ಮುಂದಿನ ತಿಂಗಳಾಂತ್ಯದವರೆಗೆ ನಡೆಯುವ ಹಾಕಿ ಉತ್ಸವವು, ನಾಡಿನ ಯುವ ಹಾಕಿ ಪಟುಗಳ ಪ್ರತಿಭೆಯನ್ನು ಅನಾವರಣಗೊಳಿಸುವ ವೇದಿಕೆಯಾಗಲಿ ಎಂದರು.

ಹಾಕಿ ಹಬ್ಬದ ಜನಕರಾದ ಪಾಂಡಂಡ ಕುಟ್ಟಪ್ಪ ಅವರ ಪುತ್ಥಳಿಯನ್ನು ನಿರ್ಮಿಸಬೇಕು ಎಂದು ಕುಟುಂಬಸ್ಥರು ಹಾಗೂ ಸ್ಥಳೀಯರು ಬೇಡಿಕೆಯನ್ನಿಟ್ಟಿದ್ದು, ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಮುದ್ದಂಡ ಹಾಕಿ ಹಬ್ಬದ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ, ಉಪಾಧ್ಯಕ್ಷ ಡೀನ್ ಬೋಪಣ್ಣ, ಕಾರ್ಯದರ್ಶಿ ಆದ್ಯ ಪೂವಣ್ಣ, ಗೌರವಾಧ್ಯಕ್ಷ ಮುದ್ದಂಡ ಬಿ.ದೇವಯ್ಯ, ಪಟ್ಟೆದಾರ ಡಾಲಿ ತಿಮ್ಮಯ್ಯ, ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, ಕಾರ್ಯಾಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ, ಉಪಾಧ್ಯಕ್ಷ ಕುಕ್ಕೇರ ಜಯ ಚಿಣ್ಣಪ್ಪ, ಪ್ರಮುಖರಾದ ಪಾಂಡಂಡ ಮೊಣ್ಣಪ್ಪ, ಮುದ್ದಂಡ ತಿಮ್ಮಯ್ಯ, ಮುದ್ದಂಡ ಕುಟುಂಬಸ್ಥರು ಹಾಗೂ ಪಾಂಡಂಡ ಕುಟುಂಬಸ್ಥರು ಉಪಸ್ಥಿತರಿದ್ದರು.

ಇಂದು ಪಾಂಡಂಡ ಕುಟುಂಬದ ಐನ್ ಮನೆಯ ನಂತರ ಕಿರುಗೂರು ಚೆಪ್ಪುಡಿರ, ಅಲಮೇಂಗಡ, ಟಿ.ಶೆಟ್ಟಿಗೇರಿ– ಒಂಟಿಯಂಗಡಿ ಮಚ್ಚಮಾಡ, ಚೆಕ್ಕೇರ, ಕಳ್ಳಿಚಂಡ, ಕುಂದ ಮನೆಯಪಂಡ, ನಾಂಗಾಲ ಕುಪ್ಪಂಡ ಐನ್‌ಮನೆಗಳಿಗೆ ಕೊಡಗಿನ ಮ್ಯಾರಥಾನ್ ಪಟುಗಳು ಕ್ರೀಡಾಜ್ಯೋತಿಯೊಂದಿಗೆ ಸಾಗಿದರು.

ಐನ್‌ಮನೆಗಳಿಗೆ ಮ್ಯಾರಥಾನ್ : 1997 ರಿಂದ ಇಲ್ಲಿಯವರೆಗೆ ಹಾಕಿ ಉತ್ಸವ ಆಯೋಜಿಸಿದ್ದ ಎಲ್ಲಾ ಕುಟುಂಬಗಳ ಐನ್‌ಮನೆಗಳಿಗೆ ಮ್ಯಾರಥಾನ್ ಮೂಲಕ ಕ್ರೀಡಾಜ್ಯೋತಿಯನ್ನು ಕೊಂಡೊಯ್ಯಲಾಗುವುದು. ಮಾ.28ರಂದು ಬೆಳಿಗ್ಗೆ 9ಗಂಟೆಗೆ ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಿಂದ ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜು ಮೈದಾನದವರೆಗೆ ಬೃಹತ್ ಮೆರವಣಿಗೆಯ ಮೂಲಕ ಕ್ರೀಡಾಜ್ಯೋತಿ ಸಾಗಲಿದೆ.

ಮಾ.26ರಂದು ವಿರಾಜಪೇಟೆ ಕಾವಾಡಿ ನೆಲ್ಲಮಕ್ಕಡ, ಚೆಂಬೆಬೆಳ್ಳೂರು ಈಶ್ವರ ದೇವಾಲಯ, ಮಂಡೇಪಂಡ, ಕುಕ್ಲೂರು ತಾತಂಡ, ವಿರಾಜಪೇಟೆ ಕೊಡವ ಸಮಾಜ, ಅರಮೇರಿ ಮುದ್ದಂಡ, ಐಚೆಟ್ಟಿರ, ಕಾಕೋಟುಪರಂಬು ಮಂಡೇಟಿರ, ಬಲ್ಲಚಂಡ, ಕರಡ ಕೋಡಿರ, ಬಾವಲಿ ಬಿದ್ದಂಡ, ಮಾ.27ರಂದು ಬಾವಲಿ ಮಾದಂಡ, ಕಲಿಯಂಡ, ನೆಲ್ಜಿ ಮಾಳೆಯಂಡ, ಅಪ್ಪಚೆಟ್ಟೋಳಂಡ, ನಾಪೋಕ್ಲು ಕುಲ್ಲೇಟಿರ, ಬಿದ್ದಾಟಂಡ, ಕೊಳಕೇರಿ ಕುಂಡ್ಯೋಳಂಡ, ಮಡಿಕೇರಿ ಶಾಂತೆಯಂಡ ಮೂಲಕ ಮಾ.28ರಂದು ಜನರಲ್ ತಿಮ್ಮಯ್ಯ ವೃತ್ತ, ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜು ಮೈದಾನವನ್ನು ಕ್ರೀಡಾಜ್ಯೋತಿ ತಲುಪಲಿದೆ.

ಡಿಕೆಶಿ ಹೇಳಿಕೆ ವಿರೋಧಿಸಿ ಪ್ರತಿಭಟನೆ



ಕೊಳ್ಳೇಗಾಲದ ಅಂಬೇಡ್ಕರ್ ಪ್ರತಿಮೆ ಬಳಿ ಸಂವಿಧಾನ ಬದಲಿಸುವ ಹೇಳಿಕೆ ನೀಡಿದ ಡಿಕೆ ಶಿವಕುಮಾರ್ ವಿರುದ್ಧ ಬಿಜೆಪಿ ಕಾರ್ಯಕರ್ತರು ಪ್ರತಿಭಟಿಸಿದರು.

ಕೊಳ್ಳೇಗಾಲ, ಮಾ.25– ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಸಂವಿಧಾನ ಬದಲಾಯಿಸುವ ಸಂಬಂಧ ನೀಡಿದ್ದಾರೆಂಬ ಹೇಳಿಕೆ ವಿರೋಧಿಸಿ ಪಟ್ಟಣದಲ್ಲಿ ಮಂಗಳವಾರ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಕ್ಷಮೆ ಕೇಳುವಂತೆ ಆಕ್ರೋಶ ವ್ಯಕ್ತಪಡಿಸಿದರು


ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್ ಮಹೇಶ್ ಮಾತನಾಡಿ, ಮುಸಲ್ಮಾನರ ಹಿತಕ್ಕಾಗಿ ಸಂವಿಧಾನಕ್ಕೆ ವಿರುದ್ಧವಾಗಿ ಮೀಸಲಾತಿ ನೀಡಿದ್ದಾಯ್ತು. ಈಗ ಮುಸಲ್ಮಾನರ ಏಳಿಗೆಗಾಗಿ ಸಂವಿಧಾನವನ್ನೆ ಬದಲಾಯಿಸುತ್ತೇವೆ ಎಂದು ಡಿಸಿಎಂ ಅವರು ಹೇಳಿದ್ದಾರೆ. ಕಾಂಗ್ರೆಸ್ ಓಲೈಕೆ ಹಾಗೂ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ನಾಳೆ ಭಾರತವನ್ನೇ ತುಂಡರಿಸುತ್ತದೆ ಎಂಬುದಕ್ಕೆ ಡಿ.ಕೆ.ಶಿವಕುಮಾರ್ ಅವರ ಈ ಹೇಳಿಕೆಯೇ ಸಾಕ್ಷಿಯಾಗಿದ್ದು, ಸಿಎಂ ಸಿದ್ದರಾಮಯ್ಯ ಈ ಕೂಡಲೇ ಡಿಕೆ ಶಿವಕುಮಾರ ಅವರನ್ನು ಸಂಪುಟದಿಂದ ಹೊರಹಾಕಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎಸ್.ಬಾಲರಾಜು, ಬಿಜೆಪಿ ಯುವ ನಾಯಕ ನಿಶಾಂತ್, ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಸಿದ್ದಪ್ಪಾಜಿ, ನಗರಸಭೆ ಮಾಜಿ ಸದಸ್ಯರು ಕೆ.ಕೆ. ಮೂರ್ತಿ, ಮಧುಚಂದ್ರ, ನಟರಾಜು, ಚಂದು, ಬೂದಿತಿಟ್ಟು ರಾಜೇಂದ್ರ, ಅಗಸ್ಟೀನ್, ಪ್ರಭು ಇನ್ನಿತರರು ಇದ್ದರು.

ವಿಜೃಂಭಣೆಯಿಂದ ನಡೆದ ಹಿಮವದ್ ಗೋಪಾಲಸ್ವಾಮಿ ರಥೋತ್ಸವ

ಗುಂಡ್ಲುಪೇಟೆ,ಮಾ–25 ನಾಡಿನ ಪುರಾಣ ಪ್ರಸಿದ್ಧ ಯಾತ್ರಾಸ್ಥಳವಾದ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಂಗಳವಾರ ಯುಗಾದಿ ರಥೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಮುಜರಾಯಿ ಅಧಿಕಾರಿ ಹಾಗೂ ತಹಶೀಲ್ದಾರ್ ರಮೇಶ್‌ಬಾಬು ಪೂಜೆ ಸಲ್ಲಿಸುವುದರೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಿದರು. ದೇವಾಲಯವನ್ನು ವಿದ್ಯುತ್ ದೀಪಗಳು ಮತ್ತು ವಿವಿಧ ಅಲಂಕಾರಿಕ ಪುಷ್ಪ ಮತ್ತು ತಳಿರು ತೋರಣದೊಂದಿಗೆ ಅಲಂಕರಿಸಲಾಗಿತ್ತು ಬಣ್ಣ ಬಣ್ಣದ ಬಾವುಟಗಳೊಂದಿಗೆ ಅಲಂಕಾರಗೊಂಡಿದ್ದ ರಥದಲ್ಲಿ ರುಕ್ಮಿಣಿ, ಸತ್ಯಭಾಮ ಸಮೇತನಾದ ಶ್ರೀ ವೇಣುಗೋಪಾಲ ಸ್ವಾಮಿಯ ಉತ್ಸವಮೂರ್ತಿಯನ್ನು ಹೊತ್ತ ರಥವನ್ನು ಗೋವಿಂದಾ, ಗೋಪಾಲ ನಾಮಸ್ಮರಣೆಯೊಂದಿಗೆ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸಿ ಸ್ವಸ್ಥಾನಕ್ಕೆ ತಲುಪಿಸಲಾಯಿತು.



ಪ್ರಸಿದ್ಧ ಹಿಮವದ್ ಗೋಪಾಲಸ್ವಾಮಿಬೆಟ್ಟದಲ್ಲಿ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ವಿಶೇಷವಾಗಿ ಕಾಡಿನಲ್ಲಿ ಬೆಳೆದ ಹಂಬು ಮತ್ತು ಬೊಂಬುಗಳಿಂದ ತಯಾರಿಸಲಾಗಿದ್ದ ರಥವನ್ನು ಅಕ್ಕಪಕ್ಕದ ಗ್ರಾಮಸ್ಥರು, ರಾಜ್ಯ ಹಾಗೂ ಹೊರರಾಜ್ಯಗಳಾದ ತಮಿಳುನಾಡು ಮತ್ತು ಕೇರಳದಿಂದ ಆಗಮಿಸಿದ್ದ ಸಾವಿರಾರು ಭಕ್ತಾದಿಗಳು ಎಳೆದು ಸ್ವಾಮಿ ಕೃಪೆಗೆ ಪಾತ್ರರಾದರು.

ಭಕ್ತರು ಹಾಗೂ ಪ್ರವಾಸಿಗರಿಗೆ ದಾನಿಗಳಿಂದ ಪ್ರಸಾದ ವ್ಯವಸ್ಥೆ ಹಾಗೂ ಪಟ್ಟಣದ ಪೊಲೀಸರಿಂದ ಮಜ್ಜಿಗೆ ವಿತರಣೆ ನಡೆಸಲಾಯಿತು. ಪೊಲೀಸ್, ಅರಣ್ಯ, ಕಂದಾಯ, ಅಗ್ನಿಶಾಮಕದಳ, ಆರೋಗ್ಯ ಇಲಾಖೆಯ ಅಧಿಕಾರಿಗಳು ಮೂಲ ಸೌಕರ್ಯವನ್ನು ಮಾಡಿದ್ದರು. ಜಾತ್ರೆ ಪ್ರಯುಕ್ತ ಕೆಎಸ್‌ಆರ್‌ಟಿಸಿ ವತಿಯಿಂದ ವಿಶೇಷ ಬಸ್ ಸೌಲಭ್ಯ ನೀಡಿ ಭಕ್ತಾದಿಗಳ ಓಡಾಟಕ್ಕೆ ಅನುಕೂಲ ಕಲ್ಪಿಸಿತ್ತು. ರಥೋತ್ಸವದಲ್ಲಿ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್, ಪ್ರಧಾನ ಅರ್ಚಕರಾದ ಗೋಪಾಲಕೃಷ್ಣಭಟ್, ಅರ್ಚಕ ಲಕ್ಷ್ಮಿಪತಿ, ಭಕ್ತರು ಹಾಜರಿದ್ದರು.

ಟಿಪ್ಪರ್‌ಗೆ ಬೆಂಕಿ: ಸಂಪೂರ್ಣ ಭಸ್ಮ

ಬೇಗೂರು, ಮಾ.25– ಗ್ರಾಮದ ಬಳಿ ಕರಿಕಲ್ಲು ತುಂಬಿದ ಟಿಪ್ಪರ್‌ನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡು ಸುಟ್ಟು ಕರಕಲಾದ ಘಟನೆ ರಾತ್ರಿ ನಡೆದಿದೆ.

ಗುಂಡ್ಲುಪೇಟೆ ಕಡೆಯಿಂದ ಸೋಮವಾರ ಮಧ್ಯರಾತ್ರಿ (ಕೆಎಲ್ 73 ಇ 6127) ನಂಬರಿನ ಟಿಪ್ಪರ್ ಕರಿಕಲ್ಲು ತುಂಬಿಕೊಂಡು ಬೇಗೂರು ಬಳಿಯ ಕ್ರಷರ್‌ಗೆ ಬರುವಾಗ ಟಿಪ್ಪರ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಶೇ.70 ರಷ್ಟು ಸುಟ್ಟು ಹೋಗಿದೆ. ಜಾಗೃತನಾದ ಚಾಲಕ ಕೆಳಗಿಳಿದು ಅಪಾಯದಿಂದ ಪಾರಾಗಿದ್ದಾನೆ. ಪೊಲೀಸರಿಗೆ ಮಾಹಿತಿ ತಿಳಿದು ಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ಅಗ್ನಿಶಾಮಕ ದಳ ವಾಹನ ಬಂದು ಬೆಂಕಿ ನಂದಿಸಿದೆ.



ಹನೂರು ಅಭಿವೃದ್ಧಿಗೆ ರಾಜೂಗೌಡರ ಕೊಡುಗೆ ಅಪಾರ



ರಾಜೂಗೌಡರವರ 21ನೇ ಪುಣ್ಯಸ್ಮರಣೆ ಆಚರಿಸಲಾಯಿತು.

ಹನೂರು, ಮಾ.25–ಪ್ರಜಾಪ್ರಭುತ್ವದ ಆಶಯದಂತೆ ಜನರಿಂದ ಜನರಿಗೋಸ್ಕರ ಎಂದು ತಮ್ಮ ಜೀವನವನ್ನೇ ಕ್ಷೇತ್ರದ ಜನರಿಗಾಗಿ ಮುಡಿಪಾಗಿಟ್ಟವರು ಮಾಜಿ ಸಚಿವ ದಿ.ರಾಜೂಗೌಡರವರು. ಅವರ ರಾಜಕೀಯ ಹಾದಿಯಲ್ಲಿ ಮಾಜಿ ಶಾಸಕ ಆರ್. ನರೇಂದ್ರ ಅವರು ಮುನ್ನಡೆಯುತ್ತಿದ್ದಾರೆ ಎಂದು ಸಾಲೂರು ಬೃಹನ್‌ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಶ್ಲಾಘಿಸಿದ್ದಾರೆ.

ತಾಲೂಕಿನ ದೊಡ್ಡಿಂದುವಾಡಿಯಲ್ಲಿ ಮಾಜಿ ಸಚಿವ ದಿ.ಜಿ. ರಾಜೂಗೌಡರವರ 21ನೇ ಪುಣ್ಯಸ್ಮರಣೆ ಅಂಗವಾಗಿ ನಡೆದ ಆರೋಗ್ಯ ಶಿಬಿರದಲ್ಲಿ ಮಾತನಾಡಿದ ಅವರು, ಕ್ಷೇತ್ರದ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುವುದರ ಮೂಲಕ ಶಿಕ್ಷಣ ಕ್ರಾಂತಿ ಮಾಡಿದ್ದಾರೆ. ತಮ್ಮ ಸ್ವಗ್ರಾಮದಲ್ಲಿ 3 ಎಕರೆ ಜಮೀನು ನೀಡುವುದರ ಮೂಲಕ ಪ್ರೌಢಶಾಲೆ ತೆರೆದು ಈ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಸ್ಮರಿಸಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ರಾಜೂಗೌಡರ ಶಿಷ್ಯರಲ್ಲಿ ನಾನು ಕೂಡ ಒಬ್ಬನಾಗಿದ್ದೇನೆ. ಅವರು ನೇರ ನುಡಿ, ನಿಷ್ಠುರವಾದಿಯಾಗಿ ಸೇವಾ ಮನೋಭಾವ ಹೊಂದಿದವರಾಗಿದ್ದರು. ಕ್ಷೇತ್ರದ ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ, ಜಿಲ್ಲಾ ಕ್ರೀಡಾಂಗಣ ಹಾಗೂ ಜಿಲ್ಲಾಡಳಿತ ಭವನ ನಿರ್ಮಾಣದಲ್ಲಿ ಅವರ ಪರಿಶ್ರಮವಿದೆ ಎಂದು ತಿಳಿಸಿದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಆರೋಗ್ಯವೇ ಭಾಗ್ಯ, ಆರೋಗ್ಯ ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸದೃಢ ದೇಹ ಮತ್ತು ಸದೃಢ ದೇಶ ನಿರ್ಮಾಣಕ್ಕಾಗಿ ಆರೋಗ್ಯ ಬಹಳ ಮುಖ್ಯವಾಗಿದೆ. ಇಂತಹ ಮಹಾನ್ ಕಾರ್ಯಕ್ಕೆ ರಾಜೂಗೌಡರ ಸ್ಮರಣೆ ಸಾಕ್ಷಿಯಾಗಿರುವುದು ಸಂತಸದ ವಿಚಾರವಾಗಿದೆ ಎಂದು ತಿಳಿಸಿದರು.

ಗೋಪಾಲ್‌ಗೌಡ ಆಸ್ಪತ್ರೆಯ ನರರೋಗ ತಜ್ಞ ಡಾ. ಶುಶ್ರುತ್, ಮಾಜಿ ಶಾಸಕರಾದ ಆರ್. ನರೇಂದ್ರ, ಆಶಾ ನರೇಂದ್ರ, ನವನೀತ್‌ಗೌಡ, ನಿಖಿತಾಗೌಡ, ಎಂಸಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಪ್ರವೀಣ್ ಕುಮಾರ್, ಹೊನ್ನೇಗೌಡ ನಾಗರಾಜು ಇನ್ನಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಮಕ್ಕಳಿಗೆ ಸಂಸ್ಕಾರವಂತ ಶಿಕ್ಷಣ ಕೊಡಿಸಲು ಮರಳೆಗವಿ ಶ್ರೀಗಳ ಕರೆ



ರೇಣುಕಾಚಾರ್ಯರ ಜಯಂತಿಯನ್ನು ಆಚರಿಸಲಾಯಿತು.


ಕೊಳ್ಳೇಗಾಲ. ಮಾ.25–ಪಟ್ಟಣದಲ್ಲಿ ಅದ್ದೂರಿಯಾಗಿ ಮಂಗಳವಾರ ರೇಣುಕಾಚಾರ್ಯರ ಜಯಂತಿಯನ್ನು ವಿವಿಧ ಮಠಾಧೀಶರು, ಗಣ್ಯರ ಸಮ್ಮುಖದಲ್ಲಿ ಪ್ರಪ್ರಥಮವಾಗಿ ಆಚರಿಸಲಾಯಿತು. ಪಟ್ಟಣದ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಜಯಂತಿ ಮಹೋತ್ಸವಕ್ಕೆ ಮರಳೆಗವಿ ಮಠಾಧ್ಯಕ್ಷರಾದ ಡಾ. ಮುಮ್ಮಡಿ ಶಿವರುದ್ರ ಸ್ವಾಮೀಜಿಯವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ರೇಣುಕಾಚಾರ್ಯರ ಜಯಂತಿ ಅರ್ಥಪೂರ್ಣವಾಗಿದ್ದು, ಇದು ನಿರಂತರ ಪ್ರಕ್ರಿಯೆಯಾಗಬೇಕು, ಜಯಂತಿ ಆಚರಣೆ ಜೊತೆ ರೇಣುಕಾಚಾರ್ಯರ ತತ್ವಾದರ್ಶಗಳನ್ನು ಎಲ್ಲರೂ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಸಾಲೂರು ಮಠಾಧ್ಯಕ್ಷರಾದ ಡಾ. ಶಾಂತಮಲ್ಲಿಕಾರ್ಜುನಸ್ವಾಮಿಜಿ ಮಾತನಾಡಿ, ದ್ವೇಷ, ಜಂಜಾಟ, ಸ್ವಾರ್ಥದಿಂದಾಗಿ ಇಂದು ನಾವು ಧರ್ಮವನ್ನು ಮರೆಯುತ್ತಿದ್ದೇವೆ. ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಜೊತೆಗೆ ಸಂಸ್ಕಾರವಂತ ಶಿಕ್ಷಣ ಕೊಡಿಸುವುದು ಮುಖ್ಯ ಎಂದರು.

ಮುಡುಕುತೊರೆ ಶ್ರೀಕ್ಷೇತ್ರದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಜಿ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ನಾವೆಲ್ಲರೂ ಒಗ್ಗೂಡಿ ಧರ್ಮ ಉಳಿಸುವ ಕೆಲಸ ಮಾಡಬೇಕಿದೆ. ಎಂದರು. ಧನಗೂರು ಮಠಾಧ್ಯಕ್ಷರಾದ ಮುಮ್ಮಡಿ ಷಡಕ್ಷ ದೇಶಿಕೇಂದ್ರ ಶಿವಾಚಾರ್ಯಸ್ವಾಮೀಜಿ, ಅಶ್ವಥಪುರಿ ನಂಜನಗೂಡು ಮಠಾಧ್ಯಕ್ಷರಾದ ವಿಶ್ವಾರಾಧ್ಯರು ಸೇರಿದಂತೆ ಹಲವು ಗಣ್ಯರು ಮಾತನಾಡಿದರು. ಅಜ್ಜಿಪುರ ಮಠಾಧ್ಯಕ್ಷರಾದ ನಂದೀಶ ಶಿವಾಚಾರ್ಯ ಸ್ವಾಮೀಜಿ, ಮಾಜಿ ಶಾಸಕಿ ಪರಿಮಳ ನಾಗಪ್ಪ, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಹನೂರು ಬಿಜೆಪಿ ನಾಯಕ ನಿಶಾಂತ್, ಹನೂರು ವೀರಶೈವ ಮಹಾಸಭೆ ಅಧ್ಯಕ್ಷ ಗೌಡರ ಸೋಮಶೇಖರ್, ಕೊಳ್ಳೇಗಾಲ ಘಟಕದ ಅಧ್ಯಕ್ಷ ತಿಮ್ಮರಾಜಿಪುರ ಪುಟ್ಟಣ್ಣ, ಅಖಿಲ ಭಾರತ ವೀರಶೈವ ಮಹಾಸಭೆ ಜಿಲ್ಲಾಧ್ಯಕ್ಷ ಮುಡ್ಲೂಪುರ ನಂದೀಶ, ತಾಪಂನ ಮಾಜಿ ಅಧ್ಯಕ್ಷ ಮುರಳಿ, ನಗರಸಭಾ ಸದಸ್ಯರುಗಳಾದ ಜಿ ಪಿ ಶಿವಕುಮಾರ್, ಸುಮ ಸುಬ್ಬಣ್ಣ , ವೀರಶೈವ ನೌಕರರ ಪತ್ತಿನ ಸಂಘದ ಮಲ್ಲೇಶಪ್ಪ ಯುವ ಮುಖಂಡ ತೊಟೇಶ್ ಮಧುವನಹಳ್ಳಿ ಪ್ರಭಾಕರ್, ಶಿವಮೂರ್ತಿ ವೀರಶೇಖರಮೂರ್ತಿ ಜಗದಾಂಬ ಸದಾಶಿವಮೂರ್ತಿ, ಅರುಣಾ ಕಾರ್ತಿಕ್, ರೂಪ ತೊಟೇಶ್ ವೀರಭದ್ರಸ್ವಾಮಿ ಲೊಕೇಶ್, ಯರಿಯೂರು ಮಹದೇವಸ್ವಾಮಿ . ಪಂಚಾಚಾರ್ಯ ಸಮಾಜದ ತಾಲೂಕು ಅಧ್ಯಕ್ಷ ಪರಮೇಶ್, ಶಿವಪ್ರಕಾಶ್, ಗೀತಾ ಶಿವಾನಂದ, ನಟರಾಜಪ್ಪ ಪ್ರಸಾದ್, ಕುಮಾರಸ್ವಾಮಿ, ಮಂಜೇಶ, ಸ್ವಾಮಿ ನಂಜಪ್ಪ ಇನ್ನಿತರಿದ್ದರು.

ಅಕ್ರಮವಾಗಿ ಸಂಗ್ರಹಿಸಿದ್ದ 2 ಟನ್ ಪಡಿತರ ಅಕ್ಕಿ ವಶ

ಚಾಮರಾಜನಗರ, ಮಾ.25–ಖಾಸಗಿ ಗೋಡೌನ್‌ವೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಸುಮಾರು ಎರಡು ಟನ್ ಪಡಿತರ ಅಕ್ಕಿಯನ್ನು ಪಟ್ಟಣ ಠಾಣೆಯ ಪೊಲೀಸರು ವಶಪಡಿಸಿಕೊಂಡಿರುವ ಘಟನೆ ನಡೆದಿದೆ.



ಗೋಡೌನ್ ಮಾಲೀಕರಾದ ಅಬ್ದುಲ್ ಫಮಾನ್ ಹಾಗೂ ಶಹಜಹಾನ್ ಪರಾರಿಯಾಗಿದ್ದು, ಇವರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹಿಂಭಾಗದಲ್ಲಿನ ಎರಡು ಖಾಸಗಿ ಗೋಡೌನ್‌ನಲ್ಲಿ ಸರ್ಕಾರ ನೀಡುವ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಶೇಖರಿಸಿ ಇಡಲಾಗಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪಟ್ಟಣ ಪೊಲೀಸರು ಗೋಡೌನ್‌ಗಳಲ್ಲಿ 24,87.950 ಕೆ.ಜಿ ಸುಮಾರು 37,319 ರೂ. ಮೌಲ್ಯ ಪಡಿತರವನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ದಾಳಿಯಲ್ಲಿ ಪಟ್ಟಣ ಪೊಲೀಸ್ ಠಾಣೆ ಪಿಎಸ್‌ಐ ಮಂಜುನಾಥ್, ಮುಖ್ಯ ಪೇದೆಗಳಾದ ಅಬ್ದುಲ್ ಕಲಾಂ ಅಜಾದ್, ಸೀನನಾಯಕ, ಸಿದ್ದಮಲ್ಲಶೆಟ್ಟಿ, ಡಿ.ಶಾಂತರಾಜು, ಪೇದೆಗಳಾದ ಮೋಹನ್ ಕುಮಾರ್, ಶರತ್, ಪ್ರಭಾರ ಶಿರಸ್ತೇದಾರ ವಿನು ಸೇರಿದಂತೆ ಇತರರಿದ್ದರು.

ಲಾಭದ ಆಸೆಗೆ ಆನ್‌ಲೈನ್‌ನಲ್ಲಿ 2.98 ಕೋಟಿ ಹೂಡಿ ಮೋಸ ಹೋದ ನಿವೃತ್ತ ಅಧಿಕಾರಿ

ಮೈಸೂರು, ಮಾ.25(ಎಸ್‌ಬಿಡಿ)– ನಿವೃತ್ತರೊಬ್ಬರು ಆನ್‌ಲೈನ್ ಟ್ರೇಡಿಂಗ್ ನಲ್ಲಿ ಬರೋಬ್ಬರಿ 2.98 ಕೋಟಿ ರೂ. ಹಣ ಕಳೆದುಕೊಂಡಿದ್ದಾರೆ.

ಮೈಸೂರು ರಾಜರಾಜೇಶ್ವರಿನಗರ ಎರಡನೇ ಹಂತ ಬೆಮೆಲ್ ಲೇಔಟ್ ನಿವಾಸಿಯಾದ 61 ವರ್ಷದ ನಿವೃತ್ತರೊಬ್ಬರು ಲಾಭದಾಸೆಗೆ ನಕಲಿ ಕಂಪನಿಗೆ ಭಾರಿ ಮೊತ್ತವನ್ನು ಹೂಡಿಕೆ ಮಾಡಿ, ಮೋಸ ಹೋಗಿದ್ದಾರೆ.

ಇವರು ಕಳೆದ ಜನವರಿಯಲ್ಲಿ ಫೇಸ್ ಬುಕ್ ನೋಡುವಾಗ ಟ್ರೇಡಿಂಗ್‌ಗೆ ಸಂಬಂಧಿಸಿದ ಜಾಹೀರಾತು ಗಮನಿಸಿದ್ದಾರೆ. ಆ ಜಾಹೀರಾತಿನಲ್ಲಿದ್ದ ಲಿಂಕ್ ಮೇಲೆ ಕ್ಲಿಕ್ ಮಾಡಿದ ತಕ್ಷಣ ಅವರ ಮೊಬೈಲ್ ನಂಬರ್, ಬಾರ್ಕ್ಲೇಸ್ ಹಾಗೂ ಶೇರ್‌ಖಾನ್ ಎಡ್ಜ್ (BARCLAYS AND SHARE KHAN EDGE) ವಾಟ್ಸಾಪ್ ಗ್ರೂಪ್‌ಗೆ ಸೇರ್ಪಡೆಯಾಗಿದೆ.

ಟ್ರೇಡಿಂಗ್ ಬಗ್ಗೆ ಆಸಕ್ತಿಯಿದ್ದ ಕಾರಣ ಆ ಗ್ರೂಪ್‌ನಲ್ಲಿ ಹಂಚಿಕೊಳ್ಳಲಾಗುತ್ತಿದ್ದ ಟ್ರೇಡಿಂಗ್‌ಗೆ ಸಂಬಂಧಿಸಿದ ಮಾಹಿತಿಯನ್ನು ಗಮನಿಸುತ್ತಿದ್ದರು. ಇದೇ ವೇಳೆ ಹೂಡಿಕೆ ಬಗ್ಗೆ ಮಾಹಿತಿ ಕೇಳಿದ್ದರು. ಇವರ ಆಸಕ್ತಿ ಗಮನಿಸಿದ ವಂಚಕರು, ಗ್ರೂಪ್‌ನಲ್ಲಿ ಒಂದು ಲಿಂಕ್ ಕಳುಹಿಸಿ ಟ್ರೇಡಿಂಗ್ ಖಾತೆ ತೆರೆಯಲು ಸೂಚಿಸಿದ್ದರು. ಅದರಂತೆ ಲಿಂಕ್ ಮೇಲೆ ಕ್ಲಿಕ್ ಮಾಡಿದ ನಿವೃತ್ತರು, ಬಾರ್ಕ್ಲೇಸ್ ಹಾಗೂ ಶೇರ್ ಖಾನ್ ಎಡ್ಜ್ ಹೆಸರಿನ ಎರಡೂ ವೆಬ್ ಸೈಟ್‌ಗಳಲ್ಲಿ ಟ್ರೇಡಿಂಗ್ ಖಾತೆ ತೆರೆದರು.

ಆರಂಭದಲ್ಲಿ ಬಾರ್ಕ್ಲೇಸ್ ಟ್ರೇಡಿಂಗ್ ಖಾತೆಯಲ್ಲಿ 90 ಸಾವಿರ ಹಾಗೂ ಶೇರ್‌ಖಾನ್ ಎಡ್ಜ್ ಟ್ರೇಡಿಂಗ್ ಖಾತೆಯಲ್ಲಿ 25 ಸಾವಿರ ರೂ. ಹೂಡಿಕೆ ಮಾಡಿದ್ದಾರೆ. ಇದಕ್ಕೆ ಅವರಿಗೆ ಕ್ರಮವಾಗಿ 14,791 ರೂ. ಹಾಗೂ 2,300 ರೂ. ಲಾಭ ಬಂದಿದೆ. ಇದರಿಂದ ಕಡಿಮೆ ಅವಧಿಯಲ್ಲಿ ಹೆಚ್ಚು ಲಾಭ ಗಳಿಸಬಹುದೆಂದು ನಂಬಿ, ಎರಡೂ ಟ್ರೇಡಿಂಗ್ ಖಾತೆಗಳಲ್ಲಿ ಹಂತ ಹಂತವಾಗಿ ಒಟ್ಟು 2,98,18,838 ರೂ. ಹಣ ಹೂಡಿಕೆ ಮಾಡಿದ್ದಾರೆ.

ಟ್ರೇಡ್ ಮಾಡಿದ ನಂತರ ಲಾಭದ ಹಣವನ್ನು ವಿತ್‌ಡ್ರಾ ಮಾಡಲು ಹೋದಾಗ ಶೇ.20ರಷ್ಟು ತೆರಿಗೆ ಪಾವತಿಸುವಂತೆ ಸೂಚನೆ ಬಂದಿದೆ. ಸದ್ಯಕ್ಕೆ ಹಣವಿಲ್ಲ, ನೀವು ಲಾಭದ ಹಣ ನೀಡಿದ ತಕ್ಷಣವೇ ತೆರಿಗೆ ಮೊತ್ತವನ್ನು ಪಾವತಿಸುವುದಾಗಿ ತಿಳಿಸಿ, ವಿತ್‌ಡ್ರಾ ಮಾಡಲು ಮುಂದಾಗಿದ್ದಾರೆ. ಆದರೆ ಎಷ್ಟು ಬಾರಿ ಪ್ರಯತ್ನಿಸಿದರೂ ಅವರ ರಿಕ್ವೆಸ್ಟ್ ರಿಜೆಕ್ಟ್ ಆಗಿದ್ದರಿಂದ ಮೋಸ ಹೋಗಿರುವುದು ಅರಿವಾಗಿದೆ. ಈ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಕ್ತ ವಿವಿ ಕುಲಪತಿ, ಕುಲಸಚಿವರ ವಿರುದ್ಧ ಭ್ರಷ್ಟಾಚಾರ ಆರೋಪ



ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾಗಿರುವ ವಿಶ್ರಾಂತ ಕುಲಪತಿ ಡಾ.ಎನ್.ಆರ್.ನಿರಂಜನ್ ಅವರಿಗೆ ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ರಾಜ್ಯಾಧ್ಯಕ್ಷ ಜಾಕಿರ್ ಹುಸೇನ್ ಮಾಹಿತಿ ನೀಡಿದರು.

ಮೈಸೂರು, ಮಾ. 25– ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಕ್ರಮ ನೇಮಕಾತಿ ಹಾಗೂ ಹಣ ದುರುಪಯೋಗವಾಗಿದೆ ಎಂಬ ಆರೋಪ ಸಂಬಂಧ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾಗಿರುವ ವಿಶ್ರಾಂತ ಕುಲಪತಿ ಡಾ.ಎನ್.ಆರ್.ನಿರಂಜನ್ ಮಾಹಿತಿ ಸಂಗ್ರಹಿಸಿದರು.

ಇವರಿಗೆ ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ರಾಜ್ಯಾಧ್ಯಕ್ಷ ಜಾಕಿರ್ ಹುಸೇನ್ ನಿನ್ನೆ ಸತತ ಆರು ಗಂಟೆಗಳ ಕಾಲ ವಿವರಣೆ ನೀಡಿದರು. ಮುಕ್ತ ವಿವಿಯ ಅಕ್ರಮ ನೇಮಕಾತಿ ವಿರುದ್ಧ ನಮ್ಮ ಸಮಿತಿಯು ಪತ್ರ ಚಳುವಳಿ ನಡೆಸಿತ್ತು ಸರ್ಕಾರದ ಅನುಮತಿ ಅಥವಾ ಅನುಮೋದನೆ ಪಡೆಯದೆ ಅನವಶ್ಯಕ ಬೋಧಕ ಹಾಗೂ ಬೋಧಕೇತರ ನೌಕರರ ನೇಮಕಾತಿ ಹಾಗೂ ಕಟ್ಟಡ ನಿರ್ಮಾಣದ ಮೂಲಕ ಅವ್ಯವಹಾರ ನಡೆಸಿದ್ದು, ಮುಕ್ತ ವಿವಿ ಮುಚ್ಚುವ ಹಂತ ತಲುಪಿದೆ ಎಂದು ತಿಳಿಸಿದರು.

ಈ ವೇಳೆ ಡಿ.ದೇವರಾಜ್ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿ ರಾಜ್ಯ ಪ್ರಧಾನ ಸಂಚಾಲಕ ಡೈರಿ ವೆಂಕಟೇಶ್, ಸಂಘಟನಾ ಕಾರ್ಯದರ್ಶಿ ಪ್ರಶಾಂತ್ ಆರ್ಯ ಹಾಗೂ ಮುಕ್ತ ವಿವಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

'ಸೇವ್ ಎ ಚೈಲ್ಡ್ ಪ್ರಾಜೆಕ್ಟ್'ನ ವಿಸ್ತರಣಾ ಕಾರ್ಯಕ್ರಮಕ್ಕೆ ಚಾಲನೆ

● ಮಕ್ಕಳ ಆರೋಗ್ಯ ರಕ್ಷಣೆಯ ಮಹತ್ವದ ಯೋಜನೆ ವಿಸ್ತರಣೆಗೆ ಚಾಲನೆ ನೀಡಿದ ಸುತ್ತೂರು ಶ್ರೀಗಳು ● ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಈ ಯೋಜನೆಯಡಿ ಈವರೆಗೆ 700ಕ್ಕೂ ಹೆಚ್ಚು ಮಕ್ಕಳಿಗೆ ಆರೋಗ್ಯ ಭಾಗ್ಯ



ಮೈಸೂರಿನ ಸರಸ್ವತಿಪುರಂನ ರೋಟರಿ ಮೈಸೂರು ವೆಸ್ಟ್ ಸ್ಕೂಲ್‌ನ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಸೇವ್ ಎ ಚೈಲ್ಡ್ ಪ್ರಾಜೆಕ್ಟ್'ನ ವಿಸ್ತರಣಾ ಕಾರ್ಯಕ್ರಮಕ್ಕೆ ಸುತ್ತೂರು ಶ್ರೀಗಳು (ಎಡದಿಂದ 4ನೇಯವರು) ಚಾಲನೆ ನೀಡಿದರು. (ಎಡದಿಂದ) ಸೈರೇನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ ನಿರ್ದೇಶಕ ಹೋಜುನ್ ತಕಾಹಶಿ, ಸೇವ್ ಎ ಚೈಲ್ಡ್ ಪ್ರಾಜೆಕ್ಟ್ ಅಧ್ಯಕ್ಷ ಸ್ಯಾಮ್ ಚೆರಿಯನ್, ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಅಧ್ಯಕ್ಷ ಎಂ.ಎಲ್.ನಾಗೇಶ್, ಕಾರ್ಯದರ್ಶಿ ಎಂ.ದೇವರಾಜು, ಸಮುದಾಯ ಸೇವೆ ನಿರ್ದೇಶಕಿ ಡಾ.ಪ್ರತಿಭಾ ಪೆರೇರಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ.25(ಪಿಎಂ)– ಆರ್ಥಿಕವಾಗಿ ಹಿಂದುಳಿದ ಕುಟುಂಬದ ಮಕ್ಕಳ ಆರೋಗ್ಯ ರಕ್ಷಣೆಯ ಮಹತ್ವದ ಯೋಜನೆ 'ಸೇವ್ ಎ ಚೈಲ್ಡ್ ಪ್ರಾಜೆಕ್ಟ್'ನ ವಿಸ್ತರಣಾ ಕಾರ್ಯಕ್ರಮಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಿದರು. ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಈ ಯೋಜನೆಯು 700ಕ್ಕೂ ಹೆಚ್ಚು ಮಕ್ಕಳಿಗೆ ಆರೋಗ್ಯ ರಕ್ಷಣೆಗೆ ವೈದ್ಯಕೀಯ ಸೇವೆ ಕಲ್ಪಿಸಿದ ಹಿರಿಮೆ ಹೊಂದಿದೆ.

ಮೈಸೂರಿನ ಸರಸ್ವತಿಪುರಂನ ರೋಟರಿ ಮೈಸೂರು ವೆಸ್ಟ್ ಸ್ಕೂಲ್‌ನ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸುತ್ತೂರು ಶ್ರೀಗಳು ದೀಪ ಬೆಳಗುವ ಮೂಲಕ ಸದರಿ ಯೋಜನೆಯ ವಿಸ್ತರಣೆಗೆ ಚಾಲನೆ ನೀಡಿದರು. 2011–12ರಲ್ಲಿ ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಅಧ್ಯಕ್ಷರಾಗಿದ್ದ ಸ್ಯಾಮ್ ಚೆರಿಯನ್ ಅವರ ದೃಷ್ಟಿಕೋನದಲ್ಲಿ ಈ ಯೋಜನೆ ಪ್ರಾರಂಭಗೊಂಡಿತು. ಅಂದಿನಿಂದ ರೋಟರಿಯನ್ನರು, ದಾನಿಗಳು, ಹೃದಯವಂತರು ನೀಡಿದ ಸಹಾಯದಿಂದ ಈ ಮಾನವೀಯ ಸ್ಪರ್ಶದ ಯೋಜನೆ ವಿಸ್ತಾರಗೊಂಡಿದೆ.

ಉದ್ಘಾಟನೆ ನೆರವೇರಿಸಿ ಮಾತನಾಡಿದ ಸುತ್ತೂರು ಶ್ರೀಗಳು, ಸ್ಯಾಮ್ ಚೆರಿಯನ್ ಅವರು ಈ ಯೋಜನೆಗೆ ಸ್ಪಂದಿಸಿದ ರೀತಿ ಪ್ರಶಂಸನೀಯ. ಯೋಜನೆಯಿಂದ ಅದೆಷ್ಟೋ ಮಕ್ಕಳಿಗೆ ಅನುಕೂಲವಾದ ಸಂಗತಿ ಬಗ್ಗೆ ಅವರೇ ಇದೀಗ ಪ್ರಸ್ತಾಪಿಸಿದ್ದಾರೆ. ಸಮಾಜದಲ್ಲಿ ಎಲ್ಲರೂ ಅನುಕೂಲವಾದ ಸ್ಥಿತಿಯಲ್ಲಿ ಜೀವನ ನಡೆಸಲು ಸಾಧ್ಯವಾಗುವುದಿಲ್ಲ. ಆರ್ಥಿಕ ಅಸಮಾನತೆ ಜಗತ್ತಿನ ಎಲ್ಲಾ ಕಡೆ ಇರುವಂತಹದ್ದೇ. ನಾವೆಲ್ಲಾ ಸಾಮಾನ್ಯವಾಗಿ ಅಮೆರಿಕದಲ್ಲಿ ಶೇ.100ರಷ್ಟು ಎಲ್ಲರೂ ಎಲ್ಲಾ ರೀತಿಯ ಸೌಲಭ್ಯಗಳನ್ನು ಹೊಂದಿದ್ದಾರೆ ಎಂದು ಕೊಳ್ಳುತ್ತೇವೆ. ಅಲ್ಲಿಯೂ ಸೌಲಭ್ಯಗಳಿಂದ ವಂಚಿತವಾದ ಜನ ಇದ್ದಾರೆ ಎಂದು ತಿಳಿಸಿದರು.

ಸಂಪತ್ತು ಇದ್ದೂ ಸಹಾಯ ಮಾಡುವುದು ಮರೆತರೆ ಅಂತಹವರಿಗೆ ಶ್ರೇಯಸ್ಸು ದೊರೆಯುವುದಿಲ್ಲ. ದೇವರು ಕೊಟ್ಟ ಸಂಪತ್ತನ್ನು ಹಂಚಿಕೊಳ್ಳದೇ ಇದ್ದರೆ ಅದು ಕರಗಿ ಹೋಗುವ ಕಾಲವೂ ಬರುತ್ತದೆ. ನೊಂದ ಜೀವಗಳಿಗೆ ಸ್ಪಂದಿಸುವ ಮೂಲಕ ನಮ್ಮಲ್ಲಿಯೂ ಸುಖ ಸಂತೋಷ ಮೂಡಲು ಸಾಧ್ಯವಾಗಲಿದೆ. ಸಹಾಯ ಮಾಡಲು ಕೇವಲ ಹಣ ಒಂದೇ ಇರಬೇಕೆಂದಿಲ್ಲ. ತಮಗೆ ಗೊತ್ತಿರುವ ಆರ್ಥಿಕ ಸ್ಥಿತಿವಂತರಿಗೆ ಇಂತಹ ಯೋಜನೆಗಳ ಬಗ್ಗೆ ಹೇಳಿದರೂ ಸಾಕು. ಹಲವರು ಆರ್ಥಿಕ ಸ್ಥಿತಿವಂತರು ಸಹಾಯ ಮಾಡಲು ಮನಸ್ಸು ಹೊಂದಿರುತ್ತಾರೆ ಎಂದು ಹೇಳಿದರು.

ನಾನು ಕೊಟ್ಟೆ ಎನ್ನದೇ ಭಗವಂತ ಕೊಡಿಸಿದ ಎಂದುಕೊಂಡರೆ ಶ್ರೇಯಸ್ಸು ದೊರೆಯಲಿದೆ. ಸಂಪತ್ತು ಪೂರ್ಣವಾಗಿ ಕೊಟ್ಟು ಮನೆ ಖಾಲಿ ಮಾಡಿಕೊಳ್ಳಬೇಕೆಂದಿಲ್ಲ. ದೇವರು ಕೊಟ್ಟಿರುವುದನ್ನು ಸಾಧ್ಯವಾಗದಷ್ಟು ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಇತ್ತೀಚೆಗೆ ಹಿರಿಯ ನಾಗರಿಕರ ಕೋಶ ಪ್ರಾರಂಭ ಮಾಡಲಾಗಿದೆ. ಆ ಮೂಲಕ ಹಿರಿಯ ನಾಗರಿಕರಿಗೆ ಸ್ಪಂದಿಸುವ ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು.

ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾತನಾಡಿ, ವಾಟ್ಸಪ್‌ನಲ್ಲಿ ಓದಿದ ಕಥೆಯೊಂದು ಈಗ ನೆನಪಾಗುತ್ತಿದೆ. ಅದೆಂದರೆ, ಒಬ್ಬ ಅತೃಪ್ತ ಶ್ರೀಮಂತನು ವಿಶೇಷ ಮಕ್ಕಳಿಗೆ ಅಗತ್ಯವಿರುವ ವೀಲ್‌ಚೇರ್‌ಗಳನ್ನು ದಾನ ಮಾಡುವ ಮೂಲಕ ತೃಪ್ತಿಯ ಭಾವ ಅನುಭವಿಸುವ ಕಥೆ ಅದು. ಶ್ರೀಮಂತ ವ್ಯಕ್ತಿಯು ದಾನ ನೀಡಿದ ಬಳಿಕ ಅಲ್ಲಿಂದ ಹೋಗುವಾಗ ಮಗುವೊಂದು ಬಂದು ಆತನನ್ನು ಅಪ್ಪಿಕೊಂಡಿತು. ಆಗ ಶ್ರೀಮಂತನಿಗೆ ನಿಜವಾದ ಸಂತೋಷ ಯಾವಾಗ ದೊರೆಯುತ್ತದೆ ಎಂಬುದು ಅರ್ಥವಾಯಿತು ಎಂದರು.

ನಮ್ಮಲ್ಲಿ ಸಹಾನುಭೂತಿಯ ಗುಣ ಇರಬೇಕು. ಅಂತಹ ಸಹಾನುಭೂತಿಯ ಕಾರ್ಯಕ್ರಮಕ್ಕೆ ನಾನು ಇಂದು ಸಾಕ್ಷಿಯಾಗಿದ್ದೇನೆ. ಸ್ಯಾಮ್ ಚೆರಿಯನ್ ಅವರು ಸೇವ್ ಎ ಚೈಲ್ಡ್ ಮೂಲಕ ಸಮಾಜಕ್ಕೆ ಸ್ಪಂದಿಸುವ ಯೋಜನೆ ಕೈಗೊಂಡಿದ್ದಕ್ಕಾಗಿ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಅಂತೆಯೇ ದೇಶದಲ್ಲಿ ಅಪೌಷ್ಟಿಕತೆ ತಡೆಗಟ್ಟುವ ಬಗ್ಗೆಯೂ ಗಮನ ಹರಿಸುವ ಅಗತ್ಯವಿದೆ. ಬಹುಶಃ ಒಂದೆಡೆ 200 ಮಿಲಿಯನ್‌ಗಿಂತಲೂ ಹೆಚ್ಚು ಜನರು ಹಸಿವಿನಿಂದ ಬಳಲುತ್ತಿದ್ದಾರೆ. ಇದರ ಜೊತೆಗೆ ಆರೋಗ್ಯ ಸಮಸ್ಯೆಗಳು ಜನರಲ್ಲಿ ಹೆಚ್ಚಾಗುತ್ತಿದ್ದು, ಆಸ್ಪತ್ರೆಗಳು ರೋಗಿಗಳಿಂದ ತುಂಬಿ ತುಳುಕುವ ಸ್ಥಿತಿಯೂ ನಿರ್ಮಾಣವಾಗಿದೆ. ನಿಮ್ಮ ಈ ಯೋಜನೆಗೆ ಸಿಎಫ್‌ಟಿಆರ್‌ಐನಿಂದ ಸಾಧ್ಯವಾಗುವ ಸಹಕಾರ ನೀಡಲು ಹರ್ಷಿಸುತ್ತೇನೆ ಎಂದರು.

ಸೇವ್ ಎ ಚೈಲ್ಡ್ ಪ್ರಾಜೆಕ್ಟ್ ಅಧ್ಯಕ್ಷ ಸ್ಯಾಮ್ ಚೆರಿಯನ್ ಮಾತನಾಡಿ, ಈ ದಿನ ನನಗೆ ಅತ್ಯಂತ ಮುಖ್ಯ. ಏಕೆಂದರೆ 2011ರಲ್ಲಿ ನಾನು ರೋಟರಿ ಮೈಸೂರು ವೆಸ್ಟ್‌ನ ಆಗಿನ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡಾಗ, ಸಮಾಜಕ್ಕೆ ಏನಾದರೂ ಸಹಾಯಹಸ್ತ ನೀಡಬೇಕೆಂಬ ಒತ್ತಾಸೆಯಿಂದ ಈ ಯೋಜನೆ ಪ್ರಾರಂಭ ಮಾಡಿದೆ. ಆ ಸಮಯದಲ್ಲಿ ನನಗೆ ಒಳ್ಳೆಯ ಸ್ನೇಹಿತ ಡಾ.ಉಮೇಶ್ ಕಾಮತ್ ಸಹಕಾರ ನೀಡಿದರು ಎಂದು ನೆನಪಿಸಿಕೊಂಡರು.

ಕಾಮಾಕ್ಷಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಉಮೇಶ್ ಕಾಮತ್ ಯೋಜನೆ ಬಗ್ಗೆ ವಿವರಿಸಿದರು. ಸೈರೇನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ ನಿರ್ದೇಶಕ ಹೋಜುನ್ ತಕಾಹಶಿ, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಅಧ್ಯಕ್ಷ ಎಂ.ಎಲ್.ನಾಗೇಶ್, ಕಾರ್ಯದರ್ಶಿ ಎಂ.ದೇವರಾಜು, ಸಮುದಾಯ ಸೇವೆ ನಿರ್ದೇಶಕಿ ಡಾ.ಪ್ರತಿಭಾ ಪೆರೇರಾ ವೇದಿಕೆಯಲ್ಲಿದ್ದರು. ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಉದ್ಯಮಿ ಜಗನ್ನಾಥ ಶೆಣೈ, ಕಾಮಾಕ್ಷಿ ಆಸ್ಪತ್ರೆ ಮ್ಯಾನೆಜಿಂಗ್ ಟ್ರಸ್ಟಿ ಮಹೇಶ್ ಶೆಣೈ ಮತ್ತಿತರರು ಹಾಜರಿದ್ದರು.

30.55 ಲಕ್ಷ ದೇಣಿಗೆ...

ಇದೇ ವೇಳೆ ಸೈರೇನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯಿಂದ ಸಿಎಸ್‌ಆರ್ ನಿಧಿಯಡಿ 30,55,000 ರೂ.ಗಳನ್ನು ಸೇವ್ ಎ ಚೈಲ್ಡ್ ಪ್ರಾಜೆಕ್ಟ್‌ಗೆ ದೇಣಿಗೆಯಾಗಿ ನೀಡಲಾಯಿತು. ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಪದಾಧಿಕಾರಿಗಳಿಗೆ ಕಂಪನಿಯ ನಿರ್ದೇಶಕ ಹೋಜುನ್ ತಕಾಹಶಿ ಚೆಕ್ ಅನ್ನು ವಿತರಣೆ ಮಾಡಿದರು. ಈ ಯೋಜನೆಯಡಿ ಹೆಚ್ಚಿನ ಮಕ್ಕಳಿಗೆ ಆರೋಗ್ಯ ಸೇವೆ ಒದಗಿಸಲು ರೋಟರಿ ಮೈಸೂರು ವೆಸ್ಟ್ ಮುಂದಾಗಿದೆ. ಈ ನಿಟ್ಟಿನಲ್ಲಿ ಮೈಸೂರು ಮತ್ತು ಸುತ್ತಮುತ್ತಲ ಆಸ್ಪತ್ರೆಗಳು ಮತ್ತು ವೈದ್ಯಕೀಯ ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸಿ ಅವುಗಳನ್ನು ತೊಡಗಿಸಿಕೊಳ್ಳುವಂತೆ ಮಾಡಲು ಸದರಿ ರೋಟರಿ ಸಂಸ್ಥೆ ಕಾರ್ಯಪ್ರವೃತ್ತವಾಗಿದೆ.

ಮೈಸೂರು ಅರಮನೆ ಆವರಣದಲ್ಲಿ 3 ದಿನಗಳ ಯುಗಾದಿ ಸಂಗೀತೋತ್ಸವ

ಮೈಸೂರು, ಮಾ.25(ಎಂಟಿವೈ)– ಯುಗಾದಿ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಆವರಣದಲ್ಲಿ ಅರಮನೆ ಮಂಡಳಿ ಮಾ.30ರಿಂದ ಏ.1ರವರೆಗೆ 'ಯುಗಾದಿ ಸಂಗೀತೋತ್ಸವ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಪ್ರತಿವರ್ಷದಂತೆ ಈ ಬಾರಿಯೂ ಅರಮನೆ ಆವರಣದಲ್ಲಿ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಮೇಳೈಸಲಿದೆ. ಮಾ.30ರಂದು ಸಂಜೆ 7ಕ್ಕೆ ಸಂಗೀತೋತ್ಸವಕ್ಕೆ ಚಾಲನೆ ದೊರೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಶಾಸಕರು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಭಾ ಕಾರ್ಯಕ್ರಮದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ.



ಮೊದಲ ದಿನ: ಮಾ.30ರಂದು ಸಂಜೆ 5 ರಿಂದ 6 ಗಂಟೆವರೆಗೆ ಅಜಿತ್ ಎಸ್. ತಂಡದಿಂದ ಸ್ಯಾಕ್ಸೋಫೋನ್ ಕಾರ್ಯಕ್ರಮ, ಸಂಜೆ 6ರಿಂದ 6.30ರವರೆಗೆ ಸೇವಾ ರತ್ನ ಪುರಸ್ಕೃತ ಡಾ. ಶ್ರೀಧರ ಮೂರ್ತಿ ಅವರಿಂದ 'ಪಂಚಾಂಗ ಶ್ರವಣ', ಸಂಜೆ 6.45ರಿಂದ 7ರವರೆಗೆ ಚಂದನ ಆರ್. ತಂಡದಿಂದ 'ನಾಡಗೀತೆ' ಮತ್ತು ಮೈಸೂರು ಸಂಸ್ಥಾನದ ನಾಡಗೀತೆ 'ಕಾಯೌ ಶ್ರೀ ಗೌರಿ ಕರುಣಾ ಲಹರಿ' ಗೀತ ಗಾಯನ, ರಾತ್ರಿ 7.30ರಿಂದ 9.30ರವರೆಗೆ ಹಿನ್ನೆಲೆ ಗಾಯಕರಾದ ಅಜಯ್ ವಾರಿಯರ್, ಇಂದು ನಾಗರಾಜ್, ಕಂಬದ ರಂಗಯ್ಯ, ಶಶಿಕಲಾ ಮತ್ತು ತಂಡದಿಂದ 'ಸ್ವರ ವೈಭವ' ಕಾರ್ಯಕ್ರಮ ಜರುಗಲಿದೆ.

2ನೇ ದಿನ: ಮಾ.31ರಂದು ಸಂಜೆ 5.30ರಿಂದ 6ರವರೆಗೆ ಉಪ್ಪುಂದ ರಾಜೇಶ ಪಡಿಯಾರ್ ತಂಡದಿಂದ 'ಕನ್ನಡವೇ ಸತ್ಯ' ಸುಗಮ ಸಂಗೀತ, ಸಂಜೆ 6.15ರಿಂದ 6.45ರವರೆಗೆ ಕು. ಅನನ್ಯ ಅವರ ತಂಡದಿಂದ 'ಭರತ ನಾಟ್ಯ', ರಾತ್ರಿ 7ರಿಂದ 7.30ರವರೆಗೆ ವಿ.ರವಿಕುಮಾರ್ ಮತ್ತು ತಂಡದಿಂದ ಚಲನಚಿತ್ರಗೀತೆಗಳ ಗಾಯನ, ರಾತ್ರಿ 7.45ರಿಂದ 9.45ರವರೆಗೆ ಹಿನ್ನೆಲೆ ಗಾಯಕ ನವೀನ್ ಸಜ್ಜು ಮತ್ತು ತಂಡದಿಂದ 'ಸಂಗೀತ ಗಾನಾಮೃತ' ಕಾರ್ಯಕ್ರಮ ನಡೆಯಲಿದೆ.

3ನೇ ದಿನ: ಏ.1ರಂದು ಸಂಜೆ 5.30ರಿಂದ 6 ಗಂಟೆವರೆಗೆ ಆಕಾಶವಾಣಿ ಕಲಾವಿದ ಆರ್.ಮೋಹನ್ ಮತ್ತು ತಂಡದಿಂದ 'ಕ್ಲಾರಿಯೋನೆಟ್ ಮತ್ತು ವಾದ್ಯ ವೈವಿಧ್ಯತೆ' ಕಾರ್ಯಕ್ರಮ. ಸಂಜೆ 6.15ರಿಂದ 6.45ರವರೆಗೆ ಕಲಾವಿದ ಡಾ.ಎಂ.ಪಿ. ಪ್ರೀತಮ್ ಮತ್ತು ತಂಡದಿಂದ ಕನ್ನಡ, ಹಿಂದಿ, ಕೊರಿಯಾ ಗೀತೆಗಳ ನೃತ್ಯ, ರಾತ್ರಿ 7ರಿಂದ 7.45ರವರೆಗೆ ದೀಪಿಕಾ ಶ್ರೀಕಾಂತ್ ತಂಡದಿಂದ ಸುಗಮ ಸಂಗೀತ. ರಾತ್ರಿ 8 ರಿಂದ 9ರವರೆಗೆ ನಿವೃತ್ತ ಅಧಿಕಾರಿ ಡಾ. ಕಾ. ರಾಮೇಶ್ವರಪ್ಪ ಅವರ ಇನಿದನಿ ಮಣ್ಣ ಮಕ್ಕಳ ಹೊನ್ನ ಪದಗಳ ಬಳಗ ವತಿಯಿಂದ 'ಜಾನಪದವೇ ಸತ್ಯ–ಜಾನಪದವೇ ನಿತ್ಯ' ಜಾನಪದ ಗೀತೆಗಳ ಗಾಯನ ಕಾರ್ಯಕ್ರಮ ಮೂಡಿ ಬರಲಿದೆ.

ಉದಯಗಿರಿ ಠಾಣೆ ಮೇಲೆ ಕಲ್ಲು ತೂರಾಟ

ಎಸ್‌ಐ ಸೇರಿ ಮೂವರ ಅಮಾನತು

ಮೈಸೂರು, ಮಾ. 25– ನಗರದ ಉದಯಗಿರಿ ಪೊಲೀಸ್ ಠಾಣೆ ಮೇಲೆ ದಾಳಿ ಪ್ರಕರಣ ಸಂಬಂಧ ಒಂದೂವರೆ ತಿಂಗಳ ಬಳಿಕ ಸಬ್‌ಇನ್ಸ್‌ಪೆಕ್ಟರ್ ಸೇರಿ ಮೂವರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ.

ಸಬ್‌ಇನ್ಸ್‌ಪೆಕ್ಟರ್ ರೂಪೇಶ್, ಹೆಡ್ ಕಾನ್ಸ್‌ಟೇಬಲ್ ಪ್ರಕಾಶ್ ಹಾಗೂ ಸಾಮಾಜಿಕ ಮಾಧ್ಯಮ ಪರಿಶೀಲನೆ ಜವಾಬ್ದಾರಿ ಹೊಂದಿದ್ದ ಕಾನ್‌ಸ್ಟೇಬಲ್ ಸಂತೋಷ್ ಅವರನ್ನು ಅಮಾನತುಗೊಳಿಸಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶಿಸಿದ್ದಾರೆ.

ಮುಸ್ಲಿಂ ಧರ್ಮಕ್ಕೆ ಸಂಬಂಧಿಸಿದ ಸಂದೇಶವನ್ನು ಮೂವರು ರಾಜಕೀಯ ನಾಯಕರ ಫೋಟೋ ಮೇಲೆ ಪೇಸ್ಟ್ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ಆರೋಪದಡಿ ಸತೀಶ್ ಅವರನ್ನು ಬೆಳಗ್ಗೆ ಠಾಣೆಗೆ ಕರೆತಂದರೂ, ಆತನ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಸಾವಿರಾರು ಸಂಖ್ಯೆಯ ಜನ ಠಾಣೆ ಮುಂದೆ ಜಮಾಯಿಸಿದ್ದರು. ಆ ವೇಳೆ ಪೊಲೀಸ್ ಅಧಿಕಾರಿಗಳು, ಠಾಣೆ ಹಾಗೂ ಅವರ ವಾಹನಗಳ ಮೇಲೆ ಕಲ್ಲು ತೂರಾಟ ನಡೆದ ಹಿನ್ನೆಲೆಯಲ್ಲಿ ಉದ್ವಿಗ್ನ ಪರಿಸ್ಥಿತಿ ಸೃಷ್ಟಿಯಾಗಿತ್ತು ಅದಕ್ಕೆ ಪೊಲೀಸರ ನಿರ್ಲಕ್ಷ್ಯ ಹಾಗೂ ಕರ್ತವ್ಯಲೋಪವೇ ಕಾರಣ ಎನ್ನಲಾಗಿತ್ತು. ಘಟನೆ ಬಳಿಕ ಎಸ್‌ಐ ರೂಪೇಶ್ ಅವರನ್ನು ಕಮಿಷನರ್ ಕಚೇರಿಯ ಆಟೊಮೇಷನ್ ಕೇಂದ್ರಕ್ಕೆ ವರ್ಗಾಯಿಸಲಾಗಿತ್ತು.


ವಿಕ್ರಾಂತ್ ಪಿ.ದೇವೇಗೌಡರಿಗೆ ಹುಟ್ಟುಹಬ್ಬದ ಸಂಭ್ರಮ...



ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷರಾದ ವಿಕ್ರಾಂತ್ ಪಿ.ದೇವೇಗೌಡ ಅವರನ್ನು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಮೋಹನ್, ಸುರೇಶ್, ಅನಿಲ್, ಹರೀಶ್, ವಿವೇಕ್ ಪ್ರವೀಣ್, ರವಿ, ಪ್ರದೀಪ್ (ದೇವೇಗೌಡ) ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರಲ್ಲಿ 'ಚಾಮಯ್ಯ ಮೇಷ್ಟ್ರು ಕೆ.ಎಸ್.ಅಶ್ವತ್ಥ್' ಜನ್ಮ ಶತಾಬ್ದಿ

ನೆರೆದ ಹಿರಿಯ ಕಲಾವಿದರು, ಗಣ್ಯರಿಂದ ಗುಣಗಾನ



'ನಮ್ಮ ಚಾಮಯ್ಯ ಮೇಷ್ಟ್ರು ಕೆ.ಎಸ್.ಅಶ್ವಥ್ ಜನ್ಮ ಶತಾಬ್ದಿ' ಕಾರ್ಯಕ್ರಮವನ್ನು ಮಂಗಳವಾರ ಆಚರಿಸಲಾಯಿತು.

ಮೈಸೂರು, ಮಾ.25(ಎಸ್‌ಪಿಎನ್)– ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ನಿರ್ದೇಶನದ ನಾಗರ ಹಾವು ಚಿತ್ರದಲ್ಲಿ ಬರುವ ಚಾಮಯ್ಯ ಮೇಷ್ಟ್ರು ಪಾತ್ರ ಇಂದಿನ ಶಿಕ್ಷಕ ಸಮುದಾಯದ ಸಾಕ್ಷಿ ಪ್ರಜ್ಞೆ ಎಂಬ ಅಭಿಪ್ರಾಯ ಕೆ.ಎಸ್.ಅಶ್ವಥ್ ಜನ್ಮ ಶತಾಬ್ದಿ ಕಾರ್ಯಕ್ರಮದಲ್ಲಿ ನೆರೆದಿದ್ದ ಗಣ್ಯರಿಂದ ವ್ಯಕ್ತವಾಯಿತು.

ಮೈಸೂರು ಕಲಾಮಂದಿರದಲ್ಲಿ ಕೆ.ಎಸ್.ಅಶ್ವಥ್ ಬಂಧು–ಬಳಗ, ಕರ್ನಾಟಕ ಸುಗಮ ಸಂಗೀತ ಪರಿಷತ್, ಹಾಗೂ ಕದಂಬ ರಂಗವೇದಿಕೆಯ ಅಧ್ಯಕ್ಷ ರಾಜಶೇಖರ ಕದಂಬ ಅವರ ಸಹಕಾರದೊಂದಿಗೆ ಆಯೋಜಿಸಿದ್ದ ನಮ್ಮ ಚಾಮಯ್ಯ ಮೇಷ್ಟ್ರು ಕೆ.ಎಸ್.ಅಶ್ವಥ್ ಜನ್ಮ ಶತಾಬ್ದಿ ಕಾರ್ಯಕ್ರಮದಲ್ಲಿ ಹಿರಿಯ ನಟ ಶ್ರೀನಾಥ್, ಹಿರಿಯ ಪತ್ರಕರ್ತ ರಂಗನಾಥ್ ಭಾರದ್ವಜ್, ಮಾಜಿ ಸಚಿವ ಕುಮಾರ್ ಬಂಗಾರಪ್ಪ, ಹಿರಿಯ ನಟಿ ಗಿರಿಜಾ ಲೋಕೇಶ್, ದೊಡ್ಡಣ್ಣ ಇತರರು ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ರಂಗನಾಥ್ ಭಾರದ್ವಜ್ ಮಾತನಾಡಿ, ಪುಟ್ಟಣ್ಣ ಕಣಗಾಲ್ ನಿರ್ದೇಶನದ ನಾಗರಹಾವು ಚಿತ್ರದಲ್ಲಿ ಬರುವ ಚಾಮಯ್ಯ ಮೇಷ್ಟ್ರು ಪಾತ್ರ ಎಂದೆಂದಿಗೂ ಅಜರಾಮರ. ಈ ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ತರಾಸು ಅವರು, ವೀಕ್ಷಿಸಿ, ಇದು ನಾಗರಹಾವು ಅಲ್ಲ.. ಕೆರೆಹಾವು ಎಂದಿದ್ದರು. ನಾಗರಹಾವು ಚಿತ್ರತಂಡ ಈ ಮಾತನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಸಣ್ಣಸಣ್ಣ ಪಾತ್ರಗಳಿಗೂ ಜೀವತುಂಬಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಮಲೆಯಾಳಂ, ತೆಲುಗು, ತಮಿಳು ಚಿತ್ರರಂಗದಲ್ಲಿನ ಸಿನಿಮಾ ಸಂಬಂಧಿಸಿದ ಯಾವುದೇ ಕಾರ್ಯಕ್ರಮ ನಡೆದರೂ ಅಲ್ಲಿನ ಕಲಾವಿದರು ಒಂದುಗೂಡಿ ಕೆಲಸ ಮಾಡುತ್ತಿದ್ದಾರೆ. ಆದರೆ, ನಮ್ಮ ಕನ್ನಡದ ಕಲಾವಿದರಿಗೆ ಸಾಮೂಹಿಕ ಬದ್ಧತೆ ಇಲ್ಲ. ಇಂತಹ ಹಿರಿಯ ಚೇತನ ಕೆ.ಎಸ್.ಅಶ್ವಥ್ ಅವರ ಕಾರ್ಯಕ್ರಮಕ್ಕೆ ಕಲಾವಿದರೂ ಒಂದು ಕುಟುಂಬವಾಗಿ ಸೇರಬೇಕಿತ್ತು ಎಂದು ಕಿವಿಮಾತು ಹೇಳಿದರು.

ನಟ ಶ್ರೀನಾಥ್ ಮಾತನಾಡಿ, ಕೆಎಸ್.ಅಶ್ವಥ್ ಅವರು, ಸಿನಿಮಾ ಕ್ಷೇತ್ರದಲ್ಲಿ ಎತ್ತರದ ವ್ಯಕ್ತಿತ್ವ. ಅವರು ಅಭಿನಯಿಸಿರುವ ಒಂದೊಂದು ಚಿತ್ರವೂ ಅದ್ಭುತವಾಗಿದ್ದವು. ಅಂದಿನ ಸಂದರ್ಭದಲ್ಲಿ ಚಿತ್ರತಂಡ ಸಮೂಹವಾಗಿ ಕೆಲಸ ಮಾಡುತ್ತಿದ್ದವು. ಹಾಗಾಗಿ ಕೆ.ಎಸ್.ಅಶ್ವಥ್ ಅವರ ಹೆಸರು ಮೈಸೂರು ನಗರದ ಯಾವುದೇ ಉದ್ಯಾನವನ ಇಲ್ಲವೇ ರಸ್ತೆಗೆ ನಾಮಕರಣ ಮಾಡುವಂತೆ ಒತ್ತಾಯಿಸಿದರು.

ಮಾಜಿ ಸಚಿವ ಕುಮಾರ ಬಂಗಾರಪ್ಪ ಮಾತನಾಡಿ, ಡಾ.ರಾಜ್‌ಕುಮಾರ್, ಕೆ.ಎಸ್.ಅಶ್ವತ್ಥ್, ಟಿ.ಎನ್.ಬಾಲಕೃಷ್ಣ, ದೊಡ್ಡಣ್ಣ ಮೊದಲಾದ ಕಲಾವಿದರು ಒಂದೆಡೆ ಸೇರಿದಾಗ ನೋಡುವುದೇ ಚೆಂದ. ನಮ್ಮ ಮನೆಯಲ್ಲಿ ಒಮ್ಮೆ ಸೇರಿದಾಗ ಅಶ್ವತ್ಥ್ ಅವರು ಸಸ್ಯಾಹಾರಿ, ಡಾ.ರಾಜ್‌ಕುಮಾರ್ ಅವರು ಮಾಂಸಾಹಾರಿ ಪ್ರಿಯರು. ಹೇಗೆ ಅಡುಗೆ ಸಿದ್ಧಪಡಿಸುವುದು ಎಂದು ನಮ್ಮ ತಾಯಿ ಪರದಾಡುತ್ತಿದ್ದಾಗ ಅಶ್ವತ್ಥ್ ಅವರೇ ರಾಜ್‌ಕುಮಾರ್ ಅವರಿಗೆ ಕೋಳಿ ಸಾರು– ಕಜ್ಜಾಯ ಬಲುಪ್ರಿಯ. ಅದನ್ನು ಮಾಡಿ ಬಡಿಸಿ. ನಮ್ಮದೇನು ಆಕ್ಷೇಪವಿಲ್ಲ ಎಂದು ಹೇಳಿದ್ದ ಪ್ರಸಂಗವನ್ನು ವಿವರಿಸಿದರು.

ನಟಿ ಗಿರಿಜಾ ಲೋಕೇಶ್ ಮಾತನಾಡಿ, ನಾನು ಅಶ್ವತ್ಥ್ ಅವರೊಂದಿಗೆ ಮಣ್ಣಿನ ದೋಣಿ, ಮೋಡದ ಮರೆಯಲ್ಲಿ, ಕನಸಿನ ರಾಣಿ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಪೋಷಕ ಪಾತ್ರದಲ್ಲಿ ಅವರನ್ನು ಮೀರಿಸುವ ಮತ್ತೊಬ್ಬ ಕಲಾವಿದ ಇಲ್ಲ. ಹೊಡಿ, ಬಡಿ, ಕಡಿ ಎಂಬ ಡೈಲಾಗ್‌ಗಳಿರುವ ಈ ಕಾಲದಲ್ಲಿ ಅಶ್ವತ್ಥ್ ಅವರ ಜೀವನ ಮುಂದಿನ ಪೀಳಿಗೆಗೆ ಪಾಠವಾಗುತ್ತದೆ ಎಂದು ಹೇಳಿದರು.

ವೇದಿಕೆಯಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಮಂಡ್ಯ ಚುಟುಕು ಸಾಹಿತ್ಯ ಪರಿಷತ್ತು ಅಧ್ಯಕ್ಷ ಜಿ.ವಿ. ನಾಗರಾಜು, ಕಲಾವಿದ ಮಂಡ್ಯ ಸತ್ಯ, ಡಾ.ವೈಡಿ. ರಾಜಣ್ಣ ಎನ್. ಬೆಟ್ಟೇಗೌಡ, ಸುಧಾ ಶಂಕರ್ ಅಶ್ವತ್ಥ್ ಸೇರಿದಂತೆ ಕುಟುಂಬದ ಎಲ್ಲಾ ಸದಸ್ಯರು ಇದ್ದರು. ಅಶ್ವತ್ಥ್ ಅವರ ಪುತ್ರ ಶಂಕರ್ ಅಶ್ವತ್ಥ್ ಅವರು ಆಗಾಗ್ಗೆ ತಮ್ಮ ತಂದೆಯ ಜೀವನದ ಕೆಲವು ಘಟನೆಗಳನ್ನು ಸಭಿಕರೊಂದಿಗೆ ಹಂಚಿಕೊಂಡರು. ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಸ್ವಾಗತಿಸಿದರು. ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ ಪ್ರಾಸ್ತಾವಿಕ ಭಾಷಣ ಮಾಡಿದರು. ಸುಮಾ ರಾಜಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಕರ್ನಾಟಕ ಸುಗಮ ಸಂಗೀತ ಪರಿಷತ್ ಗಾಯಕ– ಗಾಯಕಿಯರು ಗೀತನಮನ ಸಲ್ಲಿಸಿದರು.

> ಮನುಷ್ಯನಿಗೆ ಅಹಂಕಾರ ಇರಬಾರದು. ಅಶ್ವತ್ಥ್ ಅವರು ಶಿಸ್ತಿನ ಸಿಪಾಯಿಯಾಗಿದ್ದರು. ಅವರು ಮನಸ್ಸು ಮಾಡಿದ್ದರೆ ಬೇರೆ ಬೇರೆ ಭಾಷೆಗಳಲ್ಲೂ ಕೂಡ ನಟಿಸಬಹುದಿತ್ತು. ಆದರೆ ಕನ್ನಡದ ಮೇಲೆ ಅವರಿಗೆ ಅಪಾರವಾದ ಅಭಿಮಾನವಿತ್ತು. ಪ್ರೀತಿ ಇತ್ತು. ಕನ್ನಡದ ಕಿಮ್ಮತ್ತೇ ಅಂಥದ್ದು.
> – **ದೊಡ್ಡಣ್ಣ**, ಹಿರಿಯ ನಟ

ಸಂವಿಧಾನ ಬದಲಾವಣೆ ಮಾಡಿ ಮುಸ್ಲಿಮರಿಗೆ ಮೀಸಲಾತಿ ನೀಡುವ ಹೇಳಿಕೆ ಖಂಡಿಸಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕೃತಿ ದಹಿಸಿ ಪ್ರತಿಭಟನೆ

ತಿ.ನರಸೀಪುರ, ಮಾ.25– ಸಂವಿಧಾನ ಬದಲಾವಣೆ ಮಾಡಿ ಮುಸ್ಲಿಮರಿಗೆ ಶೇ.4 ರಷ್ಟು ಮೀಸಲಾತಿ ನೀಡುತ್ತೇವೆ ಎಂಬ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂವಿಧಾನ ವಿರೋಧಿ ಹೇಳಿಕೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದ ಬಳಿ ಡಿ.ಕೆ.ಶಿವಕುಮಾರ್ ಪ್ರತಿಕೃತಿ ಸುಟ್ಟು ಪ್ರತಿಭಟನೆ ನಡೆಸಿದರು.

ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದ ಬಸ್ ನಿಲ್ದಾಣದ ಬಳಿ ಜಮಾಯಿಸಿದ ವರುಣ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಸರ್ಕಾರ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ಸಂವಿಧಾನ ವಿರೋಧಿ ಸರ್ಕಾರಕ್ಕೆ ಧಿಕ್ಕಾರ, ಮುಸ್ಲಿಮರ ತುಷ್ಟೀಕರಣಕ್ಕೆ ಮುಂದಾಗಿರುವ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಎಂಬಿತ್ಯಾದಿ ಘೋಷಣಾ ಫಲಕ ಹಿಡಿದು ಪ್ರತಿಭಟನೆ ನಡೆಸಿದ ಪ್ರತಿಭಟನಾನಿರತರು ಕೂಡಲೇ ತಮ್ಮ ಹೇಳಿಕೆ ಹಿಂಪಡೆದು, ತಮ್ಮ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಮೈಸೂರಿನ 11 ಮಂಡಲಗಳಲ್ಲಿ ಡಿಕೆಶಿ ಹೇಳಿಕೆ ಖಂಡಿಸಿ ಪ್ರತಿಭಟನೆ ನಡೆಯುತ್ತಿದೆ. ಸಂವಿಧಾನ ತಿದ್ದುಪಡಿ ಮಾಡಿ ಮುಸ್ಲಿಮರಿಗೆ ಮೀಸಲಾತಿ ನೀಡುತ್ತೇನೆ ಎಂಬ ಅವರ ಹೇಳಿಕೆ ಖಂಡನೀಯ. ಕಾಂಗ್ರೆಸ್ ಸರ್ಕಾರ ಸಂವಿಧಾನಕ್ಕೆ ಗೌರವ ಕೊಡುವ ಕೆಲಸ ಮಾಡುತ್ತಿಲ್ಲ. ಪ್ರತಿ ಹಂತದಲ್ಲೂ ಕಾಂಗ್ರೆಸ್ ಪಕ್ಷದವರ ಮುಖವಾಡ ಕಳಚಿ ಬೀಳುತ್ತಿದೆ. ಸಂವಿಧಾನ ಕೊಟ್ಟಿದ್ದರಿಂದಲೇ ಇಂದು ನೀವು ಉಪಮುಖ್ಯಮಂತ್ರಿಯಾಗಿದ್ದೀರಿ ಎಂಬುದನ್ನು ಮರೆಯಬೇಡಿ. ಸಂವಿಧಾನಕ್ಕೆ ತನ್ನದೇ ಆದ ಗೌರವವಿದೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ನಿಂತಿರುವುದೇ ಸಂವಿಧಾನದ ಆಧಾರದ ಮೇಲೆ. ಈಗ ಕಾಂಗ್ರೆಸ್‌ನವರು ಪ್ರತಿಯೊಂದಕ್ಕೂ ಮೀಸಲಾತಿ ಎಂದು ಹೇಳುತ್ತಿದ್ದೀರಾ. ಆದರೆ ಸಂವಿಧಾನದಲ್ಲಿ ಧರ್ಮಾಧಾರಿತ ಮೀಸಲಾತಿ ಇಲ್ಲ. ಹಾಗಾಗಿ ನೀವು ಮುಸ್ಲಿಮರಿಗೆ ಸಂವಿಧಾನ ಬದಲಾಯಿಸಿ ಮೀಸಲಾತಿ ನೀಡುವುದಾಗಿ ಹೇಳಿಕೆ ನೀಡಿರುವುದು ಸಂವಿಧಾನ ವಿರೋಧಿಯಾಗಿದೆ ಎಂದು ಕಿಡಿಕಾರಿದ ಅವರು ಕೂಡಲೇ ನೀವು ನಿಮ್ಮ ಹೇಳಿಕೆ ಹಿಂಪಡೆದು ಜನತೆಯ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದರು.

ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ಸಂವಿಧಾನ ಬದಲಾವಣೆ ಮಾಡಿ ಮೀಸಲಾತಿ ನೀಡುವುದಾಗಿ ತಿಳಿಸಿರುವುದು ಧರ್ಮ ವಿರೋಧಿಯಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಹೇಳಿರುವಂತೆ ಸಂವಿಧಾನದಲ್ಲಿ ಯಾವುದೇ ಧರ್ಮಾಧಾರಿತವಾಗಿ ಮೀಸಲಾತಿ ಇಲ್ಲ. ಶಿಕ್ಷಣ, ಆರ್ಥಿಕ, ಸಾಮಾಜಿಕ ಮಟ್ಟದ ಆಧಾರದ ಮೇಲೆ ಜನಸಂಖ್ಯೆಗನುಗುಣವಾಗಿ ಮೀಸಲಾತಿ ಕೊಡಬಹುದೇ ಹೊರತು, ಒಂದು ಧರ್ಮದ ಓಲೈಕೆಗಾಗಿ ಮೀಸಲಾತಿ ಕೊಡುವಂತಿಲ್ಲ. ಕಾಂಗ್ರೆಸ್ ಪಕ್ಷದ ನೀತಿಗಳು ಸಂವಿಧಾನ ವಿರೋಧಿಯಾಗಿವೆ ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನ ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮಡವಾಡಿ ಮಹೇಶ್, ಜಿಲ್ಲಾ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ವರುಣಾ ಕ್ಷೇತ್ರದ ಅಧ್ಯಕ್ಷ ಮಹದೇವಸ್ವಾಮಿ, ತಿ.ನರಸೀಪುರ ಕ್ಷೇತ್ರಾಧ್ಯಕ್ಷ ಸತ್ಯಪ್ಪ, ಪ್ರಧಾನ ಕಾರ್ಯದರ್ಶಿ ವೆಂಕಟರಮಣಶೆಟ್ಟಿ, ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನಸ್ವಾಮಿ, ಶರತ್ ಪುಟ್ಟಬುದ್ದಿ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್, ಎಸ್ಸಿ ಮೋರ್ಚಾ ಅಧ್ಯಕ್ಷ ಚೌಹಳ್ಳಿ ಸಿದ್ದರಾಜು, ರೈತ ಮೋರ್ಚಾ ಉಪಾಧ್ಯಕ್ಷ ಜೈಕುಮಾರ್, ಕಾರ್ ಮಲ್ಲಪ್ಪ, ಅತ್ತಹಳ್ಳಿ ಚಂದ್ರಶೇಖರ್, ನದೀಶ್, ಲಕ್ಷ್ಮಣ್, ಗ್ರಾಪಂ ಸದಸ್ಯ ಮಹಾದೇವಸ್ವಾಮಿ, ಪಾಪುಗೌಡ, ಸುರೇಶ್, ಮಾಧ್ಯಮ ವಕ್ತಾರ ದಯಾನಂದ್ ಪಟೇಲ್, ಜಯಣ್ಣ, ಕಾಳೇಗೌಡ, ರಾಜಶೇಖರ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ ಸೇರಿದಂತೆ ಮತ್ತಿತರರಿದ್ದರು.



ಡಿ.ಕೆ.ಶಿವಕುಮಾರ್ ಹೇಳಿಕೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

> "ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಮುಸ್ಲಿಮರನ್ನು ಓಲೈಸುವ ಕೆಲಸ ಮಾಡುತ್ತಿದೆ. ಗ್ಯಾರಂಟಿ ಯೋಜನೆ ಕೊಟ್ಟು ಬಡ ಜನರನ್ನು ಉದ್ಧಾರ ಮಾಡುತ್ತೇನೆಂದು ಹೇಳಿಕೊಳ್ಳುತ್ತಿರುವ ನೀವು ಈಗ ಕರೆಂಟ್ ಬಿಲ್, ಹಾಲಿನ ದರ ಏರಿಕೆ ಮಾಡಿ ಒಂದು ಕಡೆ ಕಿತ್ತು ಮತ್ತೊಂದು ಕಡೆ ಅದೇ ಹಣ ನೀಡುತ್ತಿದ್ದೀರಾ, ನಿಮ್ಮ ಮುಖವಾಡ ರಾಜ್ಯದ ಜನತೆಯ ಮುಂದೆ ಕಳಚಿ ಬೀಳುವ ಕಾಲ ಸಮೀಪದಲ್ಲಿದೆ. ನಾಡಿನ ಜನತೆ ನೀವು ಮಾಡುತ್ತಿರುವ ಮೋಸವನ್ನು ಎಂದಿಗೂ ಕ್ಷಮಿಸುವುದಿಲ್ಲ. ಹಾಗಾಗಿ ನಿಮಗೆ ಅಧಿಕಾರದಲ್ಲಿ ಮುಂದುವರೆಯುವ ಯಾವುದೇ ನೈತಿಕತೆ ಇಲ್ಲ. ಕೂಡಲೇ ರಾಜೀನಾಮೆ ನೀಡಿ ಚುನಾವಣೆ ಎದುರಿಸಿ.
>
> – **ಎಲ್.ಆರ್.ಮಹದೇವಸ್ವಾಮಿ, ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ.**

ನಂಜನಗೂಡಲ್ಲೂ ಡಿಕೆಶಿ ವಿರುದ್ಧ ಪ್ರತಿಭಟನೆ

ನಂಜನಗೂಡು, ಮಾ.25– ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ಜಾರಿಗೊಳಿಸಲು ಸಂವಿಧಾನ ಬದಲಿಸಲು ಸಿದ್ಧ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಖಂಡಿಸಿ ನಂಜನಗೂಡಿನಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಬಳಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಡಿಕೆಶಿ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸಿ.ಚಿಕ್ಕರಂಗನಾಯಕ ಮಾತನಾಡಿ, ಸಂವಿಧಾನ ರಕ್ಷಣೆ ಮಾಡುವುದಾಗಿ ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಒಂದು ವರ್ಗದ ಓಲೈಕೆಗಾಗಿ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ.4 ರಷ್ಟು ಮೀಸಲಾತಿ ಕೊಡಲು ಸಂವಿಧಾನವನ್ನೇ ಬದಲಾಯಿಸಲು ಹೊರಟಿದ್ದು, ಇದರಿಂದ ಕಾಂಗ್ರೆಸ್ ಪಕ್ಷದ ನಯವಂಚಕತನ ಬಯಲಾಗಿದೆ. ಧರ್ಮಾಧಾರಿತ ರಾಜಕಾರಣಕ್ಕಾಗಿ ಮೀಸಲಾತಿ ಕೊಡುವುದು ಸಾಧ್ಯವಿಲ್ಲ. ಧರ್ಮ ರಾಜಕಾರಣಕ್ಕಾಗಿ ಸಂವಿಧಾನ ಬದಲಾಯಿಸಲು ಹೊರಟರೆ ರಕ್ತಪಾತವೇ ನಡೆಯುತ್ತದೆ ಎಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಸರ್ಕಾರ ಮೊದಲಿನಿಂದಲೂ ಸಂವಿಧಾನದ ಮೇಲೆ ಗದಾಪ್ರಹಾರ ನಡೆಸುತ್ತಾ ಬಂದಿದೆ. ಎಸ್ಸಿ, ಎಸ್ಟಿ, ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಂಡಿದೆ. ವಾಲ್ಮೀಕಿ ನಿಗಮದ 187 ಕೋಟಿ ದುರ್ಬಳಕೆ ಮಾಡಿಕೊಂಡು ಸಚಿವರು ಜೈಲಿಗೆ ಹೋಗಿದ್ದರೂ ಪ್ರಕರಣದಲ್ಲಿ ಭಾಗಿಯಾದ 48 ಮಂದಿ ಮೇಲೆ ತನಿಖೆ ನಡೆಸುತ್ತೇವೆಂದು ಹೇಳಿದ್ದ ಕಾಂಗ್ರೆಸ್ ಸರ್ಕಾರ ಇನ್ನು ತನಿಖೆಗೆ ಒಳಪಡಿಸಿಲ್ಲ. ಬೆಲೆ ಏರಿಕೆ ಹಾಗೂ ನಿಗಮ ಮಂಡಳಿಗಳಿಗೆ ಅನುದಾನ ನೀಡದಿರುವುದನ್ನು ಖಂಡಿಸಿ ಸದನದಲ್ಲಿ ಪ್ರತಿಭಟನೆ ನಡೆಸಿದ 18 ಬಿಜೆಪಿ ಸದಸ್ಯರನ್ನು ಅಮಾನತುಗೊಳಿಸಿವುದು ಖಂಡನೀಯ. 2022–23ರಲ್ಲಿ ನಿಗಮ ಮಂಡಳಿಗಳಿಗೆ ಹಾಗೂ ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಲಾಗಿದ್ದ ಅನುದಾನ ಕೊಡಲಾಗದೆ ಇರುವ ಸಂವಿಧಾನ ವಿರೋಧಿ ಕಾಂಗ್ರೆಸ್ ಸರ್ಕಾರ ಪತನಗೊಳಿಸಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ನಗರಸಭಾ ಮಾಜಿ ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಮುಖಂಡರಾದ ಶ್ರೀನಿವಾಸರೆಡ್ಡಿ, ಪರಶಿವಮೂರ್ತಿ, ಮಂಜುನಾಥ್, ಸಿದ್ದರಾಜು, ಮಂಜು ಪಟೇಲ್, ಮಹದೇವಪ್ರಸಾದ್, ರಾಘವೇಂದ್ರ ಸಿದ್ದರಾಜು, ಪುಟ್ಟಸ್ವಾಮಿ, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಹೇಶ್ ಬಾಬು, ಯುವ ಮೋರ್ಚಾ ಅಧ್ಯಕ್ಷ ಸಿದ್ದರಾಜು, ಮನೋಜ್ ಕುಮಾರ್ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.



ನಂಜನಗೂಡಿನಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಶಿಕ್ಷಣದ ಜೊತೆಗೆ ಕೌಶಲ್ಯಾಧಾರಿತ ತರಬೇತಿ ಮುಖ್ಯ

ಜಯಪುರ, ಮಾ.25– ಉನ್ನತ ಶಿಕ್ಷಣ ಪಡೆಯುವ ಜೊತೆಗೆ ಕೌಶಲ್ಯಾಧಾರಿತ ತರಬೇತಿಯೂ ಬಹು ಮುಖ್ಯ ಎಂದು ಮೈಸೂರು ರುಡ್‌ಸೆಟ್ ನಿವೃತ್ತ ಅಧಿಕಾರಿ ರವೀಂದ್ರ ತಿಳಿಸಿದರು.



ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಅಂಗ ಸಂಸ್ಥೆಯಾದ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರ ಜಯಪುರ ಶಾಖೆ ಮತ್ತು ಅಮಿಟೆಕ್ ಸಹಯೋಗದಲ್ಲಿ ಫ್ಯಾಷನ್ ಡಿಸೈನಿಂಗ್ ಮತ್ತು ಬ್ಯೂಟಿಷಿಯನ್ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಆರ್‌ಎಲ್‌ಸಿ ಸಂಯೋಜಕ ಅಬ್ದುಲ್ ರಶೀದ್ ಮಾತನಾಡಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯು ಆರೋಗ್ಯ, ಶಿಕ್ಷಣ, ಕೌಶಲ್ಯದ ಧ್ಯೇಯವನ್ನಿಟ್ಟುಕೊಂಡು ಶ್ರಮಿಸುತ್ತಿದೆ. ಸಂಸ್ಥೆ ಪ್ರಾರಂಭವಾಗಿ 40 ವರ್ಷಗಳಾಗಿದ್ದು, ಆರಂಭದಲ್ಲಿ 7 ಜನರಿದ್ದ ಸಂಸ್ಥೆಯಲ್ಲಿ ಇಂದು 800 ಮಂದಿ ಕೆಲಸ ಮಾಡುತ್ತಿದ್ದಾರೆ. ಗ್ರಾಮೀಣ ನಿರುದ್ಯೋಗಿ ಯುವಕ–ಯುವತಿಯವರಿಗೆ ಕೌಶಲ್ಯಾಧಾರಿತ ತರಬೇತಿ ನೀಡಿ ಜೀವನ ರೂಪಿಸುವುದು ಸಂಸ್ಥೆ ಮೂಲ ಉದ್ದೇಶ ಎಂದರು.

ಕಾರ್ಯಕ್ರಮವನ್ನು ಬರಡನಪುರ ಗುರು ಮಹಾಂತೇಶ್ವರ ಮಠದ ಚನ್ನಬಸವ ಸ್ವಾಮೀಜಿ ಉದ್ಘಾಟಿಸಿದರು. ಜಯಪುರ ಸಮುದಾಯ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ಗಾಯತ್ರಿ, ವಿಆರ್‌ಎಲ್‌ಸಿ ಹಿರಿಯ ವ್ಯವಸ್ಥಾಪಕ ಪಿ.ಡಿ.ನಾಯಕ್, ಬ್ಯೂಟಿಷಿಯನ್ ಮತ್ತು ಫ್ಯಾಷನ್ ಡಿಸೈನ್ ಶಿಕ್ಷಕರು ಮತ್ತು ಸಂಸ್ಥೆ ಸಿಬ್ಬಂದಿ ಉಪಸ್ಥಿತರಿದ್ದರು.

ಹಳೇ ದ್ವೇಷದ ಹಿನ್ನೆಲೆಯಲ್ಲಿ ನಡೆದ ಜಗಳ

ಚಾಕುವಿನಿಂದ ಇರಿದು ವೃದ್ಧನ ಕೊಲೆ

ತಿ.ನರಸೀಪುರ, ಮಾ.25– ಹಳೇ ದ್ವೇಷದ ಹಿನ್ನೆಲೆಯಲ್ಲಿ ನಡೆದ ಜಗಳದಲ್ಲಿ ವೃದ್ಧನೋರ್ವನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ತಾಲೂಕಿನ ಮಾದಾಪುರ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಮಾದಾಪುರ ಗ್ರಾಮದ ನಿವಾಸಿ ನಿಂಗಯ್ಯ(70) ಕೊಲೆಯಾದವರು. ಘಟನೆಯಲ್ಲಿ ಅದೇ ಗ್ರಾಮದ ಮರಿಸ್ವಾಮಿ (30), ಮಧು(33) ಹಾಗೂ ಮರಿಸ್ವಾಮಿ (40) ಗಂಭೀರವಾಗಿ ಗಾಯಗೊಂಡಿದ್ದಾರೆ.

ವಿವರ: ತಾಲೂಕಿನ ಸಿ.ಬಿ.ಹುಂಡಿ ಗ್ರಾಮದ ಮರುಡಯ್ಯ ಎಂಬುವರ ಪುತ್ರ ಸಿದ್ದರಾಜು ಹಾಗೂ ಮಹದೇವಯ್ಯ ಅವರ ಪುತ್ರ ಮಧು ಎಂಬುವರ ನಡುವೆ 2022 ರಲ್ಲಿ ಗಲಾಟೆ ನಡೆದು ತಿ.ನರಸೀಪುರ ಪಟ್ಟಣ ಠಾಣೆಯಲ್ಲಿ ಪರಸ್ಪರ ಪ್ರಕರಣ ದಾಖಲಿಸಿದ್ದರು. ಆದರೆ ಸೋಮವಾರ ರಾತ್ರಿ 8.30ರಲ್ಲಿ ನಿಂಗಯ್ಯ ಅವರ ಮನೆಯವರು ತೆಂಗಿನ ಕಾಯಿ ಸುಲಿಯುತ್ತಿದ್ದ ವೇಳೆ ಮಧು ಸಲ್ಲಿಗೆ ಆಗಮಿಸಿ ಮಾತನಾಡುತ್ತಾ ಕುಳಿತ್ತಿದ್ದ ವೇಳೆ ಆರೋಪಿಗಳಾದ ಸಿದ್ದರಾಜು, ಬಾಲು, ಶಂಕರ, ಮರುಡಯ್ಯ, ಆಲಗೂಡು ಗ್ರಾಮದ ಚಿಂಟು, ಯಶವಂತ, ದಿಲೀಪ್ ಅಲ್ಲಿಗೆ ಆಗಮಿಸಿ ನಮ್ಮ ವಿರುದ್ಧ ದೂರು ನೀಡಿದ್ದೀಯಾ ಎಂದು ಗಲಾಟೆ ಆರಂಭಿಸಿದ್ದಾರೆ. ಈ ವೇಳೆ ಮಾತಿಗೆ ಮಾತು ಬೆಳೆದು ಎಲ್ಲರೂ ಸೇರಿ ಮಧು ಮೇಲೆ ಹಲ್ಲೆ ಮಾಡಿದ್ದಾರೆ. ನಂತರ ನಿಂಗಯ್ಯನವರ ಕುಟುಂಬದವರು ಜಗಳ ಬಿಡಿಸಿ ಕಳುಹಿಸಿದ್ದಾರೆ. ಈ ಸಂದರ್ಭ ಗಾಯಗೊಂಡ ಮಧು ತನ್ನ ತಂಗಿ ಕಲಾವತಿಯೊಂದಿಗೆ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದಿದ್ದಾರೆ. ಮಧ್ಯರಾತ್ರಿ 12 ಗಂಟೆ ವೇಳೆಗೆ ಯಶವಂತ್ ಹಾಗೂ ಆತನ ತಮ್ಮ ನಿಂಗಯ್ಯನ ಮನೆ ಬಳಿ ಬಂದು ನಮ್ಮ ಮೇಲೆ ದೂರು ನೀಡಲು ನಿಮ್ಮ ಮಗಳು ಕಲಾವತಿಯನ್ನು ಕಳುಹಿಸಿದ್ದೀಯಾ ಜಗಳ ತೆಗೆದಿದ್ದು, ಅಷ್ಟರಲ್ಲಾಗಲೇ ಉಳಿದವರು ಅಲ್ಲಿಗೆ ಆಗಮಿಸಿದ್ದಾರೆ. ಈ ವೇಳೆ ನಿಂಗಯ್ಯನವರು ದೂರು ನೀಡಲು ಹೋಗಿಲ್ಲ ಬದಲಿಗೆ ಆಸ್ಪತ್ರೆಗೆ ತೆರಳಿದ್ದಾರೆ ಎಂದಿದ್ದಾರೆ. ಈ ವೇಳೆ ನಿಂಗಯ್ಯ ಮೇಲೆ ಹಲ್ಲೆ ನಡೆಸಿ, ಹೊಟ್ಟೆಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ತೀವ್ರ ಗಾಯಗೊಂಡ ನಿಂಗಯ್ಯನವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿ ದ್ದಾರೆ. ಇತ್ತ ನಿಂಗಯ್ಯನನ್ನು ಆಸ್ಪತ್ರೆಗೆ ದಾಖಲಿಸಲು ತೆರಳಿದ ವೇಳೆ ಆರೋಪಿಗಳು ಗ್ರಾಮುಖ ಮುಖಂಡರಾದ ಮರಿಸ್ವಾಮಿ ಅವರ ಮೇಲೂ ತೀವ್ರ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ. ಇದೇ ವೇಳೆ ಮಧು ವಿಗೆ ಸೇರಿದ ಹುಲ್ಲಿನ ಮೆದೆಗೆ ಆರೋಪಿಗಳು ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ನಿಂಗಯ್ಯ ಪುತ್ರ ಅಶೋಕ್ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಡಿವೈಎಸ್‌ಪಿ ರಘು, ಸಿಪಿಐ ಧನಂಜಯ ಮಾರ್ಗದರ್ಶನದಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಎಸ್‌ಐ ಅಶೋಕ್ ಕುಮಾರ್ ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ.

ಕಾಲು ಜಾರಿ ಕೆರೆಗೆ ಬಿದ್ದು ಯುವಕ ಸಾವು

ಹೆಚ್.ಡಿ.ಕೋಟೆ, ಮಾ.25– ಜಾನುವಾರುಗಳಿಗೆ ನೀರು ಕುಡಿಸಲು ಹೋದ ಯುವಕನೋರ್ವ ಕಾಲು ಜಾರಿ ಕೆರೆಗೆ ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ಚಿಕ್ಕಕಾಳೇಗೌಡನಪುರ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಚಂದ್ರು ಅವರ ಪುತ್ರ ಹರೀಶ್ ಕುಮಾರ್ (18) ಮೃತಪಟ್ಟ ಯುವಕ. ಈತ ಮಂಗಳವಾರ ಮಧ್ಯಾಹ್ನ ಗ್ರಾಮದ ಬಳಿಯ ಎಲೆಹುಂಡಿ ದೊಡ್ಡ ಕೆರೆಗೆ ಜಾನುವಾರುಗಳಿಗೆ ನೀರು ಕುಡಿಸಲು ಹೋಗಿದ್ದರು. ಈ ವೇಳೆ ಕಾಲು ಜಾರಿ ಕೆರೆಗೆ ಬಿದ್ದಿದ್ದಾನೆ. ಹರೀಶ್ ನೀರಿನಲ್ಲಿ ಮುಳುಗುತ್ತಿರುವುದನ್ನು ಕಂಡ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಗ್ರಾಮಸ್ಥರು ಆತನ ರಕ್ಷಣೆ ಮಾಡಲು ಮುಂದಾದರು. ಅಷ್ಟರಾಗಲೇ ಹರೀಶ್ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹೆಚ್.ಡಿ.ಕೋಟೆ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಸತತ 4 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಶವವನ್ನು ಕೆರೆಯಿಂದ ಮೇಲೆತ್ತಿ ಮರಣೋತ್ತರ ಪರೀಕ್ಷೆಗಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಅಧಿಕಾರಿಗಳಾದ ಗಣೇಶ್ ಮಾದರ್, ಮಂಜು, ಸಿಬ್ಬಂದಿಗಳಾದ ಅರುಣ್ ಕುಮಾರ್, ಬಾಲಕೃಷ್ಣ, ಯಲ್ಲಪ್ಪ, ಚಾಲಕರಾದ ಹೇಮಂತ್ ಕುಮಾರ್, ರಂಜಿತ್ ಭಾಗವಹಿಸಿದ್ದರು.

ಉಚಿತ ದಂತ ತಪಾಸಣಾ ಶಿಬಿರ



ಉಚಿತ ದಂತ ತಪಾಸಣಾ ಶಿಬಿರದಲ್ಲಿ ವೈದ್ಯರು ಹಾಗೂ ಇತರರನ್ನು ಸನ್ಮಾನಿಸಲಾಯಿತು.

ಹುಣಸೂರು, ಮಾ.25– ನಗರದ ರೋಟರಿ ಕ್ಲಬ್, ಇನ್ನರ್‌ವೀಲ್ಹ್ ಕ್ಲಬ್ ಹಾಗೂ ಸರ್ಕಾರಿ ಮಹಿಳಾ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ತಾಲೂಕಿನ ತಿಪ್ಪಲಾಪುರದಲ್ಲಿ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರದಲ್ಲಿ ಉಚಿತ ದಂತ ತಪಾಸಣಾ ಶಿಬಿರ ನಡೆಯಿತು. ಸುಮಾರು 200ಕ್ಕೂ ಹೆಚ್ಚು ಮಂದಿ ಶಿಬಿರದ ಸದುಪಯೋಗಪಡಿಸಿಕೊಂಡರು. ಈ ಸಂದರ್ಭ ರೋಟರಿ ಕ್ಲಬ್ ಅಧ್ಯಕ್ಷ ಡಾ.ಪ್ರಸನ್ನ, ಇನ್ನರ್‌ವೀಲ್ಹ್ ಅಧ್ಯಕ್ಷೆ ಸ್ಮಿತಾ, ಕಾರ್ಯದರ್ಶಿ ಜ್ಯೋತಿ, ದಂತ ವೈದ್ಯೆ ಡಾ.ಮಂಜುಳಾ, ಪ್ರಾಂಶುಪಾಲ ಪ್ರೊ.ಮಂಜು ಇನ್ನಿತರರಿದ್ದರು.

ಹೆಚ್.ಡಿ.ಕೋಟೆ ಪುರಸಭೆ ಸ್ಥಾಯಿ ಸಮಿತಿಗೆ ಮಧುಕುಮಾರ್ ಅಧ್ಯಕ್ಷ

ಹೆಚ್.ಡಿ.ಕೋಟೆ, ಮಾ.25– ಪಟ್ಟಣದ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಪುರಸಭೆ ಸದಸ್ಯ ಮಧು ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಪುರಸಭೆಯಲ್ಲಿರುವ ದಿ.ಚಿಕ್ಕಮಾದು ಸಭಾಂಗಣದಲ್ಲಿ ಮಂಗಳವಾರ ಪುರಸಭಾ ಸದಸ್ಯೆ ಸುಹಾಸಿನಿ ದಿನೇಶ್ ಅಧ್ಯಕ್ಷತೆಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಧುಕುಮಾರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಸುಹಾಸಿನಿ ದಿನೇಶ್ ಘೋಷಿಸಿದರು.

ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾದ ಮಧು ಕುಮಾರ್, ಸುಹಾಸಿನಿ, ಪ್ರೇಮ್ ಸಾಗರ್, ಸೋಮಶೇಖರ್, ಜೆಡಿಎಸ್ ಸದಸ್ಯ ಲೋಕೇಶ್ ಹಾಜರಿದ್ದರು. ಸದಸ್ಯ ನಂಜಪ್ಪ ಗೈರಾಗಿದ್ದರು.

ಸ್ಥಾಯಿ ಸಮಿತಿ ನೂತನ ಅಧ್ಯಕ್ಷ ಮಧುಕುಮಾರ್ ಮಾತನಾಡಿ, ನನ್ನ ಅವಿರೋಧ ಆಯ್ಕೆಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಪುರಸಭೆ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಟ್ಟಣದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಪಟ್ಟಣದ ಪುರಸಭೆಯ 23 ವಾರ್ಡ್‌ಗಳಲ್ಲಿ ರಸ್ತೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲಾಗುವುದು. ಅಲ್ಲದೇ ಸಂತೆಮಾಳ ಹ್ಯಾಂಡ್‌ಪೋಸ್ಟ್‌ನಿಂದ ಹೆಬ್ಬಾಳದವರೆಗೆ ಜೋಡಿ ರಸ್ತೆ ನಿರ್ಮಾಣ, ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ಶಾಸಕ ಅನಿಲ್ ಸಹಕಾರ ಪಡೆದು ಮುಂದಿನ ದಿನಗಳಲ್ಲಿ ಅಭಿವೃದ್ಧಿಪಡಿಸುವುದಾಗಿ ತಿಳಿಸಿದರು.

ಮುಖ್ಯಾಧಿಕಾರಿ ಸುರೇಶ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ನೂತನ ಅಧ್ಯಕ್ಷರಾಗಿ ಮಧುಕುಮಾರ್ ಆಯ್ಕೆಯಾಗುತ್ತಿದ್ದಂತೆಯೇ ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಈ ವೇಳೆ ಪುರಸಭಾ ಉಪಾಧ್ಯಕ್ಷ ಆಸೀಫ್ ಇಕ್ಬಾಲ್, ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಶಾಂತಮ್ಮ, ಮುಖಂಡರಾದ ಅನ್ಸರ್, ಸೋಮು, ಅಧಿಕಾರಿಗಳಾದ ರಘು, ಪರಮೇಶ್, ರಮೇಶ, ನೌಕರರಾದ ಶ್ರೀರಂಗ, ಗಣೇಶ್, ರಾಜಶೇಖರ್, ಇಂದ್ರಮ್ಮ ಇನ್ನಿತರರಿದ್ದರು.



ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಮಧುಕುಮಾರ್ ಆಯ್ಕೆಯಾದರು.

ವಿಜೃಂಭಣೆಯ ಶ್ರೀದೊಡ್ಡಮ್ಮತಾಯಿ ಶ್ರೀಚಿಕ್ಕಮ್ಮತಾಯಿ ದೊಡ್ಡ ಹಬ್ಬ

ತಿ.ನರಸೀಪುರ, ಮಾ.25– ಪಟ್ಟಣದ ಹಳೇ ಸಂತೇಮಾಳದಲ್ಲಿ ಮಂಗಳವಾರ ಶ್ರೀದೊಡ್ಡಮ್ಮತಾಯಿ ಶ್ರೀಚಿಕ್ಕಮ್ಮತಾಯಿ ಅಮ್ಮನವರ ದೊಡ್ಡ ಹಬ್ಬ ವಿಜೃಂಭಣೆಯಿಂದ ನಡೆಯಿತು.

ಸಹೋದರಿ ದೇವಿಯರ ದೇವಾಲಯ ಸುತ್ತಮುತ್ತ ಹಬ್ಬದ ಸಂಭ್ರಮ ಮನೆ ಮಾಡಿತ್ತು ಎಲ್ಲೆಡೆ ಧೂಪದ ಘಮಲು ಆಕಾಶದೆತ್ತರಕ್ಕೇರಿತ್ತು. ಒಂದು ದಿನದ ಮಟ್ಟಿಗೆ ಊರನ್ನು ತೊರೆದಿದ್ದ ಪಟ್ಟಣ ಹಾಗೂ ಗೋಪಾಲಪುರ ನಿವಾಸಿಗಳು ದೇವಾಲಯ ಆಸುಪಾಸಿನ ಬಯಲು ಪ್ರದೇಶದಲ್ಲಿ ಬಿಡಾರ ಹೂಡಿ, ಹಬ್ಬ ಆಚರಿಸಿದರು. ಊರನ್ನು ಕಾಯುವ ಮೂಲಕ ಮನೆ ಮಂದಿಯನ್ನು ಸಾಂಕ್ರಾಮಿಕ ರೋಗಗಳಿಂದ ರಕ್ಷಿಸುವ ಸಹೋದರಿ ದೇವಿಯರ ದರ್ಶನ ಪಡೆದ ಭಕ್ತರು ಧೂಪ ಹಾಕಿ, ಪೂಜೆ ಸಲ್ಲಿಸಿ ಕುಟುಂಬವನ್ನು ಕಾಪಾಡುವಂತೆ ಪ್ರಾರ್ಥಿಸಿದರು. ಇನ್ನು ಪುರಸಭಾ ಸದಸ್ಯ ಬಾದಾಮಿ ಮಂಜು ದೇವರಿಗೆ ಸೇಬಿನ ಹಾರ ಸಮರ್ಪಿಸಿದರು.

ಯುಗಾದಿ ಹಬ್ಬಕ್ಕೂ ಮುನ್ನವೇ 3 ವರ್ಷಗಳಿಗೊಮ್ಮೆ ಶ್ರೀದೊಡ್ಡಮ್ಮತಾಯಿ ಶ್ರೀಚಿಕ್ಕಮ್ಮತಾಯಿ ಅಮ್ಮನವರ ದೊಡ್ಡ ಹಬ್ಬ ನಡೆಯಲಿದ್ದು, ಗೋಪಾಲಪುರ ಹಾಗೂ ಹಳೇ ಪಟ್ಟಣದ ಎಲ್ಲಾ ಸಮುದಾಯದ ನಿವಾಸಿಗಳು ಕುಟುಂಬ ಸಮೇತ ಊರನ್ನು ತೊರೆದು ಹಬ್ಬ ಆಚರಿಸಿ, ದೇವಿಯರಿಗೆ ಮೇಕೆ ಒಪ್ಪಿಸಿ, ಹಬ್ಬದ ಅಡುಗೆ ಮಾಡಿ, ನೆಂಟರಿಷ್ಟರನ್ನು ಆಹ್ವಾನಿಸಿ ಆತಿಥ್ಯ ನೀಡಿದರು. ಹಬ್ಬ ನಡೆಯುವ ದಿನ ಊರನ್ನು ತೊರೆಯುವುದು ವಾಡಿಕೆಯಾಗಿದ್ದರಿಂದ ಪಟ್ಟಣದಲ್ಲಿ ಜನದಟ್ಟಣೆ, ವ್ಯಾಪಾರ ವಹಿವಾಟು ಹೆಚ್ಚು ನಡೆಯುವ ಪ್ರಮುಖ ರಸ್ತೆಗಳಲ್ಲಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಲಾಗಿತ್ತು.

ಹಬ್ಬದ ಪ್ರಯುಕ್ತ ಸಂಜೆ ಪ್ರಮುಖ ಬೀದಿಗಳಲ್ಲಿ ಹರಕೆಗೆಂದು ನೀಡಲಾಗಿದ್ದ ಮೇಕೆ ಮರಿಗಳನ್ನು ಬಲಿಕೊಟ್ಟ ಬಳಿಕ ಪೀಡೆ ಮರಿ ಎಳೆಯಲಾಯಿತು. ರಾತ್ರಿವರೆಗೂ ದೇವಾಲಯದಲ್ಲಿ ಇಡಲಾಗುವ ಸಿಹಿ ಮತ್ತು ಖಾರದ ಎಡೆಯನ್ನು ರಾತ್ರಿ 10 ಗಂಟೆಯಲ್ಲಿ ಊರಾಚೆ ನಿಗದಿಪಡಿಸುವ ಸ್ಥಳದಲ್ಲಿ ಅರ್ಚಕರು ಹಾಗೂ ಯಜಮಾನರು ಇಟ್ಟು ತಿರುಗಿ ನೋಡದೆ ಬಂದರು. ಯಜಮಾನರಾದ ಶಾಂತರಾಜು, ಸತೀಶ್, ಪುಳ್ಳಾರಿ ಮಹದೇವ, ಗೋಪಾಲಪುರ ರಾಜಣ್ಣ, ತಬಲಮೂರ್ತಿ ಹಾಗೂ ಅರ್ಚಕ ದೇವರಾಜು ನೇತೃತ್ವದಲ್ಲಿ ಹಬ್ಬದ ಧಾರ್ಮಿಕ ಕಾರ್ಯಗಳು ನಡೆಯಿತು.



ಶ್ರೀದೊಡ್ಡಮ್ಮತಾಯಿ ಶ್ರೀಚಿಕ್ಕಮ್ಮತಾಯಿ ಅಮ್ಮನವರು.

ಸಾಂಪ್ರದಾಯಿಕವಾಗಿ ಅಂಬೇಡ್ಕರ್, ಬಾಬೂಜಿ ಜಯಂತಿ ಆಚರಣೆ

ಪೂರ್ವಭಾವಿ ಸಭೆಯಲ್ಲಿ ನಿರ್ಧಾರ

ತಿ.ನರಸೀಪುರ, ಮಾ.25– ಸಾಂಪ್ರದಾಯಿಕವಾಗಿ ನಿಗದಿತ ದಿನದಂದು ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಜಯಂತಿ ಆಚರಿಸಲು ಪಟ್ಟಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತಾಪಂ ಸಭಾಂಗಣದಲ್ಲಿ ತಾಲೂಕು ಆಡಳಿತದಿಂದಲೇ ಏ.5ರಂದು ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಹಾಗೂ ಏ.14 ರಂದು ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸುವುದು. ಸಿಎಂ ಸಿದ್ದರಾಮಯ್ಯ ಅವರಿಂದ ದಿನಾಂಕ ಪಡೆದು ಮತ್ತೊಂದು ದಿನ ಉಭಯ ನಾಯಕರ ಜಯಂತಿಯನ್ನು ಸಮುದಾಯದ ಸಹಭಾಗಿತ್ವದಲ್ಲಿ ಅದ್ಧೂರಿಯಾಗಿ ಆಯೋಜಿಸಲು ತೀರ್ಮಾನಿಸಲಾಯಿತು.

ತಾಲೂಕಿನಲ್ಲಿ ಎಸ್ಸಿ/ಎಸ್ಟಿ ಹಿತರಕ್ಷಣಾ ಸಮಿತಿ ಸಭೆ ಕರೆಯದ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ನಿರ್ಲಕ್ಷದ ಬಗ್ಗೆ ದಲಿತ ಜಾಗೃತಿ ಸಮಿತಿ ಜಿಲ್ಲಾಧ್ಯಕ್ಷ ಮಂಜುನಾಥ್ ಗಮನ ಸೆಳೆ ದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಅಂಬೇಡ್ಕರ್ ಅಥವಾ ಬಾಬು ಜಗಜೀವನ್ ರಾಂ ಜಯಂತಿಗಳಿಗೆ ಹಣ ಸಂಗ್ರಹಿಸುವುದು ಬೇಡ. ಸರ್ಕಾರದ ನಿಯಮಾವಳಿಗಳ ಪ್ರಕಾರ ನಿಗದಿತ ದಿನದಂದು ಇಬ್ಬರು ನಾಯಕರ ಜಯಂತಿ ಆಚರಿಸಿ, ಅದ್ಧೂರಿ ಕಾರ್ಯಕ್ರಮ ಆಯೋಜಿಸುವ ನಿರ್ಧಾರ 2 ಸಮುದಾಯಗಳ ತಾಲೂಕು ಸಂಘಗಳ ವಿವೇಚನೆಗೆ ಬಿಡಬೇಕೆಂದು ಸಲಹೆ ನೀಡಿದರು.

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್, ಜನಜಾಗೃತಿ ಸಮಿತಿ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ಬಾಬೂಜಿ ಜನ ಕಲ್ಯಾಣ ಸಂಘದ ಅಧ್ಯಕ್ಷ ಡಿ.ಶಂಕರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷ ಬಸವಣ್ಣ, ತಾಪಂ ಮಾಜಿ ಉಪಾಧ್ಯಕ್ಷ ಪ್ರಸನ್ನ, ಸಿ.ಪುಟ್ಟಮಲ್ಲಯ್ಯ, ಮುಖಂಡ ಹೆಚ್.ನಾಗರಾಜು ಮಾತನಾಡಿದರು. ತಾಪಂ ಇಓ ಪಿ.ಎಸ್.ಅನಂತರಾಜು, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ಬಾಬೂಜಿ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ಎಸ್ಸಿ ಎಸ್ಟಿ ಜಾಗೃತಿ ಸಮಿತಿ ಸದಸ್ಯೆ ಪಾರ್ವತಮ್ಮ, ದಸಂಸ ಸಂಚಾಲಕ ರಾಜಶೇಖರಮೂರ್ತಿ, ಮುಖಂಡರಾದ ಗಣೇಶಸ್ವಾಮಿ, ಸಿ.ಡಿ.ವೆಂಕಟೇಶ್, ಮರಿಸ್ವಾಮಿ, ಕುಮಾರ, ಎಸ್.ನಂಜುಂಡಯ್ಯ, ಇದ್ದರು.



ಪೂರ್ವಭಾವಿ ಸಭೆಯಲ್ಲಿ ತಹಶೀಲ್ದಾರ್ ಟಿ.ಜಿ. ಸುರೇಶಾಚಾರ್ ಮಾತನಾಡಿದರು.

ಕಟ್ಟೆ ಮಾರಮ್ಮನವರ ಜಾತ್ರಾ ಮಹೋತ್ಸವ



ಸರಗೂರು ತಾಲೂಕಿನ ಹಂಚೀಪುರದಲ್ಲಿ ಮಂಗಳವಾರ ಕಟ್ಟೆ ಮಾರಮ್ಮನವರ ಜಾತ್ರಾ ಮಹೋತ್ಸವ ಸಂಭ್ರಮದಿಂದ ನಡೆಯಿತು. ಈ ವೇಳೆ ಹಂಚೀಪುರ, ಸುತ್ತಮುತ್ತಲ ಗ್ರಾಮಗಳ ಭಕ್ತರು, ಗುಡಿಗೌಡ, ಯಜಮಾನರು, ಯುವಕ ಸಂಘದವರು ಇದ್ದರು.

ಹೆಚ್ಚುವರಿ ಅಕ್ಕಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ



ಹೆಚ್ಚುವರಿ ಅಕ್ಕಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕೆ.ಆರ್.ನಗರ, ಮಾ.25– ಚುನಾವಣಾ ಪೂರ್ವ ರಾಜ್ಯದ ಜನತೆಗೆ ನೀಡಿದ್ದ ಭರವಸೆಯಂತೆ ಬಿಪಿಎಲ್ ಪಡಿತರದಾರಿಗೆ ಫೆಬ್ರವರಿಯಿಂದ 10 ಕೆಜಿ ಅಕ್ಕಿ ವಿತರಣೆ ಮಾಡುತ್ತಿದ್ದು, ಕಳೆದ ತಿಂಗಳ ಪಡಿತರ ಸೇರಿಸಿ ಈ ಬಾರಿ 15 ಕೆಜಿ ಕೊಡಲಾಗುವುದು ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್ ತಿಳಿಸಿದರು.

ತಾಲೂಕಿನ ಅಡಗೂರು ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಪಡಿತರ ವಿತರಣಾ ಕೇಂದ್ರದಲ್ಲಿ ಅನ್ನಭಾಗ್ಯ ಯೋಜನೆಯ ಹೆಚ್ಚುವರಿ ಅಕ್ಕಿ ವಿತರಣೆ ಕಾರ್ಯ ಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೆ.ಆರ್.ನಗರ ತಾಲೂಕಿನಲ್ಲಿ ಒಟ್ಟು 42 ನ್ಯಾಯಬೆಲೆ ಅಂಗಡಿಗಳಿದ್ದು, ಅವುಗಳಲ್ಲಿ 30716 ಬಿಪಿಎಲ್, 928 ಎಪಿಎಲ್ ಮತ್ತು 2916 ಅಂತ್ಯೋದಯ ಕಾರ್ಡುಗಳಿವೆ. ಎಲ್ಲಾ ಪಡಿತರದಾರರಿಗೂ ಸರಿಯಾಗಿ ಆಹಾರ ಧಾನ್ಯ ವಿತರಿಸಲು ಕ್ರಮ ಕೈಗೊಂಡಿದ್ದು, ಯಾವುದೇ ದೂರುಗಳಿದ್ದರೂ ಕಾರ್ಡುದಾರರು ಅನುಷ್ಠಾನ ಸಮಿತಿ ಮತ್ತು ಇಲಾಖೆ ಅಧಿಕಾರಿಗಳಿಗೆ ದೂರು ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಹೊಸ ಸೇರ್ಪಡೆ, ಕೆವೈಸಿ ಮಾಡಿಸುವುದು, ಹೆಸರು ಕೈ ಬಿಡುವುದು ಮತ್ತು ಹೊಸ ಕಾರ್ಡ್ ಪಡೆಯುವ ಸಂಬಂಧ ಸರ್ಕಾರದ ಮಾರ್ಗಸೂಚಿಗಳ ಬಗ್ಗೆ ವಿವರಿಸಿದರು.

ಅಡಗೂರು ಗ್ರಾಪಂ ಅಧ್ಯಕ್ಷ ಈರೇಗೌಡ, ಮಾಜಿ ಅಧ್ಯಕ್ಷ ಮಹದೇವ್, ಅಂಬಿಕಾ, ಗಳಿಗೆಕೆರೆ ಪಿಎಸಿಎಸ್ ನಿರ್ದೇಶಕರಾದ ರಾಮಕೃಷ್ಣೇಗೌಡ, ಮಧುಕಿರಣ್, ರಾಜೇಗೌಡ, ಮಲ್ಲೇಶ, ಸುಜೇಂದ್ರ, ಸಂಘದ ಸಿಇಓ ಪುಟ್ಟೇಗೌಡ, ಆಹಾರ ಇಲಾಖೆ ಶಿರಸ್ತೇದಾರ್ ಎಲ್.ಮಂಜುನಾಥ್, ನಿರೀಕ್ಷಕರಾದ ಡಿ.ಕೆ.ಕುಮಾರ್, ಸುರೇಶ್ ಇದ್ದರು.

ಮಲ್ಲೇಶ್ ನಿಧನ



ಮಲ್ಲುಂಡಿ, ಮಾ.25– ಗ್ರಾಮದ ನಿವಾಸಿ, ದಿನಸಿ ವ್ಯಾಪಾರಿ ಮಲ್ಲೇಶ್(46) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಪಿಎಲ್ ಹಂಗಾಮ

ಗುಜರಾತ್ ವಿರುದ್ಧ ಗೆದ್ದ ಪಂಜಾಬ್ ಶುಭಾರಂಭ



ಅಹಮದಾಬಾದ್, ಮಾ.25– ನಾಯಕ ಶ್ರೇಯಸ್ ಅಯ್ಯರ್ ಅವರ ಅರ್ಧಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್ ಗುಜರಾತ್ ಟೈಟಾನ್ಸ್ ವಿರುದ್ಧ 11 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಪ್ರಸಕ್ತ ಸಾಲಿನ ಐಪಿಎಲ್‌ನಲ್ಲಿ ಶುಭಾರಂಭ ಮಾಡಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 243 ರನ್ ಗಳಿಸಿತು. ಈ ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 232 ರನ್ ಗಳಿಸಲಷ್ಟೇ ಶಕ್ತವಾಗಿ 11 ರನ್‌ಗಳ ಸೋಲು ಅನುಭವಿಸಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಶುಭ್‌ಮನ್ ಗಿಲ್ ಹಾಗೂ ಸಾಯಿ ಸುದರ್ಶನ್ ಮೊದಲ ವಿಕೆಟ್‌ಗೆ 61 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 14 ಎಸೆತಗಳಲ್ಲಿ 2 ಬೌಂಡರಿ, 3 ಸಿಕ್ಸರ್ ಒಳಗೊಂಡ 33 ರನ್ ಗಳಿಸಿದ್ದ ಗಿಲ್ ಮ್ಯಾಕ್ಸ್‌ವೆಲ್‌ಗೆ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ನಡೆಸಿದ ಸಾಯಿ ಸುದರ್ಶನ್ 41 ಎಸೆತಗಳಲ್ಲಿ 6 ಸಿಕ್ಸರ್, 5 ಬೌಂಡರಿ ಒಳಗೊಂಡ 74 ರನ್ ಗಳಿಸಿ ಅರ್ಶದೀಪ್ ಸಿಂಗ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ನಂತರ ಬಂದ ಜೋಸ್ ಬಟ್ಲರ್ 54, ಶೆರ್ಫೇನ್ ರುದರ್‌ಫೋರ್ಡ್ 46 ರನ್‌ಗಳಿಸಿ ತಂಡಕ್ಕೆ ಜಯ ತಂದು ಕೊಡಲು ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲ. ಉಳಿದಂತೆ ರಾಹುಲ್ ತೆವಾಟಿಯಾ ಹಾಗೂ ಶಾರುಕ್ ಖಾನ್ ತಲಾ 6 ರನ್ ಗಳಿಸಿದರು. ಪಂಜಾಬ್ ಪರ ಅರ್ಶದೀಪ್ ಸಿಂಗ್ 2, ಮಾರ್ಕೋ ಯಾನ್ಸನ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ಪರ ಪ್ರಭಸಿಮ್ರಾನ್ ಸಿಂಗ್ 5 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಪ್ರಿಯಾಂಶ್ ಆರ್ಯ ಹಾಗೂ ಶ್ರೇಯಸ್ ಅಯ್ಯರ್ 2ನೇ ವಿಕೆಟ್‌ಗೆ 51 ರನ್ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಪ್ರಿಯಾಂಶ್ ಆರ್ಯ 23 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಒಳಗೊಂಡ 47 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ನಾಯಕನಿಗೆ ತಕ್ಕ ಆಟವಾಡಿದ ಶ್ರೇಯಸ್ ಅಯ್ಯರ್ ಗುಜರಾತ್ ಬೌಲರ್‌ಗಳನ್ನು ಮನಬಂದಂತೆ ದಂಡಿಸುವ ಮೂಲಕ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಅಂತಿಮವಾಗಿ ಶ್ರೇಯಸ್ ಅಯ್ಯರ್ 42 ಎಸೆತಗಳಲ್ಲಿ 9 ಸಿಕ್ಸರ್, 5 ಬೌಂಡರಿ ಒಳಗೊಂಡ 97 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಅಜ್ಮತುಲ್ಲಾ ಒಮರ್ಜೈ 16, ಮಾರ್ಕಸ್ ಸ್ಟೋಯಿನ್ಸ್ 20ರನ್ ಗಳಿಸಿ ಔಟಾದರೇ, ಶಶಾಂಕ್ ಸಿಂಗ್ 16 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸ್ ಒಳಗೊಂಡ 44 ರನ್ ಗಳಿಸಿ ಅಜೇಯರಾಗಿ ಉಳಿದರು. ಗುಜರಾತ್ ಪರ ಸಾಯಿ ಕಿಶೋರ್ 3, ಕಗಿಸೋ ರಬಾಡ, ರಶೀದ್ ಖಾನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಶ್ರೇಯಸ್ ಅಯ್ಯರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಹೈದರಾಬಾದ್	1	1	0	0	2
ಬೆಂಗಳೂರು	1	1	0	0	2
ಪಂಜಾಬ್	1	1	0	0	2
ಚೆನ್ನೈ	1	1	0	0	2
ಡೆಲ್ಲಿ	1	1	0	0	2
ಲಕ್ನೋ	1	0	1	0	0
ಮುಂಬೈ	1	0	1	0	0
ಗುಜರಾತ್	1	0	1	0	0
ಕೊಲ್ಕತ್ತಾ	1	0	1	0	0
ರಾಜಸ್ಥಾನ್	1	0	1	0	0

ಇಂದಿನ ಪಂದ್ಯ

ರಾಜಸ್ಥಾನ್ ರಾಯಲ್ಸ್
V/S
ಕೊಲ್ಕತ್ತಾ ನೈಟ್ ರೈಡರ್ಸ್

ಸಮಯ: ಸಂಜೆ 7.30

ಸ್ಥಳ : ಬರ್ಸಾಪರ ಕ್ರಿಕೆಟ್ ಮೈದಾನ, ಗುವಾಹಟಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಖಡ್ಗಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸಲಾರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಯೂರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಅಸ್ತ್ರಂ ದಿ ಸೀಕ್ರೆಟ್ (ತ)	4 ಪ್ರದರ್ಶನಗಳು
ಸಂಗಂ	
ಬರ್ಗೆಟ್ ಬಸ್ಯಾ (ಕ)	4 ಪ್ರದರ್ಶನಗಳು
ಲಿಡೋ	
ಫಾರೆಸ್ಟ್(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.


ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕುವೆಂಪು ಅವರಿಗೆ ಮಾನಸ ಸರೋವರದ ಆಕರ್ಷಣೆ ಜಾಸ್ತಿ; ಅದು 'ಮಾನಸ ಗಂಗೋತ್ರಿ'ಗೆ ನಾಂದಿಯಾಯ್ತು!

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಮತ



ಕೈಲಾಸ ಮತ್ತು ಮಾನಸ ಸರೋವರ ದರ್ಶನದ ಶ್ರವ್ಯ–ದೃಶ್ಯ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮೈಸೂರು,ಮಾ.25(ಎಸ್‌ಪಿಎನ್)– ರಾಷ್ಟ್ರಕವಿ ಕುವೆಂಪು ಅವರಿಗೆ ಮಾನಸ ಸರೋವರದ ಆಕರ್ಷಣೆಯಿಂದಾಗಿ ಮೈಸೂರು ವಿವಿ ಸ್ನಾತಕೋತ್ತರ ಆವರಣಕ್ಕೆ ಮಾನಸಗಂಗೋತ್ರಿ ಎಂದು ನಾಮಕರಣ ಮಾಡಿದ್ದರು ಎಂದು ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ಮೈಸೂರು ಕೃಷ್ಣಮೂರ್ತಿಪುರಂ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್ ಸಹಯೋಗದೊಂದಿಗೆ ಕೈಲಾಸ ಮತ್ತು ಮಾನಸ ಸರೋವರ ದರ್ಶನದ ಶ್ರವ್ಯ–ದೃಶ್ಯ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

ಯಾವುದೇ ಧರ್ಮವಾದರೂ ಅದಕ್ಕೆ ತನ್ನದೇ ಆದ ವೈಶಿಷ್ಟತೆ, ಗುರಿಗಳಿರುತ್ತವೆ. ಇದರ ಭಾಗವಾಗಿ ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿವೆ. ಅದರಲ್ಲಿ ಕೈಲಾಸ ಮಾನಸ ಸರೋವರ ಕೂಡ ಒಂದು. ಕುವೆಂಪು ಅವರು ಮಾನಸ ಸರೋವರದ ಆಕರ್ಷಣೆಯಿಂದಾಗಿ ಮೈಸೂರು ವಿವಿ ಆವರಣಕ್ಕೆ ಮಾನಸ ಗಂಗೋತ್ರಿ ಎಂದು ಹೆಸರಿಟ್ಟಿದ್ದ ಪ್ರಸಂಗವನ್ನು ಎಳೆಎಳೆಯಾಗಿ ವಿವರಿಸಿದರು. ಭಾರತವನ್ನು ನಾವೆಲ್ಲರೂ ಹಿಂದು ರಾಷ್ಟ್ರವೆಂದು ಒಪ್ಪಿಕೊಂಡಿದ್ದೇವೆ. ಈ ಹಿನ್ನಲೆಯಲ್ಲಿ ಕೈಲಾಸ ಮಾನಸ ಸರೋವರದ ಬಗ್ಗೆ ತಿಳಿದುಕೊಳ್ಳುತ್ತಾ ಹೋದರೆ ಅದು ಹಿಂದಿನಿಂದಲೂ ತನ್ನದೇ ಆದ ಪರಂಪರೆ, ಅಸ್ಥಿತ್ವ, ವಿಶಿಷ್ಟತೆಯನ್ನು ಉಳಿಸಿಕೊಂಡು ಬಂದಿದೆ. ಧಾರ್ಮಿಕ ಸ್ಥಳ ಮತ್ತು ಪ್ರವಾಸೋದ್ಯಮವನ್ನು ಬೇರೆ ಬೇರೆ ಆಯಾಮದಲ್ಲಿ ಅಭಿವೃದ್ಧಿಪಡಿಸಲು ನಾವು ಯೋಚನೆ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಧಾರ್ಮಿಕ ಸ್ಥಳಗಳಿಗೆ ಅಪಾರವಾದ ಜನಸ್ತೋಮ ಭೇಟಿ ನೀಡುತ್ತದೆ ಎಂದರೆ ಅಲ್ಲಿ ಅದ್ವಿತೀಯವಾದ ಅಗೋಚರ ಶಕ್ತಿ ಇದ್ದೇ ಇರುತ್ತದೆ. ದೇಶದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಗೊಳಿಸುವುದು ತೀರಾ ಕಷ್ಟಕರ ಎಂಬುದಿದೆ. ಈ ಭಾವನೆಯನ್ನು ಇಂದಿನ ಪ್ರಯಾಗ್ ರಾಜ್ ಕುಂಭಮೇಳ ಸುಳ್ಳುಮಾಡಿದೆ ಎಂದರು.

ಪ್ರಸ್ತುತ ಕೈಲಾಸ ಮಾನಸ ಸರೋವರ ಕಾರ್ಯಕ್ರಮಗಳನ್ನು ಬೇರೆಯದೇ ಆಯಾಮದಲ್ಲಿ ನೋಡಬೇಕು. ಇದರಲ್ಲಿ ಆಧ್ಯಾತ್ಮ ಶಕ್ತಿಯಿದೆ. ಸ್ಥಳದ ಮಹತ್ವವೂ ಮುಖ್ಯವಾಗುತ್ತದೆ. ಧಾರ್ಮಿಕ ಸ್ಥಳಗಳನ್ನೇ ಪ್ರವಾಸೋದ್ಯಮವನ್ನಾಗಿ ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದನ್ನು ಅಧ್ಯಯನ ಮುಖ್ಯ ಎಂದರಲ್ಲದೆ, ಯುವ ಸಮೂಹ ಆಧುನಿಕತೆ ಜೊತೆಗೆ ಮೊಬೈಲ್‌ಗಳಿಗೆ ಜೋತು ಬಿದ್ದು, ಧಾರ್ಮಿಕತೆಯನ್ನು ಮರೆಯುತ್ತಿದ್ದಾರೆ ಎಂದು ಹೇಳಿದರು.

> ಕೈಲಾಸ ಮತ್ತು ಮಾನಸ ಸರೋವರ ಹಿಂದೂಗಳ ಪವಿತ್ರ ಯಾತ್ರಾ ಸ್ಥಳಗಳಲ್ಲೊಂದು. ಇಲ್ಲಿಗೆ ಪ್ರತಿವರ್ಷ ಸಾವಿರಾರು ಮಂದಿ ವೀಕ್ಷಣೆ ಮಾಡುತ್ತಾರೆ. ಈ ಸ್ಥಳ ಸಾಕ್ಷಾತ್ ಭಗವಂತನನ್ನು ನೋಡುವ ಜಾಗ.
> – ಡಾ.ಹೆಚ್.ವಿ.ನಾಗರಾಜ ರಾವ್, ಹಿರಿಯ ಸಾಹಿತಿಗಳು

ವೇದಿಕೆಯಲ್ಲಿ ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್‌ನ ಎಸ್. ರಾಮ ಪ್ರಸಾದ್, ಪ್ರಧಾನಕಾರ್ಯದರ್ಶಿ ಕಿರಣ್ ಸಿಡ್ಲೇಹಳ್ಳಿ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಶಿಕ್ಷಣ ಬಿ.ಆರ್. ಶಿವಕುಮಾರ್ ಸೇರಿದಂತೆ ಇತರರಿದ್ದರು.

ನಟ ಸೋನು ಸೂದ್ ಪತ್ನಿ ಕಾರು ಅಪಘಾತ

ಮುಂಬೈ, ಮಾ.25– ನಟ ಸೋನು ಸೂದ್ ಪತ್ನಿ ಸೊನಾಲಿ ಸೂದ್ ಮತ್ತು ನಾದಿನಿ ಸುನಿತಾ ಅವರು ಪ್ರಯಾಣಿಸುತ್ತಿದ್ದ ಕಾರು ಅಪಘಾತಕ್ಕೀಡಾಗಿದೆ. ನಾಗ್ಪುರದ ವಾರ್ಧಾ ರಸ್ತೆಯ ಫ್ಲೈಓವರ್ ಬಳಿ ಕಾರಿಗೆ ಟ್ರಕ್ ಬಂದು ಗುದ್ದಿದ ಪರಿಣಾಮ ಕಾರಿನ ಮುಂಭಾಗ ಜಖಂಗೊಂಡಿದೆ. ಸೋಮವಾರ ರಾತ್ರಿ 10.30ರ ಹೊತ್ತಿಗೆ ಘಟನೆ ನಡೆದಿದೆ. ಇಬ್ಬರಿಗೂ ಗಂಭೀರ ಗಾಯಗಳಾಗಿದ್ದು, ನಾಗ್ಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಎಎನ್‌ಐ ವರದಿ ತಿಳಿಸಿದೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಮೈಸೂರಿನ ವಿಜಯನಗರ ಸನ್ಮತಿ ಲೇಡೀಸ್ ಫೌಂಡೇಶನ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ವೇಳೆ ಹೈನುಗಾರಿಕೆಯಲ್ಲಿ ಸಾಧನೆ ಮಾಡಿದ ರೈತ ಮಹಿಳೆ ಮಂಗಳಮ್ಮ ಹಾಗೂ ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡರ ಧರ್ಮಪತ್ನಿ ಗೌರಿ ಹರೀಶ್‌ಗೌಡರನ್ನು ಸನ್ಮಾನಿಸಲಾಯಿತು.

ಬೊಮ್ಮಾಯಿ, ಸದಾನಂದಗೌಡ, ವಿಜಯೇಂದ್ರ ಹನಿಟ್ರ್ಯಾಪ್ ಸಿಡಿ ಮುನಿರತ್ನ ಬಳಿ ಇವೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಗಂಭೀರ ಆರೋಪ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದರು.

ಮೈಸೂರು, ಮಾ.25(ಬಿಎಲ್ ಯು)– ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಡಿ.ವಿ.ಸದಾನಂದಗೌಡ, ವಿಜಯೇಂದ್ರ ಸೇರಿದಂತೆ ಹಲವರ ಹನಿಟ್ರ್ಯಾಪ್ ಸಿಡಿಗಳು ಶಾಸಕ ಮುನಿರತ್ನ ಬಳಿ ಇದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ನೂರಕ್ಕೂ ಹೆಚ್ಚು ಸಿಡಿಗಳು ಮುನಿರತ್ನ ಬಳಿ ಇದೆ. ಈ ಹಿನ್ನೆಲೆಯಲ್ಲಿ ತಾವಿರುವ ಮಧುಬಲೆಯ ಸಿಡಿ ಬಹಿರಂಗಗೊಳ್ಳದಂತೆ ಇವರೆಲ್ಲಾ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ ಎಂದು ಹೇಳಿದರು.

ನಿಜವಾಗಿ ಹೇಳಬೇಕೆಂದರೆ ಹನಿಟ್ರ್ಯಾಪ್‌ನ ಪಿತಾಮಹ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಮಾಗಿದ್ದಾರೆ ಮಹಾನ್ ನಾಯಕರನ್ನು ಹನಿಟ್ರ್ಯಾಪ್ ಬಲೆಗೆ ಬೀಳಿಸಿರುವ ಅಮಿತ್ ಶಾ, ಬ್ಲ್ಯಾಕ್‌ಮೇಲ್ ಮಾಡಿ ರಾಜಕಾರಣ ಮಾಡುತ್ತಿದ್ದಾರೆ ಎಂದು ದೂರಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಂವಿಧಾನ ಬದಲಾವಣೆ ಮಾಡಿದ್ದಾರೆಂದು ವಿರೋಧ ಪಕ್ಷಗಳು ಬೊಬ್ಬೆ ಹೊಡೆಯುತ್ತಿವೆ. ಈ ಮೂಲಕ ರಾಜ್ಯದಲ್ಲಿ ಮಾತ್ರವಲ್ಲದೆ ರಾಷ್ಟ್ರ ಮಟ್ಟದಲ್ಲಿ ಕೂಡ ವಿವಾದ ಮಾಡುತ್ತಿದ್ದು, ರಾಜಕೀಯ ಲಾಭ ಪಡೆಯಲು ಮುಂದಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗುತ್ತಿಗೆಯಲ್ಲಿ ಮುಸ್ಲಿಂರಿಗೆ ಶೇಕಡ 4 ರಷ್ಟು ಮೀಸಲಾತಿ ನೀಡುತ್ತಿರುವ ಸರ್ಕಾರದ ಕ್ರಮ ಸಮರ್ಥಿಸಿಕೊಂಡ ಲಕ್ಷ್ಮಣ್ ಅವರು, ಇದರಲ್ಲಿ ಬೇರೆ ಯಾವುದೇ ರಾಜಕಾರಣ ಹಾಗೂ ದುರುದ್ದೇಶವಿಲ್ಲ ಎಂದು ಸ್ಪಷ್ಟಪಡಿಸಿದರು.

ಸಂವಿಧಾನಕ್ಕೆ ತಿದ್ದುಪಡಿ ತರಬಹುದೇ ಹೊರತು, ಬದಲಾವಣೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಈ ಸಂಬಂಧ ಸಂವಿಧಾನದ ಪರಿಚ್ಛೇದ 14 ಮತ್ತು 15 ಸ್ಪಷ್ಟಪಡಿಸುತ್ತದೆ. ದೇಶದ 16 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದ್ದು, ಸಂವಿಧಾನ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಕಿಡಿಕಾರಿದರು.

ಸಂವಿಧಾನ ರಚನಾ ಸಮಿತಿಯಲ್ಲಿ ಡಾ.ಅಂಬೇಡ್ಕರ್ ಅವರು ಇರಬಾರದೆಂದು ಜನಸಂಘದವರು ತೀವ್ರವಾಗಿ ವಿರೋಧಿಸಿದ್ದರು. ಲೋಕಸಭಾ ಚುನಾವಣೆಯಲ್ಲಿ ಡಾ.ಅಂಬೇಡ್ಕರ್ ಸೋಲಿಗೆ ಸಂಘ ಪರಿವಾರದ ಸಾವರ್ಕರ್ ಕಾರಣ. ಈ ಬಗ್ಗೆ ಸ್ವತಃ ಅಂಬೇಡ್ಕರ್ ಅವರೇ ತೀವ್ರ ಬೇಸರದಿಂದ ಪುಸ್ತಕವೊಂದರಲ್ಲಿ ಬರೆದಿದ್ದಾರೆ ಎಂದು ಅದರ ಪ್ರತಿಯನ್ನು ಲಕ್ಷ್ಮಣ ಪ್ರದರ್ಶಿಸಿದರು.

ಮೀಸಲಾತಿ ಬಗ್ಗೆ ಇಷ್ಟು ದಿನ ಇಲ್ಲದ ಪ್ರೀತಿ ಈಗ ಬಿಜೆಪಿ ನಾಯಕರಿಗೆ ಬಂದಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಬಗ್ಗೆ ಬಿಜೆಪಿ ನಾಯಕರಿಗೆ ಯಾವುದೇ ಕಾಳಜಿ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಕಚೇರಿಯ 112 ಐಎಎಸ್ ಅಧಿಕಾರಿಗಳಲ್ಲಿ ಒಬ್ಬ ಕೂಡ ದಲಿತ ಅಧಿಕಾರಿ ಇಲ್ಲ. ಇದು ದಲಿತರ ಬಗ್ಗೆ ಬಿಜೆಪಿ ನಾಯಕರಿಗಿರುವ ಪ್ರೀತಿ ತೋರಿಸುತ್ತದೆ ಎಂದು ವ್ಯಂಗ್ಯವಾಡಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ರಾಮು, ಮಾಧ್ಯಮ ವಕ್ತಾರ ಮಹೇಶ್, ಕಾಂಗ್ರೆಸ್ ಮುಖಂಡ ಎನ್.ಭಾಸ್ಕರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹೆಣ್ಣು ಭ್ರೂಣದಲ್ಲಿದ್ದರೆ ಹತ್ಯೆ, ಹೊರಗೆ ಬಂದರೆ ಅತ್ಯಾಚಾರ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಲೋಲಾಕ್ಷಿ ಆತಂಕ



ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮಂಗಳವಾರ ಅರಿವು ಸಂಶೋಧನಾ ವಿದ್ಯಾರ್ಥಿ ವೇದಿಕೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಿತ್ತು.

ಮೈಸೂರು, ಮಾ.25(ಬಿಎಲ್‌ಯು)– ಹೆಣ್ಣು ಭ್ರೂಣದಲ್ಲಿದ್ದರೆ ಹತ್ಯೆ, ಹೊರಗೆ ಬಂದರೆ ಅತ್ಯಾಚಾರಕ್ಕೊಳಗಾಗುವ ಭಯಭೀತ ಪರಿಸ್ಥಿತಿ ಎದುರಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಆತಂಕ ವ್ಯಕ್ತಪಡಿಸಿದರು.

ನಗರದ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇಂದು ಅರಿವು ಸಂಶೋಧನಾ ವಿದ್ಯಾರ್ಥಿ ವೇದಿಕೆ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಿಳೆಯರ ಮೇಲೆ ಹಿರಿಯ ಹಾಗೂ ಕಿರಿಯ ಪುರುಷರಿಂದ ಅತ್ಯಾಚಾರ ನಡೆಯುತ್ತಿದ್ದು, ಈ ದುಷ್ಕೃತ್ಯ ಕೊನೆಯಾಗಬೇಕು ಎಂದು ಆಗ್ರಹಿಸಿದರು.

ಸಮಾಜದಲ್ಲಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಹೆಣ್ಣಿನಲ್ಲಿ ಗಟ್ಟಿತನ ಇರಬೇಕು. ಇದರಿಂದ ಎಂತಹ ಸಂಕಷ್ಟ ಪರಿಸ್ಥಿತಿ ಇದ್ದರೂ ಹೆಣ್ಣು ಅದನ್ನು ಎದುರಿಸುತ್ತಾಳೆ ಎಂದು ಪ್ರೊ.ಲೋಲಾಕ್ಷಿ ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಪ್ರಾಧ್ಯಾಪಕಿ ಪ್ರೊ.ವಿಜಯಕುಮಾರಿ ಎಸ್.ಕರಿಕಲ್ ಅವರು, ಹೆಣ್ಣು ಮತ್ತು ಗಂಡಿನ ನಡುವಿನ ಅಸಮತೋಲನ ಮರೆಯಾಗಿ, ಹೆಣ್ಣನ್ನು ಗುರಿ ಮಾಡುವ ಅನಿಷ್ಟ ಪರಿಸ್ಥಿತಿಗಳು ದೂರವಾಗಬೇಕು ಎಂದು ಹೇಳಿದರು.

ತಾವು ಉದ್ಯೋಗ ಮಾಡುವ ಸ್ಥಳದಲ್ಲಿ ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಆದರೆ ಬಡತನದ ಕಾರಣ ಅದನ್ನು ವಿರೋಧಿಸಲಾಗದೆ ಸಂಕಷ್ಟದ ಜೀವನ ಮಾಡುತ್ತಿದ್ದಾರೆ ಎಂದು ಸಂಶೋಧನಾ ವಿದ್ಯಾರ್ಥಿ ಎಂ.ಮಹದೇವಪ್ಪ ಹೇಳಿದರು.

ಸಿಂಧೂ ಬಯಲಿನ ನಾಗರಿಕತೆ ಕಾಲದಲ್ಲಿ ಲಿಂಗ ತಾರತಮ್ಯ ಇರಲಿಲ್ಲ. ಅಂದು ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಇತ್ತು. ಆದರೆ ತರುವಾಯ ಬಂದ ಮನುಶಾಸ್ತ್ರದಲ್ಲಿ ಮಹಿಳೆಯರು ಪುರುಷರ ಅಧೀನದಲ್ಲಿರಬೇಕು ಎಂಬ ಸಂಕೋಲೆ ಹಾಕಲಾಯಿತು ಎಂದು ಮತ್ತೊಬ್ಬ ಸಂಶೋಧನಾ ವಿದ್ಯಾರ್ಥಿ ವಜ್ರಮುನಿ ಹೇಳಿದರು.

ಯೂರೋಪ್ ರಾಷ್ಟ್ರಗಳಲ್ಲಿ 19 ಮತ್ತು 20 ನೇ ಶತಮಾನದಲ್ಲಿ ಮಹಿಳೆಯರ ಹಕ್ಕುಗಳಿಗೆ ಹೋರಾಟ ಆರಂಭವಾಯಿತು ತರುವಾಯ ಮತದಾನ, ಹೆರಿಗೆ ಭತ್ಯೆ, ರಜೆ ಸೇರಿದಂತೆ ಹಲವು ಸವಲತ್ತು ದೊರೆಯಿತು. ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ ಹೋರಾಟ ಕೂಡ ಆರಂಭಗೊಂಡಿತು ಎಂದರು. ಸಂಶೋಧನಾ ವಿದ್ಯಾರ್ಥಿ ಸಂಚಾಲಕರಾದ ಪಿ.ಆರ್.ರಂಜಿತ, ಕೆ.ಎಸ್.ಕುಮಾರ್, ಕೆ.ರಂಗನಾಥ್ ಈ ವೇಳೆ ಹಾಜರಿದ್ದರು.

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ.,
ಎನ್. ಮಾಧವರಾವ್ ವೃತ್ತ, ಮೈಸೂರು
ಫೋನ್.ನಂ: 0821-4259665/2520894

ಸಂಖ್ಯೆ : 38/2024-25 ದಿನಾಂಕ: 26.03.2025

ಕೌಂಟರ್ ಕಾಮಗಾರಿಗೆ ಟೆಂಡರ್ ಪ್ರಕಟಣೆ


ಮೈಸೂರು ನಗರದ ಎನ್. ಮಾಧವರಾವ್ ವೃತ್ತದಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕಿನ ನೆಲ ಅಂತಸ್ತಿನ ಕೌಂಟರ್ ಕೆಲಸ ಹಾಗೂ ಇಂಟಿರಿಯರ್ (ಒಳವಿನ್ಯಾಸ) ಕೆಲಸಗಳಿಗೆ ಟೆಂಡರ್‌ಗಳನ್ನು ಕೇಂದ್ರ (CPWD) ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖೆಯ (PWD) ನೋಂದಾಯಿತ ಗುತ್ತಿಗೆದಾರರುಗಳಿಂದ ಕರೆಯಲಾಗಿದೆ. ಆಸಕ್ತ ನೋಂದಾಯಿತ ಗುತ್ತಿಗೆದಾರರುಗಳು ಈ ಪ್ರಕಟಣೆ ಆದ 10 ದಿವಸದೊಳಗೆ ಬ್ಯಾಂಕಿಗೆ ತಮ್ಮ ದರಗಳನ್ನು ನಮೂದಿಸಿ ಸಲ್ಲಿಸಲು ಕೋರಲಾಗಿದೆ.

ಕ್ರ.ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ	ಶೇ 4 ಕೇತು ರೀತಿ ಮೊತ್ತ (EMD)
1.	ಮೈಸೂರು ನಗರದ ಎನ್. ಮಾಧವರಾವ್ ವೃತ್ತದಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕಿನ ಕೌಂಟರ್ ಕಾಮಗಾರಿ ಹಾಗೂ ಇಂಟಿರಿಯರ್ (ಒಳವಿನ್ಯಾಸ) ಕೆಲಸ.	ರೂ. 20,62,282/-	ರೂ..82,491/-

ಷರತ್ತುಗಳು:
1. ಮೇಲ್ಕಂಡ ಕಾಮಗಾರಿಯನ್ನು ಟೆಂಡರ್ ಸಲ್ಲಿಸಲು ನಿಗದಿತ ನಮೂನೆಯಲ್ಲಿ ಕೇಂದ್ರ ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖೆಯ ನೋಂದಾಯಿತ ಇಂಟಿರಿಯರ್ (ಒಳವಿನ್ಯಾಸ) ಕೆಲಸದ ಗುತ್ತಿಗೆದಾರರು ತಮ್ಮ ದೃಢೀಕೃತ ರಹದಾರಿಯೊಂದಿಗೆ ಶೇ 4% ಸೆಕ್ಯೂರಿಟಿ ಹಣದೊಂದಿಗೆ (EMD) ಮೇಲೆ ತಿಳಿಸಿರುವಂತೆ ನಿಗದಿತ ಅವಧಿಯೊಳಗೆ ಸಲ್ಲಿಸಲು ಸೂಚಿಸಿದೆ. ದಿನಾಂಕ 05.04.2025 ಸಂಜೆ 5 ಘಂಟೆಯೊಳಗೆ.
2. ಟೆಂಡರ್ ತೆರೆಯುವ ದಿನಾಂಕ 05.04.2025.
3. ಕಾಮಗಾರಿಯ ಅಂದಾಜು ಪಟ್ಟಿ ಮತ್ತು ಕೆಲಸ ನಿರ್ವಹಿಸುವ ಸ್ಥಳವನ್ನು ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪರಿಶೀಲಿಸಲು ಅವಕಾಶವಿದೆ.
4. ಕಾಮಗಾರಿಯನ್ನು ಗುತ್ತಿದಾರರಿಗೆ ವಹಿಸುವ ಅಧಿಕಾರವನ್ನು ಬ್ಯಾಂಕ್ ಕಾಯ್ದಿರಿಸಿದೆ.
5. ಕಾಮಗಾರಿಯನ್ನು ಅಂದಾಜಿನಲ್ಲಿರುವಂತೆ ಮಾಡಿ ಮುಗಿಸಲು ಕಾಮಗಾರಿಯನ್ನು ವಹಿಸಿದ 60 ದಿನದೊಳಗೆ ಮುಗಿಸಲು ಷರತ್ತು ವಿಧಿಸಲಾಗಿದೆ.
6. ಗುತ್ತಿಗೆ ಪಡೆದ ಗುತ್ತಿಗೆದಾರರು ಸೆಕ್ಯೂರಿಟಿ ಹಣವನ್ನು ಕಾಮಗಾರಿಯನ್ನು ಸಮರ್ಪಕವಾಗಿ ಪೂರೈಸಿದ ನಂತರ ವಾಪಸ್ಸು ನೀಡಲಾಗುವುದು.
7. ಯಾವುದೇ ಮುಂಗಡ ಹಣವನ್ನು ಕಾಮಗಾರಿ ವೇಳೆ ಕೊಡಲಾಗುವುದಿಲ್ಲ.
8. ಈ ವಿಚಾರದಲ್ಲಿ ಯಾವುದೇ ತಕರಾರುಗಳು ಬಂದಲ್ಲಿ ಮೈಸೂರು ನಗರದ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ.
9. ಸಮರ್ಪಕವಾಗಿ ಕಾಮಗಾರಿಯನ್ನು ಪೂರೈಸಿದ ಗುತ್ತಿಗೆದಾರರು ಅರ್ಹ ಸಂಸ್ಥೆಯಿಂದ 3 ನೇ ಪಾರ್ಟಿಯಿಂದ ತಪಾಸಣಾ ವರದಿ ಪಡೆದ ನಂತರ ಬಿಲ್ಲಿನ ಹಣವನ್ನು ಬಿಡುಗಡೆ ಮಾಡಲಾಗುವುದು.
10. ಯಾವುದೇ ಕೇಂದ್ರ ಅಥವಾ ರಾಜ್ಯ ಸರ್ಕಾರದ ಬ್ಯಾಂಕುಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ಕನಿಷ್ಠ 20 ಲಕ್ಷದವರೆಗೆ ಇದೇ ರೀತಿಯ ಕೆಲಸ ಮಾಡಿರುವ ಅನುಭವದ ಬಗ್ಗೆ ದೃಢೀಕರಣ ಪತ್ರವನ್ನು ಲಗತ್ತಿಸಬೇಕು.
11. ಮೇಲ್ಕಂಡ ಷರತ್ತುಗಳಲ್ಲದೇ ಕಾಮಗಾರಿ ನಡೆಯುವ ವೇಳೆ ಕಾಮಗಾರಿಯ ಬಗ್ಗೆ ಬದಲಿ ನಿಲುವನ್ನು ತೆಗೆದುಕೊಳ್ಳುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಸಹಿ/- ಪ್ರ.ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ




ಶ್ರೀಮಾನ್ ಬೆಟ್ಟಸ್ವಾಮಿ ರವರು
(ನಿವೃತ್ತ ವ್ಯವಸ್ಥಾಪಕರು, ಪಿ.ಎಲ್.ಡಿ ಬ್ಯಾಂಕ್, ಹುಣಸೂರು)
(ಶ್ರೀಮತಿ ಲೇ|| ಸಣ್ಣಮ್ಮ ಮತ್ತು ಲೇ|| ಮೋಟೇಗೌಡರ ಮಗ)

ಇವರು ದಿನಾಂಕ 17-03-2025ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 27-03-2025ರ ಗುರುವಾರ ಬೆಳಗ್ಗೆ 11 ಗಂಟೆಗೆ ಸ್ವಗೃಹ ಹೆಮ್ಮನಹಳ್ಳಿ ಗ್ರಾಮ, ಆತಗೂರು ಹೋ||, ಮದ್ದೂರು ತಾ|| ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಪ್ರಮೀಳಾ ಎಂ. ಮಕ್ಕಳು, ಮೊಮ್ಮಕ್ಕಳು ಮತ್ತು ಬಂಧು ಮಿತ್ರರು ಹಾಗೂ ಹೆಮ್ಮನಹಳ್ಳಿ ಗ್ರಾಮಸ್ಥರು
ಮೊ: 9538068383 | 9686230112 ಭೋಜನ: ಮಧ್ಯಾಹ್ನ 12.30ಕ್ಕೆ

ಅಭಿನಂದನೆಗಳು



ಶ್ರೀ ಟಿ.ಎನ್. ಅಶೋಕ್ ಪಟೇಲ್
ಅಧ್ಯಕ್ಷರು,
ಎನ್.ಆರ್. ಪಟೇಲ್ ಎಜುಕೇಷನ್ ಟ್ರಸ್ಟ್, ತಲಕಾಡು.

ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ತಲಕಾಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಸಂಘಕ್ಕೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ **ಶ್ರೀ ಟಿ.ಎನ್. ಅಶೋಕ್ ಪಟೇಲ್** ರವರಿಗೆ ಅಭಿನಂದನೆಗಳು
ಹಾಗೂ ಇವರು ಅಧ್ಯಕ್ಷರಾಗಲು ಸಹಕರಿಸಿದ ಎಲ್ಲಾ ನಿರ್ದೇಶಕರುಗಳಿಗೂ ಅಭಿನಂದನೆಗಳು.

ಶುಭಕೋರುವವರು :
ಶ್ರೀ. ಟಿ.ಆರ್. ಕೃಷ್ಣೇಗೌಡರು
ಅಧ್ಯಕ್ಷರು, ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ ರಿ. ಮೈಸೂರು.
ಹಾಗೂ ಪಟೇಲ್ ರಂಗೇಗೌಡರ ವಂಶಸ್ಥರು. ತಲಕಾಡು.